ಸಂಪುಟ : ೨
ಸಂಚಿಕೆ : ೧೨

ಏಪ್ರಿಲ್ : ೧೯೭೮
ಬಸವಶಕೆ : ೮೭೧

ಕಲ್ಯಾಣ ಕಿರಣ

ಕಲ್ಯಾಣ ಕಿರಣ

ಮಾಸ ಪತ್ರಿಕೆ

ಡಿ ಪ್ರತಿ :
ಂದು ರೂಪಾಯಿ

ವಾರ್ಷಿಕ ಚಂದಾ :
ಹನ್ನೆರಡು ರೂಪಾಯಿ

೧. ನುಡಿನೈವೇದ್ಯ	ಮಾತಾಜಿ	೧
೨. ನಿಮ್ಮ ಅನಿಸಿಕೆ	ಓದುಗರು	೨
೩. ಮಾತೃಹರಕೆ	ಸಂಪಾದಕರು	೩
೪. ವಚನ ನವನೀತ	ಸ್ವಾಮಿ ಲಿಂಗಾನಂದರು	೯
೫. ಸಮಸ್ಯೆ - ಸಮಾಧಾನ	ಸಮಾಧಾನಿ	೧೨
೬. ಬೋಳು ಬಸವನ ಬೊಂತೆ	ಪಿ. ಬಸವಣ್ಣ	೧೫
೭. ಒಂದು ವಚನದ ವಿಶ್ಲೇಷಣೆ	ಮಾತಾಜಿ	೧೭
೮. ಶಿವಯೋಗ ಸಾಮ್ರಾಟ ಅಲ್ಲಮಪ್ರಭು	ಕುಮುದಾ	೨೧
೯. ಅನುಭಾವಿಗಳು ಮತ್ತು ಜ್ಯೋತಿಷ್ಯ ಶಾಸ್ತ್ರ	ಷಣ್ಮುಖಯ್ಯ	೨೯
೦. ವೈರಾಗ್ಯ ನಿಧಿ ಅಕ್ಕಮಹಾದೇವಿ	ಮಾತಾಜಿ	೩೯
೧. ಸ್ಫುರಣ-ಕಿರಣ	ಸಂ : ಮಾತಾಜಿ	೪೩
೨. ಮಾತು ಜ್ಯೋತಿರ್ಲಿಂಗ	ಎಸ್. ನಂಜಾಮರಿ	೪೫
೩. ಬಸವಬೀಡಿನಿಂದ ಆಂಗ್ಲನಾಡಿಗೆ	ಮಾತಾಜಿ	೪೮
೪. ಹರಿಹರ ಕಂಡಂತೆ ಬಸವಣ್ಣ-ಅಕ್ಕಮಹಾದೇವಿ	ಮಾತಾಜಿ	೫೭
೫. ಕಾರ್ಯಕ್ರಮಗಳ ವಿವರ	ಶಿವರಾಯ ಚಂದ್ರಕಂಠಿ	೬೨

ುಖ ಪುಟ : ಶಿವಯೋಗಿಣಿ ಅಕ್ಕಮಹಾದೇವಿ

ಹಿಂಬದಿಯ ಹೊದಿಕೆ : ಹುತಾತ್ಮ ಹರಳಯ್ಯ, ನಾಟಕದ ದೃಶ್ಯ

ಕಲ್ಯಾಣ ಕಿರಣ

ಸಂಪುಟ ೩ : ಎಪ್ರಿಲ್ ೧೯೭೮ : ಸಂಚಿಕೆ ೧೨

ನುಡಿ-ನೈವೇದ್ಯ ಜೋ-ಜೋ ಕವಿ ಕೋಗಿಲೆಗೆ

ಜೋ ಅಕ್ಕಮಹಾದೇವಿ ವೈರಾಗ್ಯ ಮೇರು
ಜೋ ಜೋ ಶರಣ ಜನರ ಕಣ್ಮಣಿಯು ತೇಜ ||ಜೋ....||

ಭುವಿಗಂದು ನೀ ಬಂದೆ ಓಂಕಾರ ತಂದೆಯಿಂ|
ಚೆಲ್ವಿನಂಗವ ಧರಿಸಿ ಲಿಂಗಮ್ಮ ತಾಯಿಯಿಂ
ಬೆಳೆಯುತ್ತ ಬಿದಿಗೆಯ ಚಂದ್ರಮನ ತೆರದಿ
ಇಳೆಯೊಳು ಮೆರೆದಿಯೌ ಪಾರ್ವತಿಯ ತೇಜದಿಂ ||ಜೋ....||

ಉದಮದದ ಯೌವನದ ಸೊಗಸು ವಿಕಸಿತವಾಗೆ
ಹೃದಯವು ತಾನಾಗಿ ಮಲ್ಲಿಕಾರ್ಜುನಗೊಲಿಯೆ
ಮುದಗೊಂಡು ಒಲಿದ ಕೌಶಿಕನ ತೊರೆದು
ಒದವಿ ಧರಿಸಿ ನಡೆದೆ ದಿವ್ಯ ದಿಗಂಬರವ ||ಜೋ....||

ಏರುಂಜವ್ವನದ ಮೇರುವೆ ತರುಣಿಯೇ
ಬರುವ ಬಯಕೆ ಇರಲು ಪತಿಹೆಸರ ಉಸಿರು
ಎಂಬ ಪ್ರಭುವಿನ ಕಟು ಮಾತಿಗೆ ಬೆದರದೆ
ಅಂಬೆ ಉತ್ತರಿಸಿದೆ ಚನ್ನಗೊಲಿದವಳೆಂದು ||ಜೋ...||

ಅನುಭವ ಮಂಟಪದ ಶರಣರ ಅಕ್ಕಾಗಿ
ಮೌನದಿ ಕದಳಿಯ ಸಿರಿಬನವ ಪೊಕ್ಕು
ಧನ್ಯ ಮಾಡಿದೆ ನೀನು ಬಸವ ಧರ್ಮದ ವಾಣಿ
ಮಾನ್ಯತೆಯ ಪಡೆದೆಯೌ ಸಚ್ಚಿದಾನಂದನಲಿ ||ಜೋ....||

—ಮಾತಾಜಿ

ನಿಮ್ಮ ಅನಿಸಿಕೆ



ಪೂಜ್ಯ ಶ್ರೀ ಜಗದ್ಗುರು ಮಾತೆ ಯವರ ಸನ್ನಿಧಾನಕ್ಕೆ ಶಿರಸಾಷ್ಟಾಂಗ ಬಿನ್ನಹಗಳು.

ತಮ್ಮ ಜನ್ಮದಿನೋತ್ಸವದ ಶುಭ ಸಂದೇಶ ಹೊತ್ತುತಂದ ಮಾರ್ಚಿ ಸಂಚಿಕೆ ಓದಿ ಸಂತೋಷಪಟ್ಟೆವು. ಶಿವರಾತ್ರಿಯ ಬಗ್ಗೆ ಬರೆದ ಲೇಖನವಂತೂ ಬಹಳ ಉದ್ಬೋಧಕವಾಗಿದೆ, ಆಚರಣೆಗೆ ಮನ ನೀಯವಾಗಿದೆ. ಇಲ್ಲಿ ಒಂದು ಮನವಿ. ಸಮಸ್ಯೆ - ಸಮಾಧಾನಕ್ಕೆ ವೈಯಕ್ತಿಕ ವಿಷಯಗಳಾದ ಮದುವೆ ಬಗ್ಗೆ ಇತ್ಯಾದಿ ಕೇಳಬಾರದಾಗಿ ಓದುಗರಿಗೆ ಸೂಚಿಸು ತ್ತೇನೆ. ಅಂಥ ಪ್ರಶ್ನೆಗಳಿಗೆ ಉತ್ತರನೀಡುವ ಪತ್ರಿಕೆ ಸಾಕಷ್ಟಿವೆ. ನಮಗೆ ಕಲ್ಯಾಣಕಿರಣ ಧಾರ್ಮಿಕ ಆಹಾರವನ್ನಷ್ಟೇ ಕೊಟ್ಟರೆ ಸಾಕು.

ಹೆಚ್. ಎಂ. ರುದ್ರಾರಾಧ್ಯ.
ಶಿವಮೊಗ್ಗ.

ಪತ್ರಿಕೆಯಲ್ಲಿ ವಿಶೇಷ ಸೆಳತವಿದೆ. ಬಂದ ೩-೪ ದಿವಸಗಳ ವರೆಗೆ ಅತ್ತಿತ್ತ ಈ ಮಗು ಕೈಬಿಡುವುದೇ ಇಲ್ಲ. ನಾನು ಪಾರಾಗಲು ಯತ್ನಿಸಿದರೂ ಅದು ಸೆಳೆಯುತ್ತದೆ. ಜ್ಞಾನವಿಲ್ಲದ ನಮ್ಮ ತಲೆಯಲ್ಲಿ ತತ್ತ್ವ ಜ್ಞಾನ–ಭಕ್ತಿಗಳ ಬೀಜವನ್ನು ಬಿತ್ತಿ, ಕೆಳಗೆ ಬೀಳದಂತೆ ಎಚ್ಚರ ನೀಡುವ ಈ ಚಿರಂತನ ಗುರುವಿಗೆ ನಮೋ ನಮಃ.

ಡೊಂಗರಗಾಂವ. **ನೂತನ್ ಬಾಯಿ.**

ದಿನದಿನಕ್ಕೂ ಮೈತುಂಬಿಕೊಳ್ಳುತ್ತಿರುವ ಕಲ್ಯಾಣಕಿರಣ ನಮ್ಮನ್ನು ದಂಗುಬಡಿಸಿದೆ. ಎಂಥ ಪ್ರೌಢ ಸಂಪಾದಕೀಯ, ತಾತ್ತ್ವಿಕ ಸಮಸ್ಯೆ-ಸಮಾಧಾನ, ಹೃದಯವನ್ನು ಮಥಿಸುವ ವಚನ ನವನೀತ. ಮಾತೃ ಹರಕೆ ಪತ್ರಿಕೆಯ ಜೀವಾಳ. ಗೊ.ರು. ಚ ರವರ ಲೇಖನ ಮನ ಸೆರೆ ಹಿಡಿಯುವ ಪುಂಗಿಯನಾದ, ಮಾತು ಜ್ಯೋತಿರ್ಲಿಂಗ ನಿತ್ಯನೂತನ. ಹೀಗಾಗಿ ಪತ್ರಿಕೆ ಕೈಸೇರು ತ್ತಲೇ ಸಿಹಿ ತಿಂಡಿಯ ಅಂಗಡಿಯ ಮಧ್ಯೆ ನಿಂತ ಮಗುವಿನ ಸಂಭ್ರಾಂತ ಸ್ಥಿತಿ; ಯಾವುದನ್ನು ಮೊದಲು ಕೈಗೆತ್ತಿಕೊಳ್ಳ ಬೇಕೆಂಬ ದಿಗ್ಭ್ರಾಂತಿ. ಅಂತೆಯೇ ನಮ್ಮ ನೆಚ್ಚಿನ ಪತ್ರಿಕೆ ದೀರ್ಘಕಾಲ ಬಾಳಲೆಂಬ ಹಾರೈಕೆ.

ತರೀಕೆರೆ. **ಎಸ್. ನಂಜಾಮರಿ.**

ಮಾತೃಹರಕೆ

ಬಸವ ಜಯಂತಿ ಮತ್ತು ಸಾರ್ವತ್ರಿಕ ರಜೆ

ಇತಿಹಾಸವನ್ನು ಬರೆಯುವುದು ದೊಡ್ಡದಲ್ಲ, ನಿರ್ಮಾಣ ಮಾಡುವುದು ದೊಡ್ಡದು. ನಾಡಿನ ಇತಿಹಾಸವನ್ನು ನಿರ್ಮಿಸುವವರು ಯೋಗಿಗಳು, ತ್ಯಾಗಿಗಳು, ರಾಷ್ಟ್ರವೀರರು, ವಿಜ್ಞಾನಿಗಳು ಮುಂತಾದವರು. ಅಂತೆಯೇ ಎಮರ್ಸನ್ ಹೇಳು ತ್ತಾನೆ: The truest test of civilization is, not the census nor the size of cities, nor the crops; no, but the kind of men the country turns out. ನಾಡು-ನುಡಿ-ಪರಂ ಪರೆಗಳನ್ನು ಕಟ್ಟುವ ಮಹೋನ್ನತ ಜೀವಿಗಳೇ ಅವುಗಳ ಹೆಮ್ಮೆಯ ಆಸ್ತಿ. ಇಂತಹ ವರನ್ನು, ಜಾಗತಿಕ ವಲಯದಲ್ಲಿ ಅತ್ಯುನ್ನತ ಸೇವೆಗೈದ ವಿಶ್ವಮಾನವರನ್ನು, ಮಹೋ ನ್ನತ ಸಂದೇಶಗಳನ್ನು ಕೊಟ್ಟು ಸೂಕ್ತಮಾರ್ಗದರ್ಶಕ ದಾರಿದೀಪಗಳನ್ನು ತಮ್ಮ ಹಿಂದೆ ಉಳಿಸಿ ಹೋಗುವ ಮಹಾಂತರನ್ನು ಗೌರವಿಸಲು ಹಲವು ವಿಧಾನಗಳುಂಟು. ಅವರ ಹೆಸರಿನಲ್ಲಿ ರಾಷ್ಟ್ರೀಯ ಸ್ಮಾರಕಗಳ ನಿರ್ಮಾಣ, ವಸ್ತುಸಂಗ್ರಹಾಲಯಗಳ ರಚನೆ, ಸಾರ್ವ ತ್ರಿಕ ರಜೆ ಘೋಷಣೆ. ಅಂಚೆ ಚೀಟಿ ಪ್ರಕಟಣೆ ಇವೇಮುಂತಾದುವುಗಳು ಮುಖ್ಯವಾದವು.

ಸಾರ್ವತ್ರಿಕ ರಜೆಯನ್ನು ಮಹಾತ್ಮರ ಜಯಂತಿಗೆ ಘೋಷಿಸುವುದರಿಂದ ಅನೇಕ ಸತ್ಪರಿಣಾಮಗಳಿವೆ. ೧. ನಮ್ಮ ನಾಡು–ನುಡಿಗಳ ಇತಿಹಾಸದಲ್ಲಿ ಇಂತಹ ಘನ ವಂತರು ಆಗಿ ಹೋಗಿದ್ದಾರೆ ಎಂಬುದನ್ನು ಪ್ರಜಾಕೋಟಿಗೆ ಪರಿಚಯ ಮಾಡಿ ಕೊಟ್ಟಂತೆ ಆಗುತ್ತದೆ. ೨. ಆ ಮಹಿಮಾನ್ವಿತರು ನಮಗಾಗಿ ಬಾಳಿ, ತ್ಯಾಗಪೂರ್ಣ ಚಂದನದಂತೆ ಸವೆದು ಹೋದುದಕ್ಕೆ ಕೃತಜ್ಞತೆಯ ಸಮರ್ಪಣೆ ಮಾಡಿದಂತೆ ಆಗು ತ್ತದೆ. ೩. ಮಹಾತ್ಮರ ಹೆಸರನ್ನು ಸ್ಮರಿಸಿಕೊಂಡು ಅಂದು ಅವರ ತತ್ತ್ವಗಳನ್ನು ಅರಿತುಕೊಳ್ಳುತ್ತಾ, ಅವರ ಬದುಕನ್ನು ಪಾರಾಯಣ ಮಾಡುತ್ತ ಜಯಂತಿಯನ್ನು ಆಚರಿಸಲು ಅನುಯಾಯಿಗಳಿಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಈ ಎಲ್ಲ ಕಾರಣಗಳಿಗಾಗಿ ಜಯಂತಿಗೆ ಸಾರ್ವತ್ರಿಕ ರಜೆ ಕೊಡುವುದು ಸತ್ಸಂಪ್ರದಾಯ.

ಪ್ರಗತಿಪರ ಸಮಾಜ ಸುಧಾರಕ ಬಸವಣ್ಣ

ನಮ್ಮ ಕರ್ನಾಟಕ ಸರ್ಕಾರವು ಸ್ವಾತಂತ್ರ್ಯಾನಂತರ ಮೂರು ದಶಕಗಳ ಕಾಲ ಆಳಿ ದ್ದರೂ ಕನ್ನಡನಾಡಿನ ಕುಲಪುರುಷ ಬಸವಣ್ಣನವರ ಹೆಸರಿನಲ್ಲಿ ಒಂದು ಸಾರ್ವತ್ರಿಕ ರಜೆ ಮಂಜೂರು ಮಾಡುವ ಮನಸ್ಸು ಮಾಡಿಲ್ಲ, ಧೈರ್ಯ ತಾಳಿಲ್ಲ, ಸೌಜನ್ಯ

ತೋರಿಲ್ಲ. ಕರ್ನಾಟಕದೊಡನೆ ಅವಿಭಾಜ್ಯ, ಅವಿನಾಭಾವ ಸಂಬಂಧ ಹೊಂದಿ ಸಾಹಿತ್ಯ ಕ್ರಾಂತಿಗಳ ಮೂಲಕ ತಾಯಿ ಭಾರತಿಯ ಕಿರೀಟದಂತೆ ಪರಮೋಚ್ಚ ಸ್ಥಾನಕ್ಕೆ ಕನ್ನಡ ನಾಡನ್ನು ಏರಿಸಿದ್ದ ವಿಶ್ವಗುರು ಬಸವಣ್ಣನವರು ಕರ್ನಾಟಕದ ಜನತೆಯ ಕಣ್ಣಿಗೆ ಕಾಣ ದಷ್ಟು ಸಣ್ಣವರೆ?

"ಕರ್ನಾಟಕದಲ್ಲಿ, ಭಾರತದಲ್ಲಿ ಅನೇಕ ಸಾಧು-ಸಂತರು ಆಗಿ ಹೋಗಿದ್ದಾರೆ. ಅವರೆಲ್ಲರ ಜಯಂತಿಗಳಿಗೆ ರಜೆ ಕೊಡುತ್ತಾ ಹೋದರೆ ವರ್ಷವಿಡೀ ಕೊಡಬೇಕಾದೀತು" ಎಂದು ಕೆಲವರು ಆಕ್ಷೇಪಿಸಬಹುದು. ಎಲ್ಲರ ಸಾಲಿನಲ್ಲಿ ಎಲ್ಲರನ್ನೂ ಸೇರಿಸಬಾರದು. ಬಸವಣ್ಣನವರಂಥ ಮಹಾ ಪ್ರವಾದಿಯೋರ್ವನನ್ನು ಕನ್ನಡ ನಾಡು ಅಥವಾ ಭರತ ಭೂಮಿಯಲ್ಲಿ ಹುಡುಕಲು ಸಾಧ್ಯವೇ? "Whatever legend may say about Basava, the fact is fully clear that he is the first Indian free thinker. He can be called the Martin Luther of India" ಎಂದ ಅರ್ಥರ್ ಮೈಲ್ಸ್ ಅಷ್ಟಲ್ಲದೆ ಹೇಳುವರೆ? 1918 ಬಸವ ಜಯಂತಿಯಂದು ಮುಂಬೈಯ Times of India ಪತ್ರಿಕೆ ಬರೆದ ಸಂಪಾ ದಕೀಯ ಬಸವಣ್ಣನ ಬಗ್ಗೆ ನಿದ್ರಿಸುವ ಭಾರತೀಯರನ್ನು ಬಡಿದೆಬ್ಬಿಸುವಂತಿದೆ. ಸರ್ ಜೇಮ್ಸ್ ಕ್ಯಾಂಪ್‌ಬೆಲ್ಲರು ಹೀಗೆ ಬರೆಯುತ್ತಾರೆ:

"ಬಸವಣ್ಣನವರಿಗಿಂತಲೂ ಪೂರ್ವದ ಧಾರ್ಮಿಕ ಹಾಗೂ ಸಮಾಜ ಸುಧಾರಕರು ಧಾರ್ಮಿಕ, ಸಾಮಾಜಿಕ ಮುಂತಾದ ಒಂದೊಂದು ಬಗೆಯ ಸುಧಾರಣೆಗಳತ್ತ ಗಮನ ಹರಿಸಿದರು; ಇಲ್ಲವೇ ಒಂದಕ್ಕೆ ಪ್ರಾಮುಖ್ಯ ಸ್ಥಾನ ನೀಡಿ ಮತ್ತೊಂದನ್ನು ಗೌಣವಾಗಿ ಮಾಡಿದರು; ಕೆಲವೊಮ್ಮೆ ಕೆಲವು ಅಂಶಗಳನ್ನು ಪೂರ್ಣವಾಗಿ ಕಡೆಗಣಿಸಿದರು. ಬಸವಣ್ಣ ನವರ ವೈಶಿಷ್ಟ್ಯವೆಂದರೆ ಅವರು ಅತ್ಯಂತ ಬೃಹತ್ತಾದ ಮತ್ತು ಸರ್ವಾಂಗ ಪರಿಪೂರ್ಣ ಕಾರ್ಯಕ್ರಮವನ್ನು, ಸುಧಾರಣೆಯನ್ನು ಹಮ್ಮಿಕೊಂಡರು. ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಮತ್ತು ಉತ್ಥಾನವನ್ನು ಪ್ರಮುಖ ಧ್ಯೇಯವಾಗಿರಿಸಿಕೊಂಡರು. ಭಾರತದ ಅನೇಕ ಭಾಗಗಳಲ್ಲಿ ಸಮಾಜಾಭಿವೃದ್ಧಿಗಾಗಿ ಈಗ ಕೈಗೊಳ್ಳುವ ವಾರ್ಷಿಕ ಸಮ್ಮೇಳನ ಗಳಾಗಲೀ, ಅಥವಾ ಸುಧಾರಕರ ಪ್ರಯತ್ನಗಳಾಗಲೀ ಬಸವಣ್ಣನವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಲಾರವು. ಇಂದಿನ ಯಾವುದೇ ಭಾರತೀಯ ಸಮಾಜ ಸುಧಾರ ಕರು ಅಂದು ಬಸವಣ್ಣನವರು ನುಡಿದ ತತ್ತ್ವಗಳನ್ನು, ಆಚರಣೆಗೆ ತಂದ ಆದರ್ಶ ಗಳನ್ನು ಅನುಷ್ಠಾನಕ್ಕೆ ತರಲೆಳಸಿದರೆ ಸಾಕು."

ಅಖಂಡ ಭಾರತದಲ್ಲೇ ಬಸವಣ್ಣನವರಂಥ ವ್ಯಾಪಕ ಸುಧಾರಣಾ ಯೋಜನೆ ಕೈಗೊಂಡ ಸಂತ-ಸುಧಾರಕ ಮತ್ತೊಬ್ಬನಿಲ್ಲ. ಪಾಶ್ಚಾತ್ಯ ವಿಚಾರ ಧಾರೆಗಳ ಪ್ರಭಾವ ಕ್ಕೊಳಗಾಗಿ ಅಷ್ಟಿಷ್ಟು ಸುಧಾರಣೆ ಕೈಗೊಂಡವರು ಇತ್ತೀಚಿನ ಶತಮಾನಗಳಲ್ಲಿ ದೊರೆಯ

ಬಹುದು. ಆದರೆ ಯಾವುದೇ ಅನ್ಯಧರ್ಮ-ಸಂಸ್ಕೃತಿಗಳ ಪ್ರಭಾವವು ಸೋಂಕದ ಕಾಲದಲ್ಲೇ, ೮೦೦ ವರ್ಷಗಳ ಹಿಂದೆಯೇ, ಬಸವಣ್ಣನವರು ಪ್ರಗತಿಪರ ವಿಚಾರ ಧಾರೆಯಲ್ಲಿ ಮುನ್ನಡೆದಿರುವುದು ಅವರ ತೀಕ್ಷ್ಣ ಬುದ್ಧಿಮತ್ತೆಯನ್ನು, ಸಮಾಜದ ಬಗ್ಗೆ ಅವರಲ್ಲಿ ಇರುವ ಅಪಾರ ಕಳಕಳಿಯನ್ನು ಅಭಿವ್ಯಕ್ತಗೊಳಿಸುತ್ತದೆ. ಆದ್ದರಿಂದ ಸಮಾಜವಾದ, ಸಮತಾವಾದಗಳ ಬಗ್ಗೆ ಅಚಲ ವಿಶ್ವಾಸ ತಾಳಿರುವ ಸರ್ಕಾರವು ಭಾರತೀಯ ಸಮತಾವಾದದ ಆದ್ಯನಾದ ಬಸವಣ್ಣನ ಬಗ್ಗೆ ಗೌರವ ಸಲ್ಲಿಸಬೇಕಾದುದು ಪ್ರಮುಖ ಕರ್ತವ್ಯವೆನಿಸುತ್ತದೆ.

ಕನ್ನಡ ನಾಡಿನಲ್ಲಿ ಬಸವಣ್ಣನವರ ಅನುಯಾಯಿಗಳಿರುವಷ್ಟು ಮತ್ತಾರ ಅನು ಯಾಯಿಗಳೂ ಇಲ್ಲ. ಈ ಅನುಯಾಯಿಗಳಲ್ಲಿ ಎರಡು ಪ್ರಕಾರ; ಧರ್ಮಾನು ಯಾಯಿಗಳು ಮತ್ತು ತತ್ತ್ವಾನುಯಾಯಿಗಳು ಎಂದು; ಬಸವಣ್ಣನವರು ಸಂಸ್ಥಾಪಿಸಿದ ನೂತನ ಧರ್ಮದ ಸಂಸ್ಕಾರ ಹೊಂದಿ, ಅವರು ನೀಡಿದ ಒಂದು ಧಾರ್ಮಿಕ ಸಂವಿಧಾನ ದಂತೆ ನಡೆಯುವವರು ಬಸವಣ್ಣನವರ ಧರ್ಮಾನುಯಾಯಿಗಳು. ಅನೇಕ ವಿಚಾರವಾದಿ ಗಳು, ಸಮತೆಯ ಆರಾಧಕರು, ಕ್ರಾಂತಿಕಾರಿ ಮನೋಭಾವದವರು ಧರ್ಮ ಸಂಸ್ಕಾರ ಪಡೆದುಕೊಳ್ಳದೆಯೂ ಬಸವಣ್ಣನವರ ತತ್ತ್ವಗಳನ್ನು ಮನ್ನಿಸುತ್ತಾರೆ, ಅವರ ವ್ಯಕ್ತಿತ್ವ ವನ್ನಾರಾಧಿಸುತ್ತಾರೆ. ಅವರು ಕಟ್ಟಬಯಸಿದ್ದ ಕಲ್ಯಾಣರಾಜ್ಯದ ಪುನಃ ಸ್ಥಾಪನೆಯಾಗ ಬೇಕೆಂದು ಹಂಬಲಿಸುತ್ತಾರೆ. ಇವರು ತತ್ತ್ವಾನುಯಾಯಿಗಳು. ಇಂಥ ವಿಚಾರವಾದಿಗಳ ಗುಂಪು ಕಾರ್ಮಿಕರು, ಸಾಹಿತಿಗಳು, ಸಂಗೀತಗಾರರು, ಸಮಾಜಸುಧಾರಕರು, ಜನತಾ ಸೇವಕರು ಎಲ್ಲರಲ್ಲಿಯೂ ವ್ಯಾಪಕವಾಗಿದೆ. ಹೀಗಿದ್ದಾಗ ಎಲ್ಲರಿಗೂ ಪೂಜ್ಯರಾದ, ಎಲ್ಲರಿಗೂ ಬೇಕಾದ ಮಹಾತ್ಮನ ಬಗ್ಗೆ ಕರ್ನಾಟಕ ಸರ್ಕಾರವು ಸಾರ್ವತ್ರಿಕ ರಜೆ ದಯಪಾಲಿಸದಿದ್ದರೆ ಬಹುದೊಡ್ಡ ಕರ್ತವ್ಯಲೋಪವಾದಂತೆ ಆಗುತ್ತದೆ.

ತಮಿಳು ನಾಡಿನವರಿಗೆ ತಮ್ಮ ನಾಡು-ನುಡಿ-ಪರಂಪರೆಗಳ ಬಗ್ಗೆ ಅತುಳ ವಿಶ್ವಾಸ, ಅಭಿಮಾನ. ವ್ಯಕ್ತಿಗತ, ಪಕ್ಷಗಳ ಭಿನ್ನಾಭಿಪ್ರಾಯ-ತಿಕ್ಕಾಟಗಳೇನೇ ಇರಲಿ ತಾವೆಲ್ಲರೂ ಒಂದು ಪರಂಪರೆಯವರೆಂಬ ಅಭಿಮಾನ. ಹೀಗಾಗಿ ತಮಿಳುನಾಡಿನ ನಗರ-ಗ್ರಾಮ ಗಳಲ್ಲಿ ತಮ್ಮ ಪೂರ್ವಜರ ಸ್ಮಾರಕ, ಪುತ್ಥಳಿ ಮುಂತಾದುವನ್ನು ಕಾಣುವೆವು. ಮದ್ರಾಸ್ ಸಮುದ್ರ ದಂಡೆಯ ಮೇಲೆ ಓಡಾಡಿದರೆ ತಮಿಳು ಪರಂಪರೆಯ ಸಮಗ್ರ ದರ್ಶನ. ತಮಿಳು ಸಂಸ್ಕೃತಿಯ ಪುನರುತ್ಥಾನಕ್ಕಾಗಿ ಹೋರಾಡಿದ "ಅಣ್ಣಾ"ದೊರೈ ಸಮಾಧಿ ಕೃತಜ್ಞತೆಯ ಚಿರಸ್ಮಾರಕ. ಹೀಗಿದ್ದಾಗ ಮಾನವ ಸ್ವಾತಂತ್ರ್ಯ ಸಾರಿದ "ಅಣ್ಣಾ" ಬಸವಣ್ಣನಿಗೆ ಅವನ ಪಥದಲ್ಲಿ ಸಾಗಬಯಸುವ ಇಂದಿನ ಸರ್ಕಾರವು ಗೌರವ ನೀಡಿ ಅಗ್ರಪೂಜೆ ಸಲ್ಲಿಸಬೇಕಾದುದು ಅವಶ್ಯಕ. ಬಸವಣ್ಣನವರು ಜನ್ಮಿಸಿದ್ದು ಕಮ್ಮೆ ಕುಲದ ಶೈವಬ್ರಾಹ್ಮಣರಲ್ಲಿ. ಹೋರಾಡಿದ್ದು ತಮ್ಮಂತೆಯೇ ಎಲ್ಲ ಜಾತಿಗಳ

ವರಿಗೂ ಸಮಾನ ಸೌಲಭ್ಯ ದೊರೆಯಬೇಕೆಂದು. ಸಂಸ್ಥಾಪಿಸಿದ್ದು ನೂತನ ಧರ್ಮವನ್ನು; ಪ್ರಚಾರಮಾಡಿದ್ದು ವಿಶಾಲ ಮಾನವೀಯ ತತ್ತ್ವಗಳನ್ನು! ಹೀಗಿದ್ದಾಗ ಅವರು ಯಾರಿಗೆ ಬೇಡ ? ಅವರು ಯಾರ ಸ್ವತ್ತಲ್ಲ ? 'ಬಸವಣ್ಣನವರು ನಮ್ಮವರು, ಉಳಿದವರಿಗೆ ಸಂಬಂಧವಿಲ್ಲ' ಎಂಬ ತಿಳುವಳಿಕೆ ಅವರ ಅನುಯಾಯಿಗಳಲ್ಲಿದ್ದರೆ ಅದು ದುರಭಿಮಾನ. "ಬಸವಣ್ಣನವರು ಲಿಂಗಾಯತ ಸಮಾಜಕ್ಕೆ ಮಾತ್ರ ಸಂಬಂಧ ನಮಗಲ್ಲ" ಎಂಬ ತಿಳುವಳಿಕೆ ಉಳಿದವರಲ್ಲಿದ್ದರೆ ಅದು ಅಜ್ಞಾನ.

"ಜಾತ್ಯತೀತ ಸಮಾಜ ರಚನೆಯಾಗಬೇಕು. ಜಾತಿ ವರ್ಗ ರಹಿತ ಸಮಾಜವೇ ನಮ್ಮ ಸಂವಿಧಾನದ ಗುರಿ" ಎಂದು ಪ್ರಯತ್ನಿಸುವವರಿಗೆ ಆದಿ ಗುರು, ಪ್ರಥಮ ಸಮತಾವಾದಿ ಬಸವಣ್ಣ. "ದುಡಿಮೆ ನಾಡಿನ ಬೆನ್ನೆಲುಬು; ಶ್ರಮಿಕರಿಗೆ ಗೌರವ ಕೊಡಬೇಕು; ಮಾನವನನ್ನು ಕಾಯಕದ ಆಧಾರದ ಮೇಲೆ ಮೇಲು-ಕೀಳೆನ್ನಬಾರದು...." ಎಂದು ಕಾಯಕ ಜೀವಿಗಳ ಪರವಾಗಿ ಹೋರಾಡಿದ ಬಸವಣ್ಣನಿಗೆ ಕಾರ್ಮಿಕ ವರ್ಗದಲ್ಲಿ ಅಗ್ರಪಟ್ಟ. "ವಿಶಾಲವಾದ, ಶ್ರೇಷ್ಠ ತತ್ತ್ವಗಳನ್ನು ನೀಡಿದ, ಕ್ರಾಂತಿಕಾರಿ ಯುಗ ಪುರುಷ ಬಸವಣ್ಣ ಹುಟ್ಟಿದ್ದು ನಮ್ಮಲ್ಲಿ" ಎಂಬ ಹೆಮ್ಮೆ ಬ್ರಾಹ್ಮಣರಲ್ಲಿರಬೇಕು. ಹುಟ್ಟಿದ್ದು ಬ್ರಾಹ್ಮಣ ಕುಲದಲ್ಲಾದರೂ ಜಗ ಬದುಕಲೆಂದು, ಜನ ಬದುಕಲೆಂದು ಹೊಸಧರ್ಮವನ್ನು, ಸಂಸ್ಕಾರವನ್ನು ನೀಡಿ ನಮ್ಮನ್ನು ಉದ್ಧರಿಸಿದ ವ್ಯಕ್ತಿ ಧರ್ಮಗುರು ಬಸವಣ್ಣನೆಂಬಭಿಮಾನ ಲಿಂಗಾಯತರಿಗಿರಬೇಕು. ಸಮಾಜದಲ್ಲಿ ಧರ್ಮವು ಕೇವಲ ಕೆಲವರ ಸೊತ್ತಾಗಿದ್ದಾಗ ಅದನ್ನು ಸರ್ವರ, ಜನಸಾಮಾನ್ಯರ ಮನೆಯನ್ನು ಬೆಳಗಲು ಅನುವು ಮಾಡಿಕೊಟ್ಟು, ಜನ್ಮದಿಂದ ಶೂದ್ರ, ಅಸ್ಪೃಶ್ಯ ಎಂಬ ಬಿರುದುಗಳನ್ನು ಹೊಡೆದು ಹಾಕಿ ಧಾರ್ಮಿಕ ಸಂಸ್ಕಾರಗಳನ್ನು ಸಮಾನವಾಗಿ ಒದಗಿಸಿಕೊಟ್ಟ ಶೂದ್ರೋದ್ಧಾರಕನೆಂಬ ಅಭಿಮಾನ ಶೂದ್ರರಲ್ಲಿರಬೇಕು. ಕೇವಲ ಮುಟ್ಟುವ-ತಟ್ಟುವ ಸ್ಪೃಶ್ಯಾಸ್ಪೃಶ್ಯ ಭಾವವನ್ನು ತೊಡೆದುದಲ್ಲದೇ, ಕೇವಲ ಅಸ್ಪೃಶ್ಯರನ್ನು ಹರಿಜನರೆಂದೋ, ಹರಜನರೆಂದೋ ನಾಮಾಂತರ ಮಾಡದೆ ಧರ್ಮ ಸಂಸ್ಕಾರದಿಂದ ಗುರುತ್ವಕ್ಕೆ ಏರಿಸಿದ ಅಸ್ಪೃಶ್ಯೋದ್ಧಾರಕ ಬಸವಣ್ಣನೆಂಬ ಅಭಿಮಾನ ಅವರಲ್ಲಿ ಬೆಳೆಯಬೇಕು. ಬಹುದೇವೋಪಾಸನೆ, ಮೂಢನಂಬಿಕೆ, ಜಾತಿಭಾವದ ಕೊಳೆ ಕಳೆದು ಹಿಂದೂ ಸಮಾಜವನ್ನು ಸಂಘಟಿಸಿದ ಉದ್ಧಾರಕನೆಂದು ಸಮಸ್ತ ಹಿಂದುಗಳು ಭಾವಿಸಬೇಕು. ಪಾಪಯೋನಿಜರೆಂದು, ಅಬಲೆಯರೆಂದು, ಧರ್ಮ ಸಂಸ್ಕಾರಕ್ಕೆ ಅನರ್ಹರೆಂದು ಪಟ್ಟಗಟ್ಟಿದ ಸ್ತ್ರೀಯನ್ನು ಈ ಕೀಳರಿಮೆಯ 'ಸಿಂಹಾಸನ' ದಿಂದಿಳಿಸಿ ಸೃಷ್ಟಿಯ ಅರ್ಧಭಾಗವಾದ ಸ್ತ್ರೀಯೂ ಪುರುಷನಷ್ಟೇ ಸಮಾನಾವಕಾಶಕ್ಕೆ ಅರ್ಹಳೆಂದು ಸಾರಿ, ಪೂಜೆಗೈವ ಸ್ವಾತಂತ್ರ್ಯ ಮತ್ತು ಇನ್ನೊಬ್ಬರಿಗೆ ದೀಕ್ಷೆ ನೀಡುವ ಗುರುತ್ವವನ್ನು ದಯಪಾಲಿಸಿದ ಸ್ತ್ರೀಕುಲೋದ್ಧಾರಕನೆಂಬ ಅಭಿಮಾನ ಮಹಿಳಾ ಕುಲದಲ್ಲಿ ಮೂಡಬೇಕು. ಕನ್ನಡ ಸಾಹಿತ್ಯದಲ್ಲಿ

ವಚನ ಸಾಹಿತ್ಯವೆಂಬ ನೂತನ ಪ್ರಾಕಾರವನ್ನೇ ಸೃಷ್ಟಿಸಿ, ಅದನ್ನು ಶ್ರೀಮಂತ, ಧೀಮಂತ ಗೊಳಿಸಿದ ಕನ್ನಡ ಸಾಹಿತ್ಯ ನಿರ್ಮಾಪಕನೆಂದು, ತನ್ನ ನಂತರ ಒಂದು ಪರಂಪರೆಯನ್ನೇ ಸಾಹಿತ್ಯದಲ್ಲಿ ಸೃಷ್ಟಿಸಿದ ಸಾಹಿತಿಗಳ ನಿರ್ಮಾಪಕನೆಂದೂ ಕವಿ-ಸಾಹಿತಿಗಳು ಗೌರವಿಸಬೇಕು.

ವಿಶಿಷ್ಟವಾದ ರಾಜಕೀಯ ತತ್ತ್ವಜ್ಞಾನವನ್ನು ಬೋಧಿಸಿ, ಅನುಷ್ಠಾನಕ್ಕೆ ತಂದು 'ನೀಡುವವರುಂಟು ಬೇಡುವವರಿಲ್ಲದ ಕಾರಣ ನಾನು ಬಡವನಾದೆ' ಎಂದ ಸಮೃದ್ಧಿಯನ್ನು ಸಾಧಿಸಿ, ಕಾಯಕದ ಹಾಲಿನ ಹೊಳೆಯಲ್ಲಿ ದಾಸೋಹದ ತೆಪ್ಪ ತೇಲುವ' ಸಂಪದ್ಭರಿತ ರಾಷ್ಟ್ರವನ್ನು ಕಟ್ಟಿದ ಧೀಮಂತ ರಾಜಕಾರಣ ಮುತ್ಸದ್ಧಿ (Statesman). ಬಸವಣ್ಣನವರು ಮಾನವತೆಗೆ ಬೆಲೆ ಕೊಡುವ ದಯಾಗುಣವನ್ನು, ವೈಚಾರಿಕ ಪ್ರಜ್ಞೆಯನ್ನು ಉದ್ದೀಪಿಸುವ ಅಪೂರ್ವ ಕಳಕಳಿಯನ್ನು ಹೊಂದಿ ಇಡೀ ಮನುಕುಲದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿಶ್ವಮಾನವನೆಂದು ಮನುಜಕುಲವೇ ಗೌರವಿಸಬೇಕು. ಅಂತೂ ಇಂತಹ ವೈವಿಧ್ಯಮಯ ವ್ಯಕ್ತಿತ್ವ ಹೊಂದಿ, ಬಹುಮುಖ ಕ್ರಾಂತಿ ಮಾಡಿ, ಸರ್ವರಿಗೆ ಪೂಜಾರ್ಹನಾದ ಬಸವಣ್ಣ ಹುಟ್ಟಿದ್ದು ಕನ್ನಡದ ಮಡಿಲಲ್ಲಿ ಎಂಬ ಹೆಮ್ಮೆ ಎಷ್ಟಿದ್ದರೂ ಸ್ವಲ್ಪವೇ! ಹೀಗಿರುವಾಗ ಸರ್ಕಾರವು ತನ್ನ ಆತ್ಮಗೌರವ ರಕ್ಷಣೆಯ ದೃಷ್ಟಿಯಿಂದಲೋ, ತನ್ನ ಪ್ರಮುಖ ಕರ್ತವ್ಯವೆಂಬ ಭಾವದಿಂದಲೋ, ತಾನು ಅದೇ ದಾರಿಯನ್ನು ತುಳಿಯುತ್ತಿದ್ದೇನೆಂಬ ಕೃತಜ್ಞತೆಯಿಂದಲೋ ಬಸವ ಜಯಂತಿಗೆ ಸಾರ್ವತ್ರಿಕ ರಜೆ ಕೊಡಬೇಕಾದುದು ಅವಶ್ಯಕ. ಇದರಲ್ಲಿ ಯಾವುದೇ ರಾಜಕೀಯ ಸಲ್ಲದು.

ಐಚ್ಛಿಕ ರಜೆಯನ್ನು (optional holiday) ಕರ್ನಾಟಕ ಸರ್ಕಾರ ಬಸವ ಜಯಂತಿಯಂದು ಕೊಡಮಾಡಿದೆ. ಅಂದರೆ ಆಚರಿಸಲು ಬಯಸುವ ಯಾವನೇ ಆದರೂ ಅದನ್ನು ಪಡೆಯಬಹುದು. ಆದರೆ ಎಷ್ಟೋ ಜನ ಇದರ ಅರಿವು ಇಲ್ಲದಿರುವವರು ಉಪಯೋಗಿಸಿಕೊಳ್ಳದಿರಲೂ ಬಹುದು. ಎರಡನೆಯದಾಗಿ, ಸಾರ್ವತ್ರಿಕ ರಜಾ ದಿನವಾದರೆ ಉಳಿದವರೂ ಕುತೂಹಲದಿಂದ ದಿನದ ಮಹತ್ವವನ್ನರಿತು, ಅಂದು ವಿಚಾರವಂತರು ಬಸವಣ್ಣನವರ ತತ್ತ್ವಗಳ ಅಧ್ಯಯನದಲ್ಲಿ ಮತ್ತು ಸದ್ಭಕ್ತರು 'ಗುರುಪೂಜೆ'ಯಲ್ಲಿ ತಲ್ಲೀನರಾಗಲು ಸಾಧ್ಯತೆ ಹೆಚ್ಚುತ್ತದೆ.

ಈಗ ಕರ್ನಾಟಕದ ಜನತೆ ಆಶಾದಾಯಕ ಭಾವದಿಂದ ಪ್ರಸ್ತುತ ಸರ್ಕಾರದಿಂದ ಬಸವ ಜಯಂತಿ ರಜೆಯ ಘೋಷಣೆ ನಿರೀಕ್ಷಿಸುವ ಸಾಧ್ಯತೆ ಇದೆ. ಏಕೆಂದರೆ ಮುಖ್ಯಮಂತ್ರಿಗಳಾದ ದೇವರಾಜ ಅರಸರು ವಿಶ್ವಗುರು ಬಸವಣ್ಣನವರ ವ್ಯಕ್ತಿತ್ವದಲ್ಲಿ ಮತ್ತು ತತ್ತ್ವಗಳಲ್ಲಿ ಶ್ರದ್ಧೆ ತಾಳಿದವರು. ವೀರಶೈವ ಮಹಾಸಭೆಯನ್ನುದ್ದೇಶಿಸಿ ಭಾಷಣ ಮಾಡುವಾಗ ಹೀಗೆ ಹೇಳಿದ್ದಾರೆ: "In the present day of democracy

and socialism there is a great need for Basava's teachings. His humanism and his ideals based on realism nourish the freedom of a free nation. His message is worthy of following in individual, social, cultural, political and economic fields. He had no caste, class, individual, linguistic, territorial, national animosity. He was a humanist. He impressed his personality on both material and spiritual problems. **His success** was due to the fact that he practised what he preached. That is why he is universally accepted. If people were following his teachings there would have been no inflation, no corruption, no labour-management conflicts, no looting, riots, mutual bickerings."

Basava Journal Feb. 1978, P: 79

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸರಿಗೆ ವಿಶ್ವಗುರು ಮಾನವತಾವಾದಿ ಬಸವಣ್ಣನವರ ತತ್ತ್ವ, ಜೀವನ, ಸಂದೇಶಗಳಲ್ಲಿ ವಿಶ್ವಾಸವಿರುವುದೇ ಅಲ್ಲದೆ, ಅಲ್ಪ ಸಂಖ್ಯಾತರ, ಶೋಷಿತರ, ದುರ್ಬಲ, ದೀನ-ದಲಿತರ ಉದ್ಧಾರವನ್ನೇ ಗುರಿಯಾಗಿರಿಸಿಕೊಂಡವರು. ಬಸವಣ್ಣನವರು ಧ್ಯೇಯವಾಗಿರಿಸಿಕೊಂಡಿದ್ದ ಕಲ್ಯಾಣರಾಜ್ಯದ ಕನಸನ್ನು ನನಸು ಮಾಡಲು ಸಂಕಲ್ಪ ಹೊತ್ತವರು. ಮೂರನೆಯದಾಗಿ ಶ್ರೀ ದೇವರಾಜ ಅರಸರು ಛಲವಂತರು. ತಾವು ಸತ್ಯವೆಂದು, ಶ್ರೇಯಸ್ಕರವೆಂದು ನಂಬಿದುದನ್ನು ಆಚರಣೆಗೆ ತಂದೇ ಬಿಡುವವರು. ನಮ್ಮ ನಾಡಿಗೆ ಕರ್ನಾಟಕವೆಂದು ಹೆಸರಿಸುವಲ್ಲಿ ನಾವಾಗಲೇ ಅದನ್ನು ಕಂಡಿದ್ದೇವೆ. ಎಷ್ಟೋ ವರುಷಗಳಿಂದ ಉಯ್ಯಾಲೆಯಾಡುತ್ತಿದ್ದ ಆ ಸಮಸ್ಯೆಯನ್ನು ದಿಟ್ಟ ಹೆಜ್ಜೆಯಿಟ್ಟು ಒಂದು ನೆಲೆಗೆ ನಿಲ್ಲಿಸಿದಂತೆ, ಸಕಲ ಮಾನವರ ಸರ್ವಾಂಗೀಣ ಉತ್ಥಾನಕ್ಕೆ ಹೋರಾಡಿದ ಬಸವಣ್ಣನವರ ಜಯಂತಿಗೆ-ಪ್ರತಿ ವರ್ಷವೂ ವೈಶಾಖಮಾಸದ ಅಕ್ಷಯ ತೃತೀಯದಂದು ಬರುವ, ಈ ವರುಷ ಮೇ ೯ ರಂದು ಬರಲಿರುವ ಹಬ್ಬಕ್ಕಾಗಿ; ಸಾರ್ವಜನಿಕ ರಜೆ ನೀಡಿ, ಆ ಮಹಾಪುರುಷನಿಗೆ ಅಗ್ರ ತಾಂಬೂಲ ಸಲ್ಲಿಸಿ, ಆಶೀರ್ವಾದ ಪಡೆಯುವಂತಾಗಲೆಂದು ಆಶಿಸೋಣವೆ ?

ಮಾತೆ ಮಹಾದೇವಿ.

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆಬೆಳೆಯು ನಾಡೊಳಗೆ ।ನಿಜದೀಪ
ಬಸವನೇ ಸಗ್ಗ ಸೋಪಾನ ॥

—ಜನಪದ ಕವಿ



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು.

ಅಂಗೈಯೊಳಗಣ ಲಿಂಗವ ನೋಡುತ್ತ
ಕಂಗಳು ಕಡೆಗೋಡಿವರಿಯುತ್ತ, ಸುರಿಯುತ್ತ ಎಂದಿಪ್ಪೆನೋ ?
ನೋಟವೇ ಪ್ರಾಣವಾಗಿ ಎಂದಿಪ್ಪೆನೋ ?
ಕೂಟವೇ ಪ್ರಾಣವಾಗಿ ಎಂದಿಪ್ಪೆನೋ ?
ಎನ್ನಂಗ ವಿಕಾರದ ಸಂಗವಳಿದು
ಕೂಡಲ ಸಂಗಯ್ಯ ಲಿಂಗ ಲಿಂಗವೆನ್ನುತ್ತ. ಬ.ಷ.ವ. ೪೮೪

ನೇತ್ರವನ್ನೇ ಪ್ರಮುಖ ಕೇಂದ್ರವನ್ನಾಗಿರಿಸಿಕೊಂಡು ಬಹ್ವಗ್ರವಾಗಿ ಹರಿಯುವ ಮನವನ್ನು ಏಕಾಗ್ರಮಾಡುವ ಬಸವರೂಪಿತ ಶಿವಯೋಗದ ಜೀವಾಳ ತ್ರಾಟಕ ಅಥವಾ ದೃಷ್ಟಿಯೋಗ. ಹಠ ಮತ್ತು ಕುಂಡಲಿನಿ ಯೋಗಗಳಲ್ಲಿ ಪ್ರಾಣನಿಯಂತ್ರಣ, ಭೇದನ ಮುಖ್ಯವಾದರೆ ರಾಜಯೋಗದಲ್ಲಿ ಧ್ಯಾನವೇ ಮುಖ್ಯ. ಜ್ಞಾನಯೋಗದಲ್ಲಿ ಆ ಸ್ವರೂಪ ಚಿಂತನೆಯು ಮುಖ್ಯವಾದರೆ, ಭಕ್ತಿಯೋಗದಲ್ಲಿ ನವವಿಧ ಭಕ್ತಿಯೇ ಪ್ರಮುಖ. ಕರ್ಮಯೋಗದಲ್ಲಿ ನಿಷ್ಕಾಮ ಕರ್ಮವೇ ಪ್ರಧಾನ. ಈ ಐದು ಯೋಗಗಳ ಮುಖ್ಯಾಂಶಗಳನ್ನು ಅಳವಡಿಸಿಕೊಂಡ ಶಿವಯೋಗವು ಕರ್ಮ, ಭಕ್ತಿ, ಜ್ಞಾನ, ಯೋಗ, ಧ್ಯಾನವೆಂಬ ಐದು ಕುದುರೆಗಳನ್ನು ಹೊಂದಿದ ರಥದಂತೆ! ಶಿವಯೋಗ ಸಾಧನೆಯಲ್ಲಿ ಮುಖ್ಯವಾದ ಅಂಗ ಕಣ್ಣು.

ಆಲಿ ನಿಂದೊಡೆ ಸುಳಿದು ಸೂಸುವ
ಗಾಳಿ ನಿಲುವದು ಗಾಳಿ ನಿಲೆ ಮನ
ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು

ಲೀಲೆಯಿಂದಾ ಬಿಂದು ನಿಂದೊಡೆ
ಕಾಲಕರ್ಮವ ಗೆದ್ದು ಮಾಯೆಯ
ಹೇಳಹೆಸರಿಲ್ಲೆನಿಸ ಬಹುದೈ ಬಸವ ಕೇಳೆಂದ ॥ (ಪ್ರಭುಲಿಂಗಲೀಲೆ)

ಮನಸ್ಸಿನ ಬಹ್ವಗ್ರತೆಗೆ ಬಹಿರಂಗ ಸಾಕ್ಷಿ ಚಪಲವಾಗಿ ಹರಿಯುವ ಕಣ್ಣುಗಳು. ಅವುಗಳನ್ನು ನಿಯಂತ್ರಿಸುವುದರಿಂದ ಅವುಗಳ ಬೆಂಬತ್ತಿ ಓಡಾಡುವ ಮನಸ್ಸು ಸಹ ಕಟ್ಟಿ ಹಾಕಲ್ಪಡುವುದು. ಉಸಿರು ಸಹ ನಿಯಂತ್ರಿಸಲ್ಪಟ್ಟು, ಅದು ಸಮವೇಗದಲ್ಲಿ ಶಾಂತವಾಗಿ ಆಡುವುದು. ಇಲ್ಲಿ ದೃಷ್ಟಿಯೋಗವೆಂದರೆ ಯಾಂತ್ರಿಕ ನಿರೀಕ್ಷಣೆಯಲ್ಲ ಭಾವಸಹಿತ, ಭಕ್ತಿಪೋಷಿತ ನಿರೀಕ್ಷಣೆ. ಭಾವವರಳದ ಯೋಗಸಾಧನೆ ಕೇವಲ ಕಾಯಾಭ್ಯಾಸ' ವ್ಯಾಯಾಮ ಮಾತ್ರ.

ವಾಮಕರದಲ್ಲಿ ಇಷ್ಟಲಿಂಗವನ್ನಿರಿಸಿಕೊಂಡು ಹೃದಯತುಂಬಿ ನಿರೀಕ್ಷಿಸುವ ಸಾಧಕನಲ್ಲಿ ಸತಿಭಾವವು ಬಲಿತು, ಮಧುರಾಭಕ್ತಿಯ ಜೀವಾಳವಾದ ವಿರಹ ಬಲಗೊಳ್ಳಬೇಕು. ಪ್ರಾರಂಭದಲ್ಲಿ ಅಷ್ಟವಿಧಾರ್ಚನೆ, ಮಜ್ಜನ, ಧೂಪ-ದೀಪಾರತಿ ಸೇವೆ ಎಲ್ಲವಿದ್ದರೂ ನಂತರ ಕ್ರಿಯೆಗಳಡಗಿ ನೋಟವೇ ಪ್ರಾಣವಾಗಿ ಸಾಧಕ ತ್ರಾಟಕಯೋಗದಲ್ಲಿ ತೊಡಗುವನು. ಆಗ ಯಾವ ಪರಿಕರಗಳ ಗೊಂದಲವಿಲ್ಲ ; ಶಬ್ದಗಳ ತಾಕಲಾಟವಿಲ್ಲ. ನೇತ್ರವನ್ನೇ ಕುಂಭವಾಗಿ ಮಾಡಿ, ಸಂತೃಪ್ತಿಯ ನೀರನ್ನು ತುಂಬಿ ದೃಷ್ಟಿಯ ಮುಖೇನವೇ ಅಭಿಷೇಕ ಮಾಡುವನು. ಆಗ ಸುಖಜಲ ಬಿಂದುಗಳು ಸಹ ಹರ್ಷಾತಿರೇಕದಿಂದ ಉರುಳದಿರಲಾರವು. ತನ್ನ ಕಣ್ಣನ್ನೇ ಪುಷ್ಪವಾಗಿ ಮಾಡಿ ಇಷ್ಟಲಿಂಗಕ್ಕೆ ಧರಿಸಿ, ನೋಟವನ್ನು ಅಲ್ಲಿ ಕೀಲಿಸುವುದು ಸ್ನೇಹದಿಂದ ನೋಡುತ್ತ ಲಲ್ಲೆಗರೆಯುವುದು, ಅದೇ ನೇತ್ರವನ್ನು ಬಿಚ್ಚಿಬೇರಾಗದಂತೆ ಲಯಗೊಳಿಸಿ, ಅಲ್ಲಿಯೇ ದೇವನನ್ನು ಕೂಡುವುದು. ಈ ಅನುಭವವನ್ನು ಷಣ್ಮುಖಸ್ವಾಮಿಗಳ ಬಾಯಿಯಲ್ಲೇ ಕೇಳಬಹುದು :

ನೇತ್ರವೆಂಬ ಸುವರ್ಣದ ಕೊಡದಲ್ಲಿ ಪರಿಣಾಮವೆಂಬ
ಉದಕವ ತುಂಬಿ ಅಭಿಷೇಕವ ಮಾಡುವೆನಯ್ಯಾ ನಿಮಗೆ.
ನೇತ್ರವೆಂಬ ದಿವ್ಯಪುಷ್ಪದ ಮಾಲೆಯ ಧರಿಸುವೆನಯ್ಯಾ ನಿಮಗೆ.
ನೇತ್ರದ ಸ್ನೇಹ ನೋಟದಿಂದ ಮನಕ್ಕೆ ಮನೋಹರವ
ಮಾಡುವೆನಯ್ಯಾ ನಿಮಗೆ.
ನೇತ್ರವೆಂಬ ಅರಮನೆಯಲ್ಲಿ ಪಟ್ಟಮಂಚದ ಮೇಲೆ
ಸುಪ್ಪತ್ತಿಗೆಯ ಹಾಸುಗೆಯ ಮಾಡುವೆನಯ್ಯಾ ನಿಮಗೆ.
ನೇತ್ರಸೂತ್ರದಿಂದ ಕೂಡುವೆನಯ್ಯಾ ನಿಮ್ಮ ಅಖಂಡೇಶ್ವರಾ.

ಹೀಗೆ ದೃಷ್ಟಿಯನ್ನು ಹರಿಸಿ, ನಿಲ್ಲಿಸಿ, ಲಯಗೊಳಿಸಿ ತನ್ಮೂಲಕ ಮನಸ್ಸನ್ನು

ನಿಯಂತ್ರಿಸುವುದೇ ತ್ರಾಟಕಯೋಗ. ಇದರಲ್ಲಿ ಅಂತರ್ತ್ರಾಟಕ, ಮಧ್ಯ ತ್ರಾಟಕ ಮತ್ತು ಬಹಿಸ್ತ್ರಾಟಕ ಎಂದು ಮೂಬಗೆ. ನಿಸರ್ಗದ ಹಸಿರಿನ ಮೇಲೋ, ಅರಳಿದ ಹೂವಿನ ಮೇಲೋ, ರಾತ್ರಿಯ ವೇಳೆಯಲ್ಲಿ ಚಂದ್ರನಕ್ಷತ್ರಾದಿಗಳ ಮೇಲೋ ಕಣ್ಣಾಲಿ ನೆಟ್ಟು ನಿರೀಕ್ಷಿಸುವುದು ಬಹಿರ್ತ್ರಾಟಕ. ಇದು ಪ್ರಾರಂಭದ ಅಭ್ಯಾಸ. ತನ್ನಿಂದ ದೂರವಾಗಿಯೂ ಇಡದೆ, ಅಂತರಂಗದಲ್ಲೂ ಇಡದೆ ಮುಂದಿರುವ ಭಾವಚಿತ್ರದ ಮೇಲೆಯೋ, ಅಂಗೈಯಲ್ಲಿಟ್ಟ ಇಷ್ಟಲಿಂಗದ ಮೇಲೆಯೋ ನೆಲೆನಿಲಿಸುವುದು ಮಧ್ಯ ತ್ರಾಟಕ. ಕಣ್ಣರೆಪ್ಪೆಗಳನ್ನು ಮುಚ್ಚಿ ಹೃದಯ ಕಮಲ ಅಥವಾ ಭ್ರೂಮಧ್ಯದಲ್ಲಿರಿಸುವುದು ಅಂತರ್ತ್ರಾಟಕ. ದೃಷ್ಟಿಯೋಗದ ಮುಖೇನ ಅನುಭೂತಿಯನ್ನು ಪಡೆದುಕೊಳ್ಳುವ ಹಂಬಲ ಬಸವಣ್ಣನವರ ಮತ್ತು ಷಣ್ಮುಖಸ್ವಾಮಿಗಳ ವಚನದಲ್ಲಿ ವ್ಯಕ್ತವಾಗಿದೆ. ★

ಶಿಕ್ಷಕಿಯರು ಬೇಕಾಗಿದ್ದಾರೆ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ನಡೆಸುವ ಶಿಶುವಿಹಾರ ಮತ್ತು ಒಂದನೆಯ ತರಗತಿಗೆ ಕಲಿಸಲು ಟ್ರೇನಿಂಗ್ ಪಡೆದ ಶಿಕ್ಷಕಿಯರು ಬೇಕಾಗಿದ್ದಾರೆ.

೧. ಇಂಗ್ಲಿಷ್ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ಓದಿ, ನರ್ಸರಿ ಟ್ರೇನಿಂಗ್ ಪಡೆದು, ಆಂಗ್ಲ ಮಾಧ್ಯಮದಲ್ಲಿ ಕಲಿಸುವ ನರ್ಸರಿ ಶಿಕ್ಷಕಿ.

೨. ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ ವರೆಗೆ ಓದಿ, ನರ್ಸರಿ ಟ್ರೇನಿಂಗ್ ಪಡೆದು, ಕನ್ನಡದಲ್ಲಿ ಕಲಿಸುವ ನರ್ಸರಿ ಶಿಕ್ಷಕಿ.

೩. ಇಂಗ್ಲಿಷ್ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ಓದಿ, ಟಿ.ಸಿ.ಹೆಚ್. ಟ್ರೇನಿಂಗ್ ಪಡೆದು, ಆಂಗ್ಲ ಮಾಧ್ಯಮದಲ್ಲಿ ಕಲಿಸುವ ಪ್ರೈಮರಿ ಶಿಕ್ಷಕಿ.

೪. ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ ವರೆಗೆ ಓದಿ, ಟಿ,ಸಿ.ಹೆಚ್. ಟ್ರೇನಿಂಗ್ ಪಡೆದು, ಕನ್ನಡ ಮಾಧ್ಯಮದಲ್ಲಿ ಕಲಿಸುವ ಪ್ರೈಮರಿ ಶಿಕ್ಷಕಿ.

ಆದಷ್ಟು ಬೇಗನೆ ಬರೆದುಕೊಳ್ಳಿ, ಆವಶ್ಯಕ ಪ್ರಮಾಣ ಪತ್ರಗಳೊಡನೆ ಕಲಿಸಿದ ಅನುಭವ ಇದ್ದವರಿಗೆ ಮತ್ತು ಬೆಂಗಳೂರು ನಿವಾಸಿಗಳಿಗೆ ಹೆಚ್ಚಿನ ಮಾನ್ಯತೆಯುಂಟು.

ಪೂಜ್ಯ ಶ್ರೀ ಜಗದ್ಗುರು ಮಾತೆಮಹಾದೇವಿ

ದೂರವಾಣಿ : 82335

ಅಕ್ಕಮಹಾದೇವಿ ಶಿಶುವಿಹಾರ
೨೪. ಬಸವ ಮಂಟಪ. ಎರಡನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-೫೬೦೦೧೦

ಸಮಸ್ಯೆ? ಸಮಾಧಾನ!

—H. T. ಶಾಂತ, ಅರಸೀಕೆರೆ.

❋ ಸ್ನಾನ ಮಾಡಿದ್ದಾಗ ಬೇರೆ ಜಾತಿಯವರನ್ನು ಮಾತನಾಡಿಸಿದರೆ ಮಡಿ ಕೆಟ್ಟು ಹೋಗುತ್ತದೆಯೇ ? ಮರಳಿ ಸ್ನಾನ ಮಾಡಬೇಕೆ ?

* ಪ್ರಸನ್ನ ಚಿತ್ತವೇ ಮಡಿ ; ವಿಕೃತ ಚಿತ್ತವೇ ಮೈಲಿಗೆ. ಆನಂದವೇ ಮಡಿ, ದುಃಖವೇ ಮೈಲಿಗೆ. ಅರಿವೇ ಮಡಿ: ಭ್ರಾಂತಿಯೇ ಮೈಲಿಗೆ; ಮಡಿ ಎಂಬುದು ಮನಸ್ಸಿನ ಪವಿತ್ರ ಸ್ಥಿತಿ. ಮಾತನಾಡಿದರೆ ಮೈಲಿಗೆಯಾಯಿತೆಂಬ ಭ್ರಾಂತಿಯೇ ಮೈಲಿಗೆ, ಎಲ್ಲರಲ್ಲೂ ಶಿವಸ್ವರೂಪ ಕಂಡುಕೊಳ್ಳುವುದೇ ಮಡಿ.

—ಬಸವರಾಜ ಸಂಗಮದ, ಬೀದರ.

❋ ನನ್ನೊಬ್ಬ ಮಿತ್ರನು ಹುಟ್ಟುಗುರುಡ. ಲಿಂಗದೀಕ್ಷೆ ಪಡೆದು ಶಿವಯೋಗ ಸಾಧನೆ ಮಾಡಬೇಕೆನ್ನುವನು. ಇವನಿಗೆ ಅದು ಸಾಧ್ಯವೆ ?

* ಒಂದು ಇಂದ್ರಿಯವನ್ನು ವಿಶಿಷ್ಟ ವಸ್ತುವಿನ ಮೇಲೆ ನಿಲ್ಲಿಸಿ ತನ್ಮೂಲಕ ಮನಸ್ಸನ್ನು ದೇವನಲ್ಲಿ ಲಯಗೊಳಿಸುವುದೇ ಯೋಗ. ದೃಷ್ಟಿಯನ್ನು ಇಷ್ಟಲಿಂಗದ ಮೂಲಕ ನೆಲೆಗೊಳಿಸುವುದು ತ್ರಾಟಕಯೋಗ. ಕಣ್ಣಿಲ್ಲದವನಿಗೆ ಸ್ಪರ್ಶೇಂದ್ರಿಯವಾದ ಕೈಯಿಂದ ಇಷ್ಟಲಿಂಗವನ್ನು ಪೂಜಿಸಿ, ರಸನೇಂದ್ರಿಯವಾದ ನಾಲಿಗೆಯಿಂದ, ದೇವನನ್ನು ಹಾಡಿ, ಮನದಿಂದ ಧ್ಯಾನಿಸಿ ಅವನನ್ನೊಲಿಸುವುದು ಸಾಧ್ಯವಿದೆ.

—ಸತ್ಯಕ್ಕ ಮತ್ತು ನೀಲಾಂಬಿಕೆ, ಹಾರೋಗೇರಿ.

❋ ಈಗಿನ ಪರಿಸರದಲ್ಲಿ ಸನ್ಯಾಸಿನಿಯಾಗಿ ಸಮಾಜಸೇವೆ ಮಾಡುವುದು ಉತ್ತಮವೋ? ಅಥವಾ ಅಧ್ಯಾತ್ಮ ಜೀವಿಯನ್ನು ಕೈಹಿಡಿದು ಆದರ್ಶ ಗೃಹಿಣಿಯಾಗಿ ಬಾಳುವುದು ಉತ್ತಮವೋ ? ದಯಮಾಡಿ ತಿಳಿಸಿರಿ.

* ಪರಿಸರ ಅಕ್ಕಮಹಾದೇವಿಯ ಕಾಲದಲ್ಲೂ ಹಾಗೆ ಇತ್ತು, ಈಗಲೂ ಹಾಗೇ ಇದೆ. ಪರಿಸರಕ್ಕೆ ಈಡಾಗಿ ದಾರಿಯನ್ನು ತುಳಿಯಬಾರದು. ವ್ಯಕ್ತಿಯು ತನ್ನ ಶಕ್ತಿ, ಆಕಾಂಕ್ಷೆ, ಅಭಿರುಚಿ ಮತ್ತು ಆದರ್ಶಗಳಿಗೆ ತಕ್ಕಂತೆ ಪಥವನ್ನು ಹಿಡಿಯಬೇಕು. ಆತ್ಮವಿಶ್ವಾಸ, ಎಡರು ತೊಡರನ್ನೆದುರಿಸುವ ಛಲ ಇಲ್ಲದವರು ಸನ್ಯಾಸದ ಅರಣ್ಯ

ಪಥ ತುಳಿವುದಕ್ಕಿಂತ ಗೃಹಸ್ಥ ಜೀವನದ ಟಾರ್ ರಸ್ತೆ ಮೇಲೆ ಸಾಗುವುದು ಶ್ರೇಯಸ್ಕರ.

—ನಾಗರತ್ನ, ತುಮಕೂರು.

❋ ಲಿಂಗಾಯತನನ್ನು ನೀನು ಯಾವ ಜಾತಿಯವನೆಂದರೆ ಸಿಗುವ ಅಥವಾ ಸಿಗಬೇಕಾದ ಉತ್ತರವೇನು ?

* 'ನನಗೆ ಜಾತಿಯಿಲ್ಲ ; ಪಾಲಿಸುವದು ಲಿಂಗಾಯತ ಧರ್ಮವನ್ನು' ಎನ್ನಬೇಕು.

—ಗುಣನಿಧಿ, ಬೆಂಗಳೂರು.

❋ ಹಡಪದ ಅಪ್ಪಣ್ಣ, ಸಮಗಾರ ಹರಳಯ್ಯ, ಡೋಹಾರ ಕಕ್ಕಯ್ಯ, ಅಂಬಿಗರ ಚೌಡಯ್ಯ ಇತ್ಯಾದಿ ಹೆಸರುಗಳ ಹಿಂದಿನ ವಿಶೇಷಣವು ಶರಣರ ಜಾತಿಗಳನ್ನು ಎತ್ತಿ ಆಡಿದಂತಾಗಲಿಲ್ಲವೆ ? ಇದು ಮತ್ತೂ ಭೇದಕ್ಕೆ ಅವಕಾಶ ನೀಡಿತಲ್ಲವೆ ?

* ಈ ವಿಶೇಷಣಗಳನ್ನು ಉಳಿಸುವಲ್ಲಿ ಬಸವಣ್ಣನವರಿಗೆ ದೂರಾಲೋಚನೆ ಇತ್ತು: ಯಾವ ಜಾತಿ, ಯಾವ ವೃತ್ತಿಯವರಾದರೂ ಶರಣರಾಗಬಹುದು ಎಂಬ ಅವರ ತತ್ತ್ವವನ್ನು ಮತ್ತು ಕೃತಿಯನ್ನು ನಂತರದವರು ಮರೆಮಾಚಿ, ದೊಡ್ಡವರಾದ ಶರಣರನ್ನು ಜನ್ಮದಿಂದ ಕುಲಜರನ್ನಾಗಿ ಪುರಾಣೀಕರಣ ಮಾಡಬಾರದೆಂದು ಉದ್ದೇಶಿಸಿ, ಮಾಡಿದ ಜಾಣತನವಿದು.

—ಗುರುಪುತ್ರ ನೇಳಗೆ, ಅವರಾದ.

❋ ಕೆಲವರು ನಿಮ್ಮ ಶತ್ರುಗಳಿದ್ದಾರೆ. ಅವರ ಬಗ್ಗೆ ಏಕೆ ನೀವು ಏನೂ ಕ್ರಮ ಕೈಗೊಳ್ಳುವುದಿಲ್ಲ ?

* ನಮ್ಮ ನಿಜವಾದ ಶತ್ರುಗಳು ಜಾತೀಯತೆ, ಮೂಢ ನಂಬಿಕೆ, ಸಮಾಜದ ಅನೈಕ್ಯತೆ, ಶಿಥಿಲತೆ. ಇವುಗಳ ವಿರುದ್ಧ ಹೋರಾಡಲು ವೇಳೆ ಸಿಗುವುದೇ ದುರ್ಲಭವಿದ್ದಾಗ ಇನ್ನು ಆ ಕ್ಷುಲ್ಲಕ ಸಮಸ್ಯೆಗಳ ಬಗ್ಗೆ ಚಿಂತಿಸಿ ಸಮಯಹರಣ ಮಾಡುವುದೆ ?

—ಎಂ. ಶಿವಯೋಗಯ್ಯ, ಕಲ್ಮನೆ.

❋ ಅನುಭವಕ್ಕೂ ಮತ್ತು ಅನುಭಾವಕ್ಕೂ ಇರುವ ವ್ಯತ್ಯಾಸವೇನು ?

* ಇಂದ್ರಿಯ ಮುಖೇನ ಬರುವ ಅನುಭವಕ್ಕೆ ಅನುಭವವೆಂದು, ಲೌಕಕ ಸುಖವೆಂದು, ಅತೀಂದ್ರಿಯವಾಗಿ ಹೃದಯ ವೇದ್ಯವಾಗಿ ಬರುವ ಅನುಭವಕ್ಕೆ ಅನುಭಾವವೆಂದು ಅಲೌಕಿಕ ತೃಪ್ತಿಯೆಂದು ಹೆಸರಿಸುವರು. ಮೊದಲನೆಯದು ತಾತ್ಕಾಲಿಕ, ಎರಡನೆಯದು ಶಾಶ್ವತ.

❋ ಮನುಷ್ಯನಿಗೆ ಒಂದು ಸೀಮಿತವಾದ ಆಸೆ-ಆಕಾಂಕ್ಷೆಗಳಿರುವುದು ತಪ್ಪೆ ?

* ಅನ್ಯರ ಹಿತಕ್ಕೆ ಧಕ್ಕೆ ತರದ, ತನ್ನಾತ್ಮ ಪತನ ಮಾಡದ ಆಸೆ–ಆಕಾಂಕ್ಷೆಗಳಿರುವುದು ತಪ್ಪಲ್ಲ. ಅದು ಮಧ್ಯಮ. ಸದಾ ಇತರರಿಗೆ, ಸಮಷ್ಟಿಗೆ ಹಿತವಾಗುವ ಆಸೆ–ಆಕಾಂಕ್ಷೆಗಳಿದ್ದರಂತೂ ಅತ್ಯಂತ ಉತ್ತಮ. ಇದಂತೂ ಪೂರಾ ಆವಶ್ಯಕ.

ಬಸವಕುಮಾರ ಕೊಳಾರ, ಬೀದರ.

※ ನಾನು ಯಾರೋ ಒಬ್ಬ ಸ್ವಾಮಿಗಳ ಬಗ್ಗೆ ಟೀಕೆಯ ಲೇಖನ ಬರೆದುಕಳಿಸಿದ್ದೆ. ನೀವು ಪ್ರಕಟಿಸಿಯೇ ಇಲ್ಲ. ತುಂಬಾ ನಿರಾಶೆಯಾಯಿತು. ಪ್ರಕಟಿಸುವಿರೋ ಇಲ್ಲವೋ ಸ್ಪಷ್ಟ ಉತ್ತರ ತಿಳಿಸಿ ?

* ತಮ್ಮಾ, ನಮ್ಮ ಪತ್ರಿಕೆ ತಿರಸ್ಕರಣೀಯ ಕೊಳಚೆ ಒಯ್ಯುವ ಚರಂಡಿಯಲ್ಲಪ್ಪ ; ಇದು ಜ್ಞಾನ–ಅನುಭಾವದ ಗಂಗೆಯನ್ನು ಮಡಿಲಲ್ಲಿ ಹೊತ್ತು ತರುವ ಸುಂದರ ಕಾಲುವೆ. ಅಂಥ ಲೇಖನಗಳನ್ನು ಪ್ರಕಟಿಸುವ ಪತ್ರಿಕೆ ಸಾಕಷ್ಟಿವೆ; ಕಳಿಸಿಕೊಡಿರಿ.

ಎಸ್. ಎನ್. ಕರೀಕೆರೆ.

※ ಮೋಕ್ಷವೆಂಬುದು ಮರಣಾನಂತರ ಲೋಕಾಂತರದಲ್ಲಿ ದೊರೆಯುವ ಒಂದು ವಸ್ತುವೆ ?

* ಮೋಕ್ಷವೆಂಬುದು ಮುಚ್‌ಧಾತುವಿನಿಂದ ಹುಟ್ಟಿದ ಪದ. ಬಿಡುಗಡೆ ಎಂಬ ಅರ್ಥವನ್ನು ನೀಡುತ್ತದೆ. ಜೀವಿತಕಾಲದಲ್ಲಿ ಕಾಯ, ಮನ, ಜೀವ ಗುಣಗಳಿಂದ ಬಿಡುಗಡೆ ; ಅದು ಜೀವನ್ಮುಕ್ತಿ. ಸಾವಿನನಂತರ ದೇಹ–ಕರಣಗಳಿಂದ ಬಿಡುಗಡೆ ಹೊಂದಿ ದೇವನಲ್ಲಿ ಉರಿಯುಂಡ ಕರ್ಪುರದಂತೆ ಸಮರಸ ಹೊಂದುವದು ವಿದೇಹ ಮುಕ್ತಿ. ಅದು ವಸ್ತುವಲ್ಲ, ಒಂದು ಸ್ಥಿತಿ.

—ಜಿ. ಬಿ. ಪಟ್ಟಣಶೆಟ್ಟಿ, ಬೆಳಗಾಂವಿ.

※ ಕಾಯವೇ ಕೈಲಾಸ ಮತ್ತು ಕಾಯಕವೇ ಕೈಲಾಸ ಇವುಗಳಲ್ಲಿರುವ ವ್ಯತ್ಯಾಸವೇನು? ಇವು ಪರಸ್ಪರ ವಿರೋಧಾಭಾಸವೆ ?

* ಕಾಯವೇ ಕೈಲಾಸ ಎಂಬುದು ದೇಹ ಮನ ಭಾವ ಬುದ್ಧಿಗಳನ್ನು ಲಿಂಗಮಯ ಮಾಡಿಕೊಂಡು ನಿಂತ ದಿವ್ಯಸ್ಥಿತಿ. ಇದು ಶಿವಯೋಗ ಸಾಧನೆಯ ಆತ್ಯಂತಿಕ ಗುರಿ. ಕಾಯಕವೇ ಕೈಲಾಸ ಎಂಬುದು ಆರ್ಥಿಕ ನೀತಿ. ಮೊದಲಿನದು ವ್ಯಷ್ಟಿಯ ಉದ್ಧಾರದ ಸೂತ್ರ. ಎರಡನೆಯದು ಸಮಷ್ಟಿ ಜೀವನದ ಮಂತ್ರ. ಎರಡೂ ವಿರೋಧಾಭಾಸವಲ್ಲ, ಪರಸ್ಪರ ಪೂರಕ. ಕಾಯವು ಕೈಲಾಸವಾದವನು ಮಾಡಿದ ಕಾಯಕ ಸಂತೃಪ್ತಿ, ಸಮೃದ್ಧಿಯಾಗರವಾದ ಕೈಲಾಸ. ಕಾಯಕವೇ ಕೈಲಾಸವೆಂಬ ಅಪೂರ್ವ ಮನೋಭಾವದಿಂದ ವೃತ್ತಿನಿರತನಾಗುವ ಶರಣನ ಕಾಯವು ಕೈಲಾಸ.

ಬೋಳುಬಸವನ ಬೊಂತೆ - ೪

ಆತ್ಮಾನುಭವ

ಎಲ್ಲಿಂದ ಬಂದೆವೆನೆ ಯಾರಿಗೂ ಗೊತ್ತಿಲ್ಲ
ಎಲ್ಲಿಗೀ ಪಯಣವೆಂಬರಿವು ಇಲ್ಲ
ಎಲ್ಲಿಗೇತಕೆ ಹೋಗಿಬಹೆವೆಂದು ತಿಳಿಯದಲೆ
ನಿಲ್ಲದಲೆ ಸಾಗಿಹೆವು—ಬೋಳುಬಸವ ॥ ೧ ॥

ಹಿಂದೆ ಏನಾಗಿದ್ದೆ ಎಂಬರಿವು ನಿನಗಿಲ್ಲ
ಮುಂದೆ ಏನಾಗುವೆಯೊ ಗೊತ್ತಿಲ್ಲವು
ಹಿಂದು ಮುಂದನು ನೀನು ತಿಳಿಯದಲೆ ಸುಮ್ಮನೆಯೆ
ಗೊಂದಲದಿ ನುಗ್ಗುತಿಹೆ—ಬೋಳು ಬಸವ ॥ ೨ ॥

ಭೋರಿಡುವ ಸಂಸಾರಸಾಗರವ ದಾಂಟೆ ನೀಂ
ದಾರಿ ತಾನಾವುದೆಂದರಿತಿರುವೆಯ
ಘೋರಭವ ಜಲಧಿಯನ್ನುತ್ತರಿಸೆ ಸುಲಭದಿಂ
ಆರು ನಾನೆಂದು ತಿಳಿ—ಬೋಳುಬಸವ ॥ ೩ ॥

ನರನರಿತ ಸುಲಭದಿಂ ಚಂದ್ರಲೋಕಕ್ಕಿಳಿಯೆ
ಅರಿತನವ ಕುಜನ ಮೈಮಣ್ಣತರಲು
ಅರಿತಿಹನು ಬಾಂಬೊಂದರಿಂ ಸುಡಲು ನರಕುಲವ
ಅರಿಯ ತಾನಾರೆಂದು—ಬೋಳು ಬಸವ ॥ ೪ ॥

ಬಾನಿನಲಿ ಹಾರಾಡೆ ಶರಧಿಯೊಳ್ಮುಳುಗಾಡೆ
ಕ್ಷೋಣಿಗರ್ಭವ ಬಗೆದು ನೋಡೆ ಕಲಿತ
ಮಾನವನು ಬಾಳುತಿರೆ ದಾನವನು ತಾನಾಗಿ
ಏನು ಕಲಿತೊಡೆ ಏನು—ಬೋಳು ಬಸವ ॥ ೫ ॥

ಮೇದಿನಿಯೊಳೆಲ್ಲವಂ ಬುದ್ಧಿಯಿಂದರಿಯುವುದು
ಸಾಧುವೆನಬೇಡ, ಸಾಧ್ಯವೆನಬೇಡ

ಸಾಧಕನ ಸಿದ್ಧಿಗಳ ವಿಷಯದಲಿ ವೈಜ್ಞಾನ
ಶೋಧನೆ ನಿರರ್ಥಕವು—ಬೋಳು ಬಸವ ॥ ೬ ॥

ದುರಿತಕರ್ಮವನೆಸಗಿ ದುರ್ಮಾರ್ಗದೊಳು ನಡೆದು
ಧರೆಯ ಮೇಲತಿಹೀನ ನೆನಿಸಿರ್ದರು
ಗುರುತರದ ಚಿರಮುಕ್ತಿ ಪಡೆಯೆ ನೀನನುನಯದಿ
ಶರಣಾಗು ಪರಶಿವಗೆ —ಬೋಳು ಬಸವ ॥ ೭ ॥

ಮರಕಲ್ಲು ಲೋಹಗಳ ಅಳಿವ ವಿಗ್ರಹಕೆರಗಿ
ವರ ಕೇಳ್ವ ನೀನೆತ್ತ ದೈವವೆತ್ತ
ಅರಿಯೆ ದೈವದ ನೆಲೆಯ ತಿಳಿವೊದಲು ನಿನ್ನಿರವ
ಪರಿತಪಿಸದೆಲೆ ಬರಿದೆ—ಬೋಳು ಬಸವ ॥ ೮ ॥

ಅರಿಯಲಾಧ್ಯಾತ್ಮವನು ವಿಜ್ಞಾನ ಕಡೆಗಣಿಸಿ
ನರನು ತಾ ಕುಂಟುವನು ತಾಕಿಕರದೊಳು
ಅರಿತರೇಂ ವಿಜ್ಞಾನವಾಧ್ಯಾತ್ಮ ಬದಿಗೊತ್ತಿ
ಕುರುಡನೋಲ್ ಮುಗ್ಗರಿಪ—ಬೋಳು ಬಸವ ॥ ೯ ॥

ಆವ ಮಾನವ ಜಗದಿ ಹಗಲಿರುಳು ಪರಿತಪಿಸಿ
ದೇವನನು ತಾ ಕಾಣೆ ಹಾತೊರೆವನೊ
ಆ ವಿರಾಗಿಯನೊಡನೆ ಕೈಪಿಡಿದು ಕಾಪಾಡೆ
ದೇವನುಂ ಹಾತೊರೆವ—ಬೋಳು ಬಸವ ॥ ೧೦ ॥

ಸಲೆ ಬಣ್ಣಿಸುತ ಬರಿದೆ ಬಣ್ಣನೆಗೆ ಸಿಲುಕದನ
ಬಳಲುತ್ತ ಬಹುವಿಧದಿ ಬವಣೆಗೊಳುತ
ತಿಳಿಯಲೆತ್ನಿಸಬಹುದೆ ಮಾತಿನಿಂ ಮನಸಿನಿಂ
ತಿಳಿಯದಲೆ ಅನುಭವದಿ—ಬೋಳು ಬಸವ ॥ ೧೧ ॥

ವರಬುದ್ಧಿಬಲದಿಂದ ಬಹುಕಾಲವಭ್ಯಸಿಸಿ
ಅರಿಯಲ್ಕೆ ಸಾಧ್ಯವೈ ಶಾಸ್ತ್ರಗಳನು
ಸರಸಿಜಾಂಡವನೆಲ್ಲನೊಳಗೊಂಡ ದೇವನನು
ಅರಿಯಬಹುದೇ ಬುದ್ಧಿ—ಬೋಳು ಬಸವ ॥ ೧೨ ॥

—ಪಿ. ಬಸವಣ್ಣ, ಕೊಳ್ಳೇಗಾಲ.

ಒಂದು ವಚನದ ತಾತ್ತ್ವಿಕ ವಿಶ್ಲೇಷಣೆ

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ ನೀನು ಆಕಾರವಾಗಿರ್ದಲ್ಲಿ
ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ ನೀನೆನ್ನ ಭವವ ಕೊಂದಹೆನೆಂದು
ಜಂಗಮ ಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ,
ಕೂಡಲ ಸಂಗಮದೇವಾ. –ಬ.ಷ.ವ ೩.

ಅರ್ಥ: ಒಂದಿದ್ದುದು ಅನೇಕವಾಗುವ ವಿಶ್ವವಿಕಾಸದ ಬಗೆ ಇಲ್ಲಿ ಬಂದಿದೆ. ದೇವನು ನಿಃಕಲ, ನಿಃಕಲ - ಸಕಲ, ಸಕಲ ಈ ಮೂರೂ ರೂಪ ತಳೆದಾಗ ಸೃಷ್ಟಿಯ ಪೂರ್ಣತ್ವ. ಸೃಷ್ಟಿಯ ಲೀಲೆಯಲ್ಲಿ ಭಾಗವಹಿಸುವ ಎರಡು ಮಹಾ ತತ್ವಗಳೆಂದರೆ ಪರಶಿವ, ಪರಾಶಕ್ತಿ. ಪರಶಿವನೊಡನೆ ಅವಿನಾಭಾವ ಸಂಬಂಧ ಹೊಂದಿರುವ ವಿಶ್ವಕ್ರಿಯಾಶಕ್ತಿಯು ಹಂತಹಂತವಾಗಿ ವಿಕಾಸವಾಗುತ್ತ, ಸ್ಥೂಲ ರೂಪ ತಳೆಯುತ್ತದೆ.

ವ್ಯಾಖ್ಯೆ :—ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ,

ದೇವನನ್ನು ನೇರವಾಗಿ ಸಂಬೋಧಿಸಿ ಹೇಳುವ ಈ ವಚನವು ಸೈದ್ಧಾಂತಿಕ ಸತ್ವ ಉಳ್ಳುದು. ಶಕ್ತಿ ವಿಶಿಷ್ಟನಾದ ಶಿವನು ಶಕ್ತಿ ಸಮೇತನಾಗಿ ಸೃಷ್ಟಿಯ ಲೀಲೆಯಲ್ಲಿ ಭಾಗವಹಿಸುವ ವಿವರಣೆ ಇಲ್ಲಿ ಉಂಟು.

ಸೃಷ್ಟಿಯ ರಚನೆಯಾಗಲಿಕ್ಕೆ ಬಹು ಪೂರ್ವದಲ್ಲಿ ಪರವಸ್ತುವು ದ್ವಂದ್ವಗಳನ್ನು ದಾಟಿದಂತಹ ಸ್ವಯಂಭು ಸ್ಥಿತಿಯಲ್ಲಿರುವುದು. ಅದು ಆಗ ಸಾಕಾರವಲ್ಲ, ನಿರಾಕಾರವೂ ಅಲ್ಲ ; ಸಗುಣವೂ ಅಲ್ಲ - ನಿರ್ಗುಣವೂ ಅಲ್ಲ. ಅದನ್ನು ಶೂನ್ಯ, ಬಯಲು, ನಿರ್ವಯಲು ಎಂದು ಕರೆಯಬಹುದು. ನಾಮರೂಪಾತ್ಮಕ ಕ್ರಿಯೆಗಳು ಏನೂ ಇಲ್ಲದಾಗ ಅದೊಂದು ನಿರ್ವಿಕಾರವಾದ ಶೂನ್ಯವಾಗಿತ್ತು. ಅಲ್ಲಿ ಏನೊಂದೂ ವ್ಯಕ್ತವಾಗಿರಲಿಲ್ಲ. ಶೂನ್ಯ

ವೆಂದರೆ ಏನೂ ಇಲ್ಲದ ಬರಿದಾದ ಶೂನ್ಯವಲ್ಲ, ಎಲ್ಲವನ್ನೂ ಗರ್ಭೀಕರಿಸಿಕೊಂಡು ಯಾವೊಂದೂ ವ್ಯಕ್ತರೂಪಕ್ಕೆ ಬಂದಿರದ ಸ್ಥಿತಿ. ಅತಿ ಸೂಕ್ಷ್ಮಾವಸ್ಥೆಯಲ್ಲಿ ಭಾವೀ ವಿಶ್ವದ ಸಮಸ್ತ ಅಂಶಗಳೂ ಅಡಗಿವೆ. ಈ ಮಹಾವಸ್ತುವು ದ್ವಂದ್ವಾತೀತವಾಗಿ, ಬುದ್ಧಿ - ಭಾವಗಳ ಸೀಮೆಯನ್ನು ದಾಟಿ ಅಂದರೆ ಚಿಂತನೆ – ಅನುಭವಗಳನ್ನೂ ಮೀರಿ ನಿಂತ ಶೂನ್ಯ. ಇಂತಹ ಸ್ಥಿತಿಯನ್ನು ಪ್ರಭುದೇವರು, "ಇಲ್ಲದಂತೆ ಇದ್ದ" ದ್ದು ಎನ್ನುತ್ತಾರೆ. ಇದೇ ನಿಷ್ಕಲ ಪರವಸ್ತು.

ತನ್ನ ತಾನರಿಯದ, ಆನಂದಿಸದ, ವಿಶಿಷ್ಟ ಸ್ಥಿತಿಯಲ್ಲಿದ್ದ ಈ ಪರವಸ್ತುವು ನಿರಾಕಾರ – ಸಾಕಾರಗಳ ದ್ವಂದ್ವದ ಆಚೆಗಿದ್ದುದು, ನಿರಾಕಾರ ಎನಿಸಿಕೊಳ್ಳುವ ಸ್ಥಿತಿಗೆ ಬರುವುದು ಜ್ಞಾನಶಕ್ತಿಯ ಉದ್ಭವದಿಂದ. ತನ್ನಲ್ಲಿಯೇ ಅಡಗಿದ್ದ ಜ್ಞಾನ - ಇಚ್ಛಾ-ಕ್ರಿಯಾಶಕ್ತಿಗಳು ಅತಿ ಸುಪ್ತಾವಸ್ಥೆಯಲ್ಲಿದ್ದ ಕಾರಣ ಸ್ವಯಂಭು ಆ ಸ್ಥಿತಿಯಲ್ಲಿದ್ದಿತ್ತು.

ಮುಗ್ಧವಾದ ಹೆಣ್ಣು ಕೂಸಿನಲ್ಲಿ ತನ್ನ ತಾಯ್ತನದ ಅರಿವಿರದು. ಈ ಅರಿವಿಲ್ಲದ ಸ್ಥಿತಿಯಲ್ಲಿ ಮಗುವು ಎಷ್ಟೋ ವರುಷ ಕಾಲಯಾಪನೆ ಮಾಡುವುದು. ಅಂದರೆ ಅದು ಜ್ಞಾನಶಕ್ತಿ ಯುಕ್ತವಾಗುವುದು (Awareness). ಇಂತಹ ತಾನರಿದ ಸ್ಥಿತಿಯುಳ್ಳ ಮಹಾವಸ್ತುವಿಗೆ "ಶಿವತತ್ತ್ವ" ಎಂಬ ಅಭಿದಾನ. ಈ ಶಿವತತ್ತ್ವದ ಇರವನ್ನು ಬಸವಣ್ಣನವರ ಪ್ರಸ್ತುತ ವಚನ ಪ್ರತಿಪಾದಿಸುತ್ತದೆ. ಸಾಕಾರ-ನಿರಾಕಾರ ದ್ವಂದ್ವ ಮೀರಿದ ಪರವಸ್ತು ನಿರಾಕಾರಕ್ಕೆ ಬಂದಾಗ ಆ ತನಕ ಸುಪ್ತವಾಗಿದ್ದ ಪರಾಶಕ್ತಿ ಜ್ಞಾನರೂಪದಲ್ಲಿ ಸ್ಫುರಿಸಿ ದೇವರನ್ನು ಸರ್ವಜ್ಞನೆಂಬ ವಿಶೇಷ ಹೆಸರಿಗೆ ಒಳಗು ಮಾಡುವುದು.

ಇಂತಹ ಅಸ್ತಿತ್ವದ ಅರಿವನ್ನು ಹೊಂದಿ, ತನ್ನ ಶಕ್ತಿ–ಉದ್ದೇಶಗಳನ್ನು ಅರಿತ ಪರವಸ್ತುವಿಗೆ ಲೀಲೆಯಾಡಬೇಕೆಂಬ ಇಚ್ಛೆಯಾಗುವುದು. ಆಗ ಅದು ಸಂಕಲ್ಪಿಸುವುದು. ಈ ರೀತಿ ಸಂಕಲ್ಪ ಶಕ್ತಿ ಜಾಗೃತವಾದ ಪರವಸ್ತುವು "ಶಕ್ತಿತತ್ತ್ವ" ಎನ್ನಿಸಿಕೊಳ್ಳುವುದು. ಇದೇ ಭಾವವು "ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ, ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ." ಎಂಬಲ್ಲಿ ವ್ಯಕ್ತವಾಗುತ್ತದೆ. ಸಂಕಲ್ಪಿಸುವುದು ಕಾರ್ಯೋನ್ಮುಖವಾಗುವ ಸ್ಥಿತಿಯನ್ನು ಸೂಚಿಸುತ್ತದೆ. ಹೀಗೆ ದೇವನು ಕಾರ್ಯೋನ್ಮುಖವಾಗುವ ಮುನ್ನ ಸಂಕಲ್ಪಿಸಿದಾಗ (ನಾಟ್ಯಕ್ಕೆ ನಿಂದಾಗ) ಅಲ್ಲಿ ಸ್ಪಂದನಗಳು ಆಗತೊಡಗುತ್ತವೆ, ಚೈತನ್ಯ-ಚಟುವಟಿಕೆ ಪ್ರಾರಂಭವಾಗುತ್ತವೆ. ಬಾಂಬನ್ನು ಎಸೆದಾಗ ಅದು ಸಿಡಿಯುವ ಕಾರ್ಯ ಮಾಡಲಿಕ್ಕೆ ಮುಂಚೆ ಅದರೊಳಗೆ ಆ್ಯಸಿಡ್ ಬಿಡುಗಡೆಯಾಗಿ ಚಟುವಟಿಕೆ ಆರಂಭವಾಗುವುದು. ಅದೇ ರೀತಿ ಮಹಾವಸ್ತುವಿನ ಸಂಕಲ್ಪದೊಡನೆ ಚೈತನ್ಯಯುತ ಸ್ಪಂದನಗಳು ಆರಂಭವಾಗುತ್ತವೆ.

ನಂತರದ ಕ್ರಿಯೆಯೇ ಸೃಷ್ಟಿರಚನೆ. ಪರವಸ್ತು ಸಗುಣ ರೂಪದಿಂದ ಕಾರ್ಯ

ಮಾಡಲು ಉದ್ಯುಗಿಸಿದಾಗ ಅದರಲ್ಲಿನ ಕ್ರಿಯಾಶಕ್ತಿ ಜಾಗೃತವಾಗುವುದು. ಈ ಕಾರ್ಯ ವಿಭಾಗವನ್ನು ವಚನದ ಮುಂದಿನ ಭಾಗ ವಿವರಿಸುತ್ತದೆ. ಅಯ್ಯಾ, ನೀನು ಆಕಾರವಾಗಿದ್ದಲ್ಲಿ ನಾನು ವೃಷಭನೆಂಬವಾಹನವಾಗಿರ್ದೆ ಕಾಣಾ". ಆಕಾರವಾಗಿದ್ದಲ್ಲಿ ಎಂದರೆ ಸೃಷ್ಟಿಯ ರಚನೆಗೆ ನಿಂತಾಗ ವೃಷಭ ಅಂದರೆ ಕ್ರಿಯಾಶಕ್ತಿಯ ಸಹಾಯ ಒದಗುವುದು. ಆಗ ಸರ್ವಕರ್ತೃತ್ವದ ಅಭಿದಾನ ಪರವಸ್ತುವಿಗೆ ಬರುವುದು.

ಹೀಗೆ ಕ್ರಿಯಾಶಕ್ತಿ ಜಾಗೃತವಾದ ಪರವಸ್ತುವು "ಸದಾಶಿವ ತತ್ತ್ವ" ಎನ್ನಿಸಿಕೊಳ್ಳುವುದು. ಜ್ಞಾನ – ಇಚ್ಛಾ–ಕ್ರಿಯೆಯೆಂಬ ಸೃಷ್ಟಿ ರಚನೆಗೆ ಅವಶ್ಯವಾದ ಶಕ್ತಿಗಳ ಸ್ಫುರಣವಾದಾಗ ನಿಷ್ಕಲಲಿಂಗವೆನ್ನಿಸಿಕೊಳ್ಳುತ್ತಿದ್ದ ಪರವಸ್ತುವು ಮಹಾಲಿಂಗ ಎನ್ನಿಸಿಕೊಳ್ಳತೊಡಗುತ್ತದೆ. ಮಹಾಲಿಂಗವೆಂದರೆ ಸೈದ್ಧಾಂತಿಕವಾಗಿ ಸೃಷ್ಟಿಕರ್ತ.

ಸೃಷ್ಟಿಯ ರಚನೆಯಾದ ಮೇಲೆ ಶಿವ–ಶಕ್ತಿಗಳೆರಡೂ ಲೀಲೆಯನ್ನು ವಿಸ್ತರಿಸಿದವು. ಶಕ್ತಿಯ ವಿಕಾಸವು ಜಡಸೃಷ್ಟಿಯಾದರೆ, ಶಿವತತ್ತ್ವ ಅದರೊಳಗೆ ಪ್ರವಹಿಸಿತು. ಪಂಚಭೂತ ಜನ್ಯ ಪ್ರಕೃತಿಪಿಂಡ ಶಕ್ತಿಯ ಪರಿಣಾಮವಾದಾಗ ಅದರೊಳಗೆ ಪರಶಿವದ ಅಂಶವಾದ ಆತ್ಮವು ಪ್ರವೇಶಿಸಿತು. ಆಗ ಭವದ, ಹುಟ್ಟು-ಸಾವು-ಜನ್ಮಾಂತರಗಳ ರಾಟಾಳ ತಿರುಗಲಾರಂಭಿಸುವುದು. ತಿರುಗುವ ರಾಟಾಳದಲ್ಲಿ ಸಿಕ್ಕಿದ ಅಜ್ಞಾನಯುಕ್ತ ಮಾನವನು ಘಾಸಿಗೊಳ್ಳುವಾಗ ದೇವನಿಗೆ ಕರುಣೆ ಬರುವುದು. ಆಗ ಅವನು ಗುರು-ಲಿಂಗ–ಜಂಗಮ ರೂಪದಲ್ಲಿ ಕಾಣಿಸಿಕೊಂಡು ಭವಪಂಕದಲ್ಲಿ ಬಿದ್ದು ಕಾಲು ಬಡಿಯುವ ಜೀವಿಯನ್ನು ಕೊಂಬು ಹಿಡಿದು ಹೊರಗೆಳೆಯುವನು. ಅಹಂಕಾರ–ಮಮಕಾರಗಳ ಇಂದ್ರಿಯ ದಾಸ್ಯದಿಂದ ಹೊರಗೆಳೆದು ವಿವೇಕಯುಕ್ತರನ್ನಾಗಿ ಮಾಡುವನು. ಹೀಗೆ ಜಂಗಮ–ಭಕ್ತರ ಲೀಲೆ ಶಿವ–ಶಕ್ತಿಯರ ಲೀಲೆಯೇ ಸರಿ. ಈ ವಚನದ ಆರು ವಾಕ್ಯಗಳು ಸೃಷ್ಟಿಯ ಅವತರಣಿಕೆಯ ಬಗ್ಗೆ ಮಾತನಾಡಿದರೆ, ಕಡೆಯ ಎರಡು ವಾಕ್ಯಗಳು ಭವಜೀವಿಯ ಬಿಡುಗಡೆಯ ಬಗ್ಗೆ ಮಾತನಾಡುವುವು.

ಕ್ರಿಶ್ಚಿಯನ್ ಧರ್ಮಶಾಸ್ತ್ರದಲ್ಲಿ ಅವತಾರದ ಎರಡು ಕಲ್ಪನೆಯ ಬಗ್ಗೆ ಮಾತನಾಡುವುದುಂಟು. 1) ಸ್ವತಃ ದೇವರೇ ಭಕ್ತರ ಉದ್ಧಾರಕ್ಕೆ ಇಳಿದು ಬರುತ್ತಾನೆ ಎನ್ನುವುದು, ಮತ್ತು 2) ಸರ್ವವ್ಯಾಪಕ, ಸರ್ವಶಕ್ತನಾದ ದೇವರು ನೇರವಾಗಿ ಇಳಿದು ಖಂಡಿತವಾದ ಗರ್ಭದಿಂದ ಜನ್ಮಿಸುವುದಿಲ್ಲ. ಅವನು ಭಕ್ತರ ಉದ್ಧಾರಕ್ಕಾಗಿ ಕಾಣಿಸಿಕೊಳ್ಳುವನು. ಗುರು–ಜಂಗಮರ ರೂಪದಲ್ಲಿ ಮೊದಲ ವಿಚಾರ ಧಾರೆಗೆ Epiphany ಎಪಿಫನಿ ಎಂದು, ಎರಡನೆಯ ವಿಚಾರಧಾರೆಗೆ Theophany ಥಿಯೋಫನಿ ಎಂದು ಕರೆಯಲಾಗುತ್ತದೆ.

ಲಿಂಗಾಯತ ಧರ್ಮದ ತತ್ತ್ವಶಾಸ್ತ್ರವು ಮೊದಲ ವಿಚಾರವನ್ನು ಒಪ್ಪದು. "ಕೂಡಲ ಸಂಗಮ ದೇವಂಗೆ ಮಾತಾಪಿತರುಳ್ಳಡೆ ಹೇಳಿರೋ" "ಅಯೋನಿ ಸಂಭವನಯ್ಯ, ಸರ್ವ ಸ್ವತಂತ್ರನಯ್ಯಾ ಲಿಂಗವು" ಎಂಬ ವಾಕ್ಯಗಳಲ್ಲಿ ದೇವರು ಹುಟ್ಟನು ಎಂಬುದು ಸಿದ್ಧವಾಗುವುದು. ಆದರೆ ಕಷ್ಟದಲ್ಲಿ ಸಿಕ್ಕವನ ಉದ್ಧಾರಕ್ಕೆ ದೇವರು ಕಾಣಿಸಿಕೊಳ್ಳುವನು ಎಂಬುದರಲ್ಲಿ ವಿಶ್ವಾಸವಿದೆ. ಈ ಸಿದ್ಧಾಂತಕ್ಕೆ Theophany ಎಂದು ಹೆಸರು. ಜೀವಿಯು ಭವ ದುಃಖದಲ್ಲಿ, ಇಂದ್ರಿಯ ದಾಸ್ಯದಲ್ಲಿ ಬಿದ್ದಾಗ ಅವನನ್ನು ಪಾರುಗಾಣಿಸಲು ದೇವರು ಗುರು-ಲಿಂಗ-ಜಂಗಮ ರೂಪದಲ್ಲಿ ಧರೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಈ ವಿಚಾರವೇ ಬಸವಣ್ಣನವರ ವಚನದಲ್ಲಿ ವ್ಯಕ್ತವಾಗಿರುವುದು.

ಜೀವಿಯನ್ನು ದುಃಖದಲ್ಲಿ ಕೆಡಹಿ, ಆಡಬಿಟ್ಟು ಬಿದ್ದಾಗ ದೂರನಿಂತು ನೋಡುವ ಕ್ರೂರತಾಯಿಯಂತಲ್ಲ. ಮಗುವಿನ ಬೆನ್ನಲ್ಲಿ ಹರಿದಾಡುತ್ತಿದ್ದು, ಬಿದ್ದಾಗ ತಕ್ಷಣವೇ ಎತ್ತುವ ಮಮತಾಮಯಿ ತಾಯಿಯಂತೆ ದೇವರಿರುವನು. ಅದಕ್ಕಾಗಿ ಸೇವ್ಯನಾಗಿ ಬಂದು, ಭಕ್ತನನ್ನು ಸೇವಕನನ್ನಾಗಿ ಮಾಡಿ ಉದ್ಧರಿಸುವನು. ಪೂಜ್ಯ-ಪೂಜಕ ಲೀಲೆಯಲ್ಲಿ ಭಾಗವಹಿಸಿ ಜೀವರುಗಳನ್ನು ಪರಿಪೂರ್ಣಗೊಳಿಸುವನು.

ಬಸವಣ್ಣನವರು ಈ ವಚನದಲ್ಲಿ ತಮ್ಮ ವೈಯಕ್ತಿಕ ಸ್ಥಿತಿಯನ್ನು ಕುರಿತು ಹೇಳಿರಬೇಕು ಎಂದು ಸಹ ಅನ್ನಿಸುವುದು. " ನಾನು ಪ್ರಣವದ ಸಾಕಾರ, ಕೂಡಲ ಸಂಗಮದೇವರ ರಾಜತೇಜವನ್ನು ಹೊತ್ತವನು" ಎಂಬ ಆತ್ಮವಿಶ್ವಾಸ, ತಾವು ಹುಟ್ಟಿದ ಉದ್ದೇಶದ ಅರಿವು ಅವರಿಗೆ ಇದ್ದುದರಿಂದ "ನಾನು ಜ್ಞಾನ, ಚೈತನ್ಯ, ಕ್ರಿಯಾರೂಪದಿಂದ ನಿನ್ನೊಡನೆಯೇ ಬೆರೆದು ಸೃಷ್ಟಿಯಲ್ಲಿ ಸಾಗಿ ಬಂದೆ. ಸಗುಣದೇವರಾಗಿ ಜಂಗಮ ರೂಪದಲ್ಲಿ ಬಂದಾಗ ನಾನು ಸಾಕಾರ ರೂಪದಲ್ಲಿ ಭಕ್ತನಾಗಿ ನಿನ್ನನ್ನು ಪೂಜಿಸಿದೆ, ಸೇವಿಸಿದೆ" ಎಂಬ ಭಾವನೆ ವ್ಯಕ್ತವಾಗಿದೆ. ಇದೆಲ್ಲದರ ಉದ್ದೇಶವೇನೆಂದರೆ 'ದೇವನು ಅವ್ಯಕ್ತನು. ನಿರಾಕಾರ ವಿದ್ಯುತ್ತು ತನ್ನಿಂದ ತಾನೇ ಕೆಲಸ ಮಾಡಲಾರದು, ಅದು ಕಾರ್ಯೋನ್ಮುಖವಾಗಲು ತಂತಿಯ ಮಾಧ್ಯಮ ಬೇಕು. ಹಾಗೆಯೇ ಅವ್ಯಕ್ತದೇವನು ತನ್ನ ಮಣಿಹವನ್ನು ಪೂರೈಸಿಕೊಳ್ಳಲು ಬಸವಣ್ಣನು ವಾಹನವಾಗಿ ಅವತರಿಸಿದ್ದಾನೆ, ಸಾಧನವಾಗಿದ್ದಾನೆ.'

ಪಿಂಡಜ್ಞಾನ ಸ್ಥಲದಲ್ಲಿ ತನ್ನ ಅನುಭವಗಳ ವಿವರಣೆಗಿಂತ ವಿಶ್ವನಿರ್ಮಾಣ ಶಾಸ್ತ್ರ (Cosmology) ದ ವಿವೇಚನೆ ಇರುವುದರಿಂದ ಈ ವಚನ ವೈಯಕ್ತಿಕ ಚಿತ್ರಣವಲ್ಲ, ತಾತ್ವಿಕ ವಿವರಣೆ ಎನಿಸದಿರದು.

ಶಿವಯೋಗ ಸಾಮ್ರಾಟ ಅಲ್ಲಮ ಪ್ರಭುದೇವರು

—ಸೋದರಿ ಕುಮುದಾ

ಇಡೀ ಜಗತ್ತಿನ ಇತಿಹಾಸದಲ್ಲಿ ಎಲ್ಲಾ ಯೋಗಿಗಳೂ ಪಡೆಯದ, ಇಂದಿಗೂ ಪಡೆಯಲು ಕಷ್ಟಸಾಧ್ಯವಾಗಿಯೇ ಉಳಿದಿರುವ ವ್ಯೋಮಕಾಯ ಸಿದ್ಧಿ ಪಡೆದವರು, ಶೂನ್ಯ ಸಿಂಹಾಸನದ ಪ್ರಪ್ರಥಮ ಅಧ್ಯಕ್ಷರಾದ, ವೈರಾಗ್ಯ ಚಕ್ರವರ್ತಿಯಾದ ಶಿವಯೋಗಿ ಅಲ್ಲಮ ಪ್ರಭುಗಳು. ಅವರ ಜೀವನ ವೈವಿಧ್ಯಮಯ; ನಿಷ್ಠೆ-ನಿಯಮ, ಸಂಯಮ-ಸರಳತೆಯ ಸಾಕಾರ.

ಜನನ : ಶಿವಮೊಗ್ಗಾ ಜಿಲ್ಲೆಯಲ್ಲಿರುವ ಬಳ್ಳಿಗಾವಿ ಪ್ರಕೃತಿ ಸೌಂದರ್ಯದಿಂದ ವೈಭವಿಸುವ ಸುಂದರ ತಾಣ. ಎಂಟುನೂರು ವರ್ಷಗಳ ಹಿಂದೆ, ಆ ನಾಡು ತನ್ನದೇ ಆದ ಐತಿಹಾಸಿಕ ಮಹತ್ವದಿಂದ, ಸುಸಂಸ್ಕೃತಿಯಿಂದ ಮೆರೆಯುತ್ತಿತ್ತು. ಆ ಊರಿನ ನಾಗವಾಸಾಧಿಪತಿಯಾಗಿದ್ದ ನಿರಹಂಕಾರ ಮತ್ತು ಆತನ ಪತ್ನಿ ಸುಜ್ಞಾನಿಯ ಚಿದ್ಗರ್ಭದಲ್ಲಿ, ಅನೇಕ ವರ್ಷಗಳ ವ್ರತದ ಪ್ರತಿಫಲವಾಗಿ, ಯುಗಾದಿಯ ಪ್ರತಿಪದೆಯಂದು ಜನಿಸಿತೊಂದು ಚಿತ್ಕುಸು. ಬಾಲ್ಯದಿಂದಲೇ ತೀಕ್ಷ್ಣಮತಿಯಾಗಿದ್ದ ಅಲ್ಲಮ, ಎಲ್ಲವನ್ನೂ ಬಹುಬೇಗ ಗ್ರಹಿಸುತ್ತಿದ್ದ. ವಂಶಪರಂಪರಾಗತವಾಗಿ ಬಂದ ಮದ್ದಳೆ ನುಡಿಸುವುದನ್ನು ಆಡುತ್ತಾಡುತ್ತಲೇ ಕಲಿತ. ಸಕಲ ವಿದ್ಯೆಗಳಲ್ಲಿ ಪಾರಂಗತನಾಗುತ್ತಾ ಆತ್ಮಿಕ ಸಂಪತ್ತನ್ನು ಹೆಚ್ಚಿಸಕೊಳ್ಳತೊಡಗಿದ. ಆಧ್ಯಾತ್ಮಿಕ ಪಿಪಾಸೆ ಉತ್ಕಟವಾದಾಗ, ಯೋಗಸಾಧನೆಯ ಅಪೇಕ್ಷೆಯಿಂದ ಯೋಗಿಗಳನ್ನು ಸಂದರ್ಶಿಸ ತೊಡಗಿದ.

ಹೀಗೆ ಅಲ್ಲಮ, ಬಾಲ್ಯವನ್ನು ಕಳೆದು, ಯೌವನಕ್ಕೆ ಕಾಲಿರಿಸಿದಾಗ, ಎಲ್ಲರಂತೆ ಅವನ ಮನ ಲೌಕಿಕತೆಯೆಡೆಗೆ ಹರಿಯಲಿಲ್ಲ. ತಾನೇನನ್ನೋ ಸಾಧಿಸಲು ಬಂದವನೆಂಬ ಅರಿವು ಜಾಗ್ರತವಾಯಿತು. ಅಂತೆಯೇ ತಂದೆ-ತಾಯಿಗಳ ಮಮತೆಯ ಬಂಧನ ತೊರೆದು, ವಿಶಾಲವಾದ ಜಗತ್ತಿನೆಡೆಗೆ ನಡೆದ, ವಿಶ್ವಬಂಧುವಾಗಲು ಬಯಸಿ. ಜನ್ಮಭೂಮಿ ಬಳ್ಳಿಗಾವಿಯನ್ನು ಬಿಟ್ಟ ಅಲ್ಲಮ ಬನವಾಸಿಯನ್ನು ತಲುಪಿದ.

ಮಾಯಾಕೋಲಾಹಲ

ಎಂದಿನಂತೆ ರಾಜಕುಮಾರಿ ಮಾಯಾದೇವಿ ಮಧುಕೇಶ್ವರನ ಅರ್ಚನೆ, ಪೂಜೆ ಮುಗಿಸಿ, ತನ್ನ ನೃತ್ಯ ಸೇವೆಯನ್ನು ಪ್ರಾರಂಭಿಸಿದ್ದಳು. ಅದೇ ಆಗ ಮಿಂದು ಮಧುಕೇಶ್ವರನ ದರ್ಶನಕ್ಕಾಗಿ ಬಂದ ಅಲ್ಲಮ, ಗೆಜ್ಜೆಯ ನಾದಕ್ಕೆ ಮನಸೋತು ಅಲ್ಲಿಯೇ ನಿಂತ. ನಂತರ ಮೋಡಿಗೊಳಗಾದವನಂತೆ ಎದ್ದು, ಅಲ್ಲಿಯೇ ಇದ್ದ ಮದ್ದಳೆಯನ್ನು

ಆವೇಶದಿಂದ ನುಡಿಸತೊಡಗಿದ. ಅವನ ಕೈ ನಾಟ್ಯವಾಡಿತು, ಮದ್ದಳೆಯ ಮೇಲೆ. ಮದ್ದಳೆಯ ದನಿ ಕೇಳಿದ ಮಾಯಾದೇವಿ ಅದರ ಗತಿಗೆ ತನ್ನ ಹೆಜ್ಜೆಯನ್ನು ಹಾಕಲಾರದೆ ಸೋತು ನಿಂತಳು. ಎಂದೂ ಈ ರೀತಿಯ ಮದ್ದಳೆ ನುಡಿತವನ್ನು ಕೇಳದ ಮಾಯೆಗೆ, ನುಡಿಸಿದ ಕಲಾಕಾರನನ್ನು ನೋಡುವ ಕಾತುರ ಹೆಚ್ಚಿ, ಸಖಿಯರಿಗೆ ಆತನನ್ನು ಕರೆತರಲು ತಿಳಿಸಿದಳು. ಸಖಿಯರೊಡನೆ ಬಂದ ಅಲ್ಲಮನ ತೇಜಸ್ಸನ್ನು ಕಂಡು ಮೂಕಳಾಗಿ ನಿಂತಳು. ಹೊಂಬಣ್ಣದ ಮೈಕಾಂತಿ, ಸ್ಫುಟವಾದ ಅಂಗಸೌಷ್ಟವ, ನಕ್ಷತ್ರದಂತೆ ಹೊಳೆಯುತ್ತಿದ್ದ ತೀಕ್ಷ್ಣ ಕಂಗಳು, ಎಲ್ಲವನ್ನೂ ಬಿಟ್ಟ ಕಣ್ಣಿನಿಂದ ನೋಡುತ್ತಿದ್ದ ಮಾಯೆ, ಮದ್ದಳೆಯ ನಾದಕ್ಕೆ ಮನಸೋತಿದ್ದಳು. ಮಧುಕನಾಥನೇ ಈ ರೂಪದಲ್ಲಿ ಬಂದಿರುವನೆಂದು ಭಾವಿಸಿ ಅವನನ್ನು ತನ್ನ ಹೃದಯಾಧಿಪತಿಯಾಗಿ ಮಾಡಿಕೊಳ್ಳಬೇಕೆಂದು ಆಲೋಚಿಸಿದಳು. ಆದರೆ, ವಿಲಾಸ–ಭೋಗಗಳ ತುತ್ತ ತುದಿಯಲ್ಲಿದ್ದ ಸೌಂದರ್ಯರಾಶಿಯಾದ ಮಾಯೆಯನ್ನು ಕಂಡ ಅಲ್ಲಮನ ಮನ ಸ್ವಲ್ಪವೂ ವಿಚಲಿತವಾಗಲಿಲ್ಲ. ಮಾಯೆ ತನ್ನ ಸಖಿಯರಿಂದ, 'ಅವನು ಯಾರು? ಯಾವ ದೇಶದವನು?' ಎಂದು ತಿಳಿಯಲಿಚ್ಛಿಸಿದಳು. 'ನಾನು ದಿಕ್ಕೇಡಿ, ಯಾರು ಎಂಬುದನ್ನು ತಿಳಿಯಲೆಂದೇ ಹೊರಟಿರುವೆ' ಎಂಬ ಉತ್ತರ ಕೇಳಿ, ಈತನನ್ನು ಹೇಗಾದರೂ ಒಲಿಸಿಕೊಳ್ಳಲೇಬೇಕೆಂದು ನಿರ್ಧರಿಸಿದ ಮಾಯೆ, ಅದಕ್ಕೊಂದು ಉಪಾಯ ಮಾಡಿ, ಅವನನ್ನು ತನ್ನರಮನೆಗೆ ಬರುವಂತೆ ಆಹ್ವಾನಿಸಿ, ಅರಮನೆಗೆ ಹೊರಟಳು. ಬಂದವಳೇ ತಾಯಿ ಮೋಹಿನಿದೇವಿಯೊಡನೆ ಸಂಭಾಷಿಸುತ್ತಿದ್ದ ತಂದೆ ಮಮಕಾರ ಭೂಪಾಲನತ್ತ ಬಂದು, ಅಲ್ಲಮನ ಬಗೆಗೆ ಹೇಳಿ, ತಾನು ನೃತ್ಯವನ್ನು ಕಲಿಯುವುದಿನ್ನೂ ಸಾಕಷ್ಟಿದೆಯೆಂದೂ, ಆತನನ್ನು ಗುರುವಾಗಿಸಿಕೊಳ್ಳುವ ಇಚ್ಛೆ ತನ್ನದೆಂದೂ, ಅದಕ್ಕೆ ತಮ್ಮ ಸಮ್ಮತಿ ನೀಡಿರೆಂದು ಕೇಳಿದಳು. ಮಗಳ ಈ ಕೋರಿಕೆಯನ್ನು ಈಡೇರಿಸಲು ಸಂತೋಷದಿಂದ ಒಪ್ಪಿದ ಮಮಕಾರ, ಆದರದಿಂದ ಅಲ್ಲಮನನ್ನು ಬರಮಾಡಿಕೊಂಡ. ಕಾಯಸುಖಭೋಗಗಳನ್ನೇ ಸಮಸ್ತವೆಂದು ನಂಬಿಕೊಂಡು, ಸಿರಿಸಂಪದಗಳನ್ನೇ ಬಾಳ ನೆಲೆಗಟ್ಟಾಗಿರಿಸಿಕೊಂಡು ಕಾಮನ ಕೈಗೊಂಬೆಗಳಾಗಿ ಬಾಳುವ ಅರಮನೆಯ ಜನರನ್ನು ಪರಿವರ್ತಿಸುವ ಅದಮ್ಯ ಆಕಾಂಕ್ಷೆ ಪ್ರಭುದೇವನಲ್ಲಿ ಮೂಡಿತು. ಕತ್ತಲೆಯನ್ನು ನೋಡಿ ಬೆಳಗು ಅಂಜುವುದೇ? ಮಾಯೆಯೆಂಬ ನೊಣಕ್ಕೆ ವಿರಕ್ತಿಯ ಬೆಂಕಿ ಬೆದರುವುದೆ?

ಅರಮನೆಯನ್ನು ಪ್ರವೇಶಿಸಿದ ಅಲ್ಲಮನಿಗೆ ಹೆಜ್ಜೆ ಹೆಜ್ಜೆಗೂ ರಾಜೋಪಚಾರ ನಡೆಯುತ್ತಿತ್ತು. ಕೇವಲ ವಿನೋದಕ್ಕಾಗಿ ಮದ್ದಳೆ ಬಾರಿಸಿದುದು ಇಷ್ಟೆಲ್ಲಕ್ಕೂ ಕಾರಣವಾಗುವುದೆಂದು ಆತ ಕನಸು–ಮನಸ್ಸಿನಲ್ಲೂ ನೆನೆಸಿರಲಿಲ್ಲ. ವೈರಾಗ್ಯದ ಪಥ ಹಿಡಿದು ಆಧ್ಯಾತ್ಮ ಸಾಧನೆ ಮಾಡಬೇಕೆಂದಿರುವವನನ್ನು ಇಂಥ ವಿಲಾಸಮಯ ವಾತಾವರಣಕ್ಕೆ ತಂದು ನಿಲ್ಲಿಸಿದ ವಿಧಿಯ ಚತುರತೆಗೆ ಬೆರಗಾದ. ಹೇಗೂ ನಾಟಕದ ಪರದೆ

ಸರಿಸಿಯಾಗಿತ್ತು. ಕೊನೆಯವರೆಗೆ ನೋಡಿಯೇ ಬಿಡೋಣ ಎಂದು ನಿಶ್ಚಯಿಸಿ ತನ್ನ ವಸತಿಗಾಗಿ ಏರ್ಪಡಿಸಿದ್ದ ಕೋಣೆಯ ಒಳ ಹೊಕ್ಕ ಅಲ್ಲಮ ವಿಲಾಸ ಜೀವನದ ವೈವಿಧ್ಯ ಮುಖಗಳನ್ನು ಅವಲೋಕಿಸುತ್ತಿದ್ದಂತೆಯೇ, ಅವನ ಮನ ಮಾಯೆ ತನ್ನನ್ನು ಅರಮನೆಗೆ ಕರೆದು ತಂದ ಉದ್ದೇಶವನ್ನು ತಿಳಿಯಲೆತ್ನಿಸುತಿತ್ತು. 'ತಾನು ನಾಟ್ಯವಿಶಾರದನೆಂದು ರಾಜನ ಬಳಿಯಲ್ಲಿ ಹುಸಿನುಡಿದು ತನ್ನನ್ನು ನಾಟ್ಯಾಚಾರ್ಯನನ್ನಾಗಿ ನೇಮಿಸುವಂತೆ ಮಾಡಿದುದು, ಆಕೆಯ ಅಂತಃಪುರದಲ್ಲೇ ತನಗೆ ವಸತಿ ಏರ್ಪಡಿಸಿದುದು, ಸಖಿಯರ ಮೂಲಕ ಮನವನ್ನು ಚಂಚಲಗೊಳಿಸಲು ಪ್ರಯತ್ನಿಸುತ್ತಿರುವುದು,' ಇವೆಲ್ಲವನ್ನು ಸೂಕ್ಷ್ಮವಾಗಿ ವಿವೇಚಿಸಿದಾಗ, ಮಾಯಾದೇವಿಯ ದೂರಾಲೋಚನೆಯ ಚಿತ್ರಣ ಸ್ಪಷ್ಟವಾಗಿ ಅವನ ಕಣ್ಮುಂದೆ ನಿಂತಿತು. ಆಕೆಯನ್ನು ಪರಿವರ್ತಿಸಲು ಕೈಕೊಂಡ ಸಾತ್ವಿಕ ಉಪಾಯಗಳೆಲ್ಲ ಹುಸಿಯಾದವು. ಪರಿವರ್ತನೆ ಅಸಾಧ್ಯವೆಂದಾದಾಗ ಅಲ್ಲಮನು ಹೇಗಾದರೂ ಇಲ್ಲಿಂದ ಪಾರಾಗಬೇಕೆಂದು ಚಿಂತಿಸತೊಡಗಿದ.

ಅಲ್ಲಮನ ಊಹೆಯಂತೆ ಮಾಯೆ ಒಂದು ದಿನ ವಿಶೇಷವಾಗಿ ಅಲಂಕರಿಸಿಕೊಂಡು ಹೇಗಾದರೂ ಒಲಿಸಿಕೊಳ್ಳಬೇಕೆಂದು ಅವನತ್ತ ಬಂದಳು. ಅಲ್ಲಮನ ಮನದಲ್ಲಿ ದ್ವಂದ್ವಗಳ ಹೋರಾಟ ನಡೆದಿತ್ತು, ವಿಲಾಸ–ವೈರಾಗ್ಯಕ್ಕೆ ಮತ್ತು ಸಂಯಮ–ವಿಕಾರಗಳಿಗೆ. ಕೊನೆಗೂ ವೈರಾಗ್ಯ-ಸಂಯಮವೇ ಗೆದ್ದಿತು. ಪರಿಪರಿಯಿಂದ ಅವನೊಲಿಮೆಗಾಗಿ ಬೇಡಿದ ಮಾಯೆಯನ್ನು ನಿರ್ವಿಕಾರದಿಂದ ತಿರಸ್ಕರಿಸಿ, ಆ ಕ್ಷಣವೇ ಅರಮನೆಯನ್ನು ತೊರೆದು ಹೊರಟ.

ಗುರು ಕರುಣೆ

ಆಧ್ಯಾತ್ಮ ಕೃಷಿಕನಾದ ಅಲ್ಲಮನು ಹಲವಾರು ಮುನಿಗಳನ್ನು, ಯೋಗಿಗಳನ್ನು ಸಂದರ್ಶಿಸಿ, ಹಠ–ಲಯ–ರಾಜಯೋಗಾದಿಗಳನ್ನು ಕರಗತ ಮಾಡಿಕೊಂಡ. ಆದರೂ ಮನಸ್ಸಿಗೆ ತೃಪ್ತಿಯಿಲ್ಲ. ಹೀಗೆಯೇ ಒಂದು ದಿನ ಕಾಲುಕರೆದೊಯ್ದತ್ತ ನಡೆದ ಅಲ್ಲಮನಿಗೆ ಒಂದು ಸಮೃದ್ಧವಾದ ಸುಂದರವಾದ ತೋಟ ಕಾಣಿಸಿತು. ಆ ತೋಟದ ಮಾಲಿಕನಾದ ಗೊಗ್ಗಯ್ಯ ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ತಾನು–ತನ್ನವರು ಎಂಬ ಮೋಹದ ಜಾಲದಲ್ಲಿ ಸಿಲುಕಿದ್ದ ಗೊಗ್ಗಯ್ಯನನ್ನು ಕಂಡು ಅಲ್ಲಮ ಆತನ ಅಜ್ಞಾನಕ್ಕೆ ಮರುಗಿ 'ತನಗಾಗಿ, ತನ್ನವರಿಗಾಗಿ ಮಾತ್ರ ಬದುಕಿದರೆ ಸಾಲದು ಆತ್ಮನ ಆವಿಷ್ಕಾರಕ್ಕೆ ಶ್ರಮಿಸಿ, ಆಧ್ಯಾತ್ಮಿಕ ಕೃಷಿಯನ್ನು ಮಾಡಬೇಕು' ಎಂದು ನುಡಿದ. 'ಆಧ್ಯಾತ್ಮ ಕೃಷಿ ಮಾಡುವುದೆಂತು?' ಎಂದು ಪ್ರಶ್ನಿಸಿದ ಗೊಗ್ಗಯ್ಯನಿಗೆ, "ಆಧ್ಯಾತ್ಮಿಕ ಬೆಳಸನ್ನು ಬೆಳೆಯಬೇಕಾದರೆ, ಶರೀರವನ್ನೇ ಹೊಲವನ್ನಾಗಿಸಿಕೊಂಡು, ಮನವನ್ನೇ ಸಾಧನವನ್ನಾಗಿ ಮಾಡಿಕೊಂಡು, ಮರೆವೆಂಬ ಬೇರುಗಳನ್ನು ಕಿತ್ತು ಹಾಕಿ, ನಾನು ನನ್ನದೆಂಬ

ಮೋಹದ ಹೆಂಟೆಯನ್ನು ಒಡೆದು, ಬ್ರಹ್ಮ ಬೀಜವನ್ನು ಬಿತ್ತಿ, ಸದಾಚಾರದ ಗೊಬ್ಬರ ಹಾಕಿ, ಸದ್ಭಕ್ತಿಯ ನೀರೆರೆಯಬೇಕು. ಆಗ ಬರುವ ದಿವ್ಯಾನುಭವದ ಬೆಳೆ ಆತ್ಮನ ಹಸಿವನ್ನು ಹಿಂಗಿಸಬಲ್ಲುದು." ಎಂದು ವಿವರಿಸಿದ ಅಲ್ಲಮನ ಬಗ್ಗೆ ಭಕ್ತಿ ಹುಟ್ಟಿ ಗೊಗ್ಗಯ್ಯ ತನ್ನ ನಿಜವನರಿಯಲು ಮಾರ್ಗದರ್ಶನ ಮಾಡಬೇಕೆಂದು ಅಲ್ಲಮನಿಗೆ ಶರಣಾದ.

ಅಲ್ಲಮನು ಸಮೃದ್ಧವಾದ ಆ ತೋಟದಲ್ಲಿ ಕೆಲವಾರು ದಿನಗಳಿದ್ದು ಸಾಧನೆ ಮಾಡಲು ಇಚ್ಛಿಸಿದ. ಹೀಗೆ ಒಂದು ದಿನ ತೋಟದಲ್ಲಿ ಸುತ್ತಾಡುತ್ತಿದ್ದಾಗ ಮಣ್ಣಿನ ಮರೆಯಲ್ಲಿದ್ದ ಗವಿಯೊಂದು ಗೋಚರಿಸಿತು. ಕುತೂಹಲದಿಂದ ಗವಿಯೊಳಗೆ ಪ್ರವೇಶಿಸಿದ ಅಲ್ಲಮನಿಗೆ ತೇಜಸ್ವಿಯಾದ ಯೋಗಿಯೋರ್ವನ ದರ್ಶನವಾಯಿತು. ಆತನ ಕಣ್ಣುಗಳೆರಡೂ ಬೆಳಕಿನ ಕುಂಡಗಳಂತಿದ್ದವು. ಅಲ್ಲಮನಿಗೆ ಮೈರೋಮಾಂಚನಗೊಂಡು ಮೋಡಿಗೊಳಗಾದವನಂತೆ ತಪಸ್ವಿಯು ಕುಳಿತಿದ್ದೆಡೆಗೆ ಬಂದ. ಹತ್ತಿರ ಬರುತ್ತಿದ್ದಂತೆಯೇ ಪುಳಕಿತನಾಗಿ ಕುಳಿತು ಆ ಯೋಗಿಯ ಕರದಲ್ಲಿದ್ದ ಇಷ್ಟಲಿಂಗವನ್ನು ಅಲ್ಲಮನು ತನ್ನ ಕರದಲ್ಲಿ ಸ್ಥಾಪಿಸಿದ. ಲಿಂಗಪ್ರಾಣಿಯಾಗಿದ್ದ ಆ ಅನಿಮಿಷಯ್ಯನ ಇಷ್ಟಲಿಂಗವನ್ನು ದೇಹದಿಂದ ಬೇರ್ಪಡಿಸಿದ ಕ್ಷಣದಲ್ಲೇ ತನ್ನ ಪ್ರಾಣವನ್ನೂ ಅದರೊಡನೆ ಲೀನಗೊಳಿಸಿದ. ಅಲ್ಲಮನ ಮನಸ್ಸಿಗೆ ವ್ಯಥೆಯಾದರೂ, ಇವೆಲ್ಲ ದೇವನ ಲೀಲೆಯೇ ಇರಬೇಕು ಎಂದು ಕೊಂಡು, ಗುರುವಿನ ಪ್ರಾಣ ಲಿಂಗದಲ್ಲೇ ಅಡಗಿರುವಾಗ, ಗುರುವು ಸದಾ ನನ್ನೊಡನೆ ಇದ್ದಂತೆಯೇ ಎಂದು ತನ್ನನ್ನೂ ತಾನೇ ಸಮಾಧಾನ ಮಾಡಿಕೊಂಡ. ಗುರುವಿನ ಅನುಗ್ರಹ ಪಡೆದ ನಂತರ, ಅಸೀಮ ಶಕ್ತಿ ಮೈಗೂಡಿದಂತೆನಿಸಿತು, ಅಲ್ಲಮನಿಗೆ.

ದೀಪಧಾರಿ

ಸಿದ್ಧ ಪುರುಷರಾದ ಅಲ್ಲಮ ಪ್ರಭುಗಳು, ಮುಮುಕ್ಷುಗಳಿಗೆ, ಸಾಧಕರಿಗೆ ಮಾರ್ಗದರ್ಶನ ಮಾಡಬೇಕೆಂದು ಸಂಕಲ್ಪಿಸಿ, ಸಂಚಾರ ಕೈಕೊಂಡರು. ಹೀಗೆ ಹೊರಟ ಪ್ರಭುಗಳಿಗೆ ಮೊದಲು ಭೇಟಿಯಾದವಳು, ಮುಕ್ತಾಯಕ್ಕ. ತನ್ನ ಒಡಹುಟ್ಟಿದ ಅಣ್ಣನಾಗಿ, ಅಧ್ಯಾತ್ಮಿಕ ಪಥದ ಮಾರ್ಗದರ್ಶಕನಾಗಿ, ಗುರುವೂ ಆಗಿದ್ದ ಅಜಗಣ್ಣನು ಲಿಂಗೈಕ್ಯನಾದ ಸುದ್ದಿ ತಿಳಿದ ಆಕೆ, ದುಃಖತಪ್ತಳಾಗಿ, ದಿಕ್ಕುಗಾಣದೆ ಕುಳಿತಿದ್ದ ಸಮಯದಲ್ಲಿ ಅಲ್ಲಮನ ಆಗಮನವಾಯ್ತು; ಆಗ ವ್ಯಥಿತಳಾದ ಮುಕ್ತಾಯಕ್ಕನಿಗೆ ಸಮಾಧಾನ ಪಡಿಸುತ್ತಾ, "ದೇವನನ್ನು ಬೆರೆತು ಶಾಶ್ವತ ಸುಖ ಪಡೆದ ಮಹಾನುಭಾವಿ ಅಣ್ಣನಿಗಾಗಿ ಅಳುವುದು ಸಲ್ಲದು. ನೀನು ಧರಿಸಿರುವ ಇಷ್ಟಲಿಂಗದಲ್ಲಿಯೇ ನಿನ್ನ ಅಣ್ಣ ಅಡಗಿರುವಾಗ, ಅಗಲಿದೆ ಎಂಬ ಭಾವವೇಕೆ? ನಿನ್ನ ಅರಿವನ್ನೇ ಗುರುವಾಗಿಸಿಕೊ" ಎಂದು ಹೇಳಿದರು. ಅಧ್ಯಾತ್ಮವೆಂದರೆ, ಲೌಕಿಕ ಜೀವನಕ್ಕೆ ತಿಲಾಂಜಲಿಯಿತ್ತು,

ಎದುರಾಗುವ ಸಮಸ್ಯೆಗಳಿಗೆ ಬೆನ್ನು ತೋರಿ ಓಡುವ ಏಕಾಂತಜೀವಿಯಾಗಿರುವುದೆಂದರಿತಿದ್ದ ಆಕೆಗೆ, 'ಅಧ್ಯಾತ್ಮ ಜೀವನ ಬಾಳಿನಲ್ಲಿ ಅಳವಡಿಸಿಕೊಂಡು ಬರುವ ಕಷ್ಟ–ಸುಖಗಳನ್ನು ದೇವನ ಪ್ರಸಾದವೆಂದು ತಿಳಿದು ಸ್ವೀಕರಿಸಬೇಕೆಂದು ಪ್ರಭುಗಳು ಹೇಳಿದಾಗ, ಮುಕ್ತಾಯಕ್ಕನಿಗೆ ಆವರಿಸಿದ್ದ ಅಜ್ಞಾನದ ಪೊರೆ ಹರಿದು, ಸುಜ್ಞಾನದ ಬೆಳಕು ಗೋಚರಿಸಿತು. ಕೂಡಲೇ ಪ್ರಭುದೇವರ ಪಾದಕ್ಕೆರಗಿದ ಆಕೆಗೆ ಆಶೀರ್ವದಿಸಿ, ಮುಂದೆ ಸಾಗಿದರು.

ಸಿದ್ಧರಾಮನೊಡನೆ ಸಂವಾದ

ಮುಂದೆ ಸಾಗುತ್ತಿದ್ದಂತೆಯೇ ಪ್ರಭುದೇವರು ಸೊನ್ನಲಿಗೆಯತ್ತ ಬಂದರು. ಕರ್ಮಯೋಗಿ ಸಿದ್ಧರಾಮ ಲೋಕ ಕಲ್ಯಾಣಕ್ಕಾಗಿ ತನು–ಮನವನ್ನು ಸವೆಸುತ್ತಿರುವ ವಿಷಯ ಕರ್ಣಾಕರ್ಣಿಯಾಗಿ ತಲುಪಿದಾಗ, ಅಲ್ಲಮಪ್ರಭುಗಳಿಗೆ, ಆತನ ಲೌಕಿಕ ಚಟುವಟಿಕೆಗಳಲ್ಲಿನ ಆಸಕ್ತಿಯನ್ನು ಪಾರಮಾರ್ಥಿಕದತ್ತ ತಿರುಗಿಸಬೇಕೆಂದು ಮನಸ್ಸಾಯಿತು. ಸೊನ್ನಲಿಗೆಗೆ ಬಂದವರೆ, ನೇರವಾಗಿ ಸಿದ್ಧರಾಮನಲ್ಲಿಗೆ ಹೋಗದೆ, ಆತನ ಶಿಷ್ಯರೆದುರು ಬಂದು ಸಿದ್ಧರಾಮನನ್ನು ನಿಂದಿಸಲು ಪ್ರಾರಂಭಿಸಿದರು. ತಾವು ಅಲ್ಲಮನತ್ತ ಎಸೆದ ಕಲ್ಲುಗಳು ತಮಗೇ ಬಂದು ಬಡಿದಾಗ, ಗಾಬರಿಯಿಂದ ಯಾರೋ ಮಾಯಾವಿಯೊಬ್ಬ ಬಂದಿರುವನೆಂದು ಸಿದ್ಧರಾಮನಿಗೆ ತಿಳಿಸಿದರು. ಕೂಡಲೇ ಬಂದವರಾರೆಂದು ಅರಿಯಲೆತ್ನಿಸದೆ, ತನ್ನ ಉರಿಗಣ್ಣನ್ನು ತೆರೆದ, ಸಿದ್ಧರಾಮ. ಆ ಉರಿನೇತ್ರದಿಂದ ಹೊರಟ ಬೆಂಕಿಯನ್ನು ಪ್ರಭುದೇವರು ನಸುನಗುತ್ತಾ ತಮ್ಮ ಅಂಗಾಲಲ್ಲಿ ಅಡಗಿಸಿದರು. ಸಿದ್ಧರಾಮನಿಗೆ ತನ್ನ ಆವೇಶದಿಂದ ಪಶ್ಚಾತ್ತಾಪವಾಗಿ, ಪ್ರಭುಗಳ ಪಾದಹಿಡಿದು, ಕ್ಷಮೆಯಾಚಿಸಿದ. ಕರುಣೆಯಿಂದ ಹಿಡಿದೆತ್ತಿದ ಅಲ್ಲಮಪ್ರಭುಗಳು "ನಿನ್ನ ಎಲ್ಲ ಚಟುವಟಿಕೆಗಳನ್ನು ಆಧ್ಯಾತ್ಮಿಕದತ್ತ ಹರಿಸು, ಭೌತಿಕ ಕೆರೆಗಳನ್ನು ನಿರ್ಮಿಸಿದುದು ಸಾಕು, ಆಧ್ಯಾತ್ಮಿಕ ಕೆರೆಯನ್ನು ಕಟ್ಟು" ಎಂದು ಹೇಳಿದಾಗ, ಸಿದ್ಧರಾಮನಿಗೆ ಅಂತರಂಗವನ್ನು ಮಥಿಸಿದ ಅನುಭವವಾಗಿ, ತನಗೆ ಸರಿಯಾದ ಮಾರ್ಗದರ್ಶನ ಮಾಡಿರೆಂದು ಬೇಡಿದುದಕ್ಕೆ ತಾವು ಕಲ್ಯಾಣದತ್ತ ಹೊರಟಿರುವ ವಿಷಯ ತಿಳಿಸಿ, ನೀನೂ ಅಲ್ಲಿಗೆ ಬಂದರೆ, ನಿನಗೆ ಉತ್ತಮ ಮಾರ್ಗದರ್ಶನ ಸಿಗುವುದೆಂದರು. ಅಂತೆಯೇ ಸಿದ್ಧರಾಮ ಆಗಲೆಂದು ಒಪ್ಪಿ, ಅವನೊಡನೆ ಕಲ್ಯಾಣ ಪಟ್ಟಣಕ್ಕೆ ನಡೆದ.

ಶೂನ್ಯ ಪೀಠಾಧೀಶ

ಈರ್ವರೂ ಕಲ್ಯಾಣ ಸಮೀಪಿಸುತ್ತಿದ್ದಂತೆಯೇ ಬಸವಣ್ಣನವರ ಸುಧಾರಣೆಗಳು ನಾಡಜನರೆಲ್ಲರ ಬಾಯಲ್ಲಿ ತುಂಬಿದುದನ್ನು ಕಂಡು, ಬಸವಣ್ಣನ ಭವ್ಯ ವ್ಯಕ್ತಿತ್ವಕ್ಕೆ ಮನಸೋತು, ಎಂದು ಅವರನ್ನು ಕಂಡೇವೋ ಎಂಬ ಕಾತುರ

ಪ್ರಾರಂಭವಾಯ್ತು. ದೀನ ದಲಿತರ ಉದ್ಧಾರವನ್ನೇ ಧ್ಯೇಯವಾಗಿರಿಸಿಕೊಂಡ ಬಸವಣ್ಣನವರು, ವಿವಿಧ ಮುಖ ಕಾರ್ಯಗಳಿಗೆ ಅನುಭವ ಮಂಟಪವೆಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಸ್ಥಾಪಿಸಿ, ತನ್ಮೂಲಕ ತಮ್ಮೆಲ್ಲ ಚಟುವಟಿಕೆಗಳನ್ನು ಮಾಡುತ್ತಿದ್ದರು. ಹಾರುವನಿಂದ ಅಂತ್ಯಜನವರೆಗೆ ಯಾವ ಭೇದವಿಲ್ಲದೆ ಪ್ರವೇಶ ನೀಡಿ ಸಮಾನತೆ ತರಲು ಶ್ರಮವಹಿಸಿದ್ದರು. ಅನುಭವ ಮಂಟಪಕ್ಕೆ ಉತ್ತಮ ಜ್ಞಾನಿಯೋರ್ವನನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು, ಅಂಥ ಯೋಗ್ಯ ವ್ಯಕ್ತಿಯನ್ನು ಹುಡುಕುತ್ತಿರುವಾಗಲೇ ಅಲ್ಲಮ-ಸಿದ್ಧರಾಮರ ಶುಭಾಗಮನವಾಯ್ತು. ಬಸವಣ್ಣನವರಿಗೆ, 'ಅರಸುವ ಬಳ್ಳಿ ಕಾಲ್ತೊಡರಿದಂತೆ' ನಿಸಿ, ಪ್ರಭುಗಳಿಗೆ ಅನುಭವ ಮಂಟಪದ ಅಧ್ಯಕ್ಷತೆ ವಹಿಸಿಕೊಟ್ಟರು. ತಮ್ಮ ಸಾಧನಾ ಮಾರ್ಗದಲ್ಲಿ ಅನೇಕ ಯೋಗಿಗಳ ಬಳಿ ಅಭ್ಯಾಸ ಮಾಡಿ, ಅರಗಿಸಿಕೊಂಡಿದ್ದರೂ ತೃಪ್ತಿಸಿಗದ ಪ್ರಭು ದೇವರಿಗೆ ಬಸವಣ್ಣನವರ ಸನ್ನಿಧಿಗೆ ಬಂದು ಶಿವಯೋಗ ಸಾಧನೆಯಲ್ಲಿ ನಿರತವಾದಂದಿನಿಂದ ಅಪಾರ ತೃಪ್ತಿ, ಆನಂದ ದೊರೆತು, 'ಗುಹೇಶ್ವರ, ನಿಮ್ಮ ಶರಣ ಸಂಗನ ಬಸವಣ್ಣನ ಸಾನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ' ಎಂದು ಕೃತಜ್ಞತೆಯಿಂದ ವಿಶ್ವ ಗುರು ಬಸವಣ್ಣನನ್ನು ಕೊಂಡಾಡಿದ್ದಾರೆ.

ಕೆಲಕಾಲದ ಶಿವಯೋಗ ಸಾಧನೆಯಿಂದ, ತಮ್ಮ ಭಕ್ತಿಯಲ್ಲಿದ್ದ ಕೊರತೆಯನ್ನು ತುಂಬಿಕೊಂಡ ಬಳಿಕ, ಶೂನ್ಯ ಪೀಠಕ್ಕೆ ಸಮರ್ಥ ಅಧ್ಯಕ್ಷರೆನಿಸಿದ ಪ್ರಭುಗಳು ಮುಮುಕ್ಷುಗಳಿಗೆ, ಸಾಧಕರಿಗೆ ಉತ್ತಮ ಮಾರ್ಗದರ್ಶನ ನೀಡುತ್ತಾ ಮುನ್ನಡೆಸಿದರು. ಹೀಗಿರುವಾಗಲೇ ಉಡುತಡಿಯಿಂದ ವೈರಾಗ್ಯಮೂರ್ತಿ ಮಹಾದೇವಿಯ ಆಗಮನವಾಯ್ತು. ವಯಸ್ಸು ಕಿರಿದಾಗಿದ್ದರೂ ಆಕೆಯಲ್ಲಿರುವ ಜ್ಞಾನದಾಳವನ್ನರಿತ ಅಲ್ಲಮ ಪ್ರಭುಗಳು ಗೌರವಿಸಿದುದೇ ಅವರಲ್ಲಿದ್ದ ವಿನಯಕ್ಕೆ ಸಾಕ್ಷಿಯಾಗಿದೆ. ಸತ್ಯ ನಿಷ್ಠುರರಾಗಿದ್ದ ಅವರು, ಡಾಂಭಿಕರನ್ನು ಕಂಡರೆ, "ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು ! ಹಸಿವು ಹೋಹುದೆ ? ಅಂಗದ ಮೇಲೆ ಲಿಂಗ ಸ್ವಾಯತವಾದರೇನು? ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದರೆ, ಆ ಕಲ್ಲು ಲಿಂಗವೇ? ಮೆಳೆ ಭಕ್ತನೆ? ಇಂತಪ್ಪವರ ಕಂಡರೆ, ನಾಚುವೆನಯ್ಯಾ ಗುಹೇಶ್ವರಾ" ಎನ್ನುತ್ತಿದ್ದರು.

ದೇಶ ಸಂಚಾರ

ಮತ್ತೊಮ್ಮೆ ದೇಶ ಪರ್ಯಟನೆ ಕೈಗೊಂಡ ಪ್ರಭುಗಳು ಆಧ್ಯಾತ್ಮ ಜೀವಿಗಳ ಸಾಧನೆಯ ರಂಗವಾಗಿದ್ದ ಶ್ರೀಶೈಲ ತಲುಪಿದಾಗ, ಅಲ್ಲಿ ಅವರಿಗೆ ವಜ್ರ ಕಾಯ ಪಡೆದ ಗೋರಕ್ಷನ ಪರಿಚಯವಾಯಿತು. ತನ್ನ ಸಾಧನೆಯ ಬಗ್ಗೆ ಹೆಮ್ಮೆಯಿಂದ ಹೇಳಿದ ಗೋರಕ್ಷ, ಖಡ್ಗವೊಂದನ್ನು ಪ್ರಭುಗಳ ಕೈಗಿತ್ತು, ಹೊಡೆಯಲು ಸೂಚಿಸಿದ. ಖಡ್ಗ ಆತನ ಶರೀರವನ್ನಪ್ಪಿದಾಗ, ವಜ್ರಕ್ಕೆ ಹೊಡೆದಂತೆ 'ಖಣಲ್-ಖಣಲ್' ಎಂಬ ಶಬ್ದ

ಬಂತು. ನಂತರ ಪ್ರಭು ದೇವರು ಅದೇ ಖಡ್ಗವನ್ನು ಗೋರಕ್ಷನ ಕೈಗೆ ಕೊಟ್ಟು ತನಗೆ ಹೊಡೆಯಲು ತಿಳಿಸಿದಾಗ, 'ಬೇಡ ಬೇಡ........ಎಲ್ಲಿಯಾದರೂ ಸತ್ತೀಯ ಹೋಗು' ಎಂದ. ಆದರೂ ಹಟಬಿಡದೇ ಇದ್ದಾಗ, ಗೋರಕ್ಷ ಖಡ್ಗವನ್ನು ತೆಗೆದುಕೊಂಡು ಪ್ರಭುಗಳತ್ತ ಬೀಸಿದ. ಆಗ ಖಡ್ಗವನ್ನು ಗಾಳಿಯಲ್ಲಿ ತೂರಿದಂತೆನಿಸಿತು. ಮತ್ತೆ ಮತ್ತೆ ಹೊಡೆದ. ಆದರೂ ಪ್ರಭುಗಳು ನಸುನಗುತ್ತ ನಿಂತಿದ್ದರು. ವ್ಯೋಮಕಾಯ ಸಿದ್ಧಿಪಡೆದ ಅವರ ದೇಹ ಯಾರ ಕೈಗೂ ಸಿಗುತ್ತಿರಲಿಲ್ಲ. ನಡೆದರೆ ಹೆಜ್ಜೆ ಮೂಡುತ್ತಿರಲಿಲ್ಲ, ನಿಂತರೆ ನೆರಳು ಬೀಳುತ್ತಿರಲಿಲ್ಲ. ಇದನ್ನು ಅರಿತ ಗೋರಕ್ಷ ಬೆರಗಾದ. ತನ್ನ ಸಾಧನೆ ಪ್ರಭುಗಳ ಸಾಧನೆಯ ಮುಂದೆ ಕ್ಷುಲ್ಲಕವೆನಿಸಿತು. ಆಗ ಪ್ರಭುಗಳು "ನಶ್ವರವಾದ ಈ ಶರೀರದ ಸಿದ್ಧಿಗೇಕಿಷ್ಟು ಹೆಮ್ಮೆ ಪಡುವೆ? ಇವಾವೂ ನಿನ್ನ ಮೋಕ್ಷಕ್ಕೆ ಕಾರಣವಲ್ಲ" ಎನ್ನುತ್ತಾ ಆತನಿಗೆ ಶಿವಯೋಗದ ರಹಸ್ಯವನ್ನು ತಿಳಿಸಿ, ಅನುಗ್ರಹಿಸಿ ಮುಂಸಾಗಿದರು. ಹೀಗೆ ಅನೇಕರಿಗೆ ಅನೇಕ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಾ ಮತ್ತೆ ಕಲ್ಯಾಣಕ್ಕೆ ಬಂದು, ಮತ್ತೊಮ್ಮೆ ಶೂನ್ಯ ಸಿಂಹಾಸನಾಧೀಶನಾಗಿ ಬಸವಣ್ಣನವರ ಎಲ್ಲ ಕಾರ್ಯಗಳಲ್ಲಿ ತಮ್ಮದೇ ಆದ ಸಲಹೆಗಳನ್ನು ಕೊಡುತ್ತಾ ಸಹಕರಿಸಿದರು. ಕಲ್ಯಾಣದಲ್ಲಿ ಕ್ರಾಂತಿ ಸಂಭವಿಸುವ ಪೂರ್ವದಲ್ಲಿಯೇ ಕಲ್ಯಾಣವನ್ನು ತೊರೆದು, ಪ್ರಭುಗಳು ತಮಗೆ ಅತ್ಯಂತ ಪ್ರಿಯವೆನಿಸಿದ್ದ ತಾಣವಾದ ಕದಳೀಬನಕ್ಕೆ ಹೋಗಿ, ತಮ್ಮ ಭೌತಿಕ ಕಾಯವನ್ನು, ಮಹಾಬಯಲಿನಲ್ಲಿ ಬಯಲಾಗಿಸಿದರು.

ಸಂದೇಶ ಸೌರಭ

ಅಲ್ಲಮ ಪ್ರಭುಗಳು ಭೌತಿಕ ಕಾಯವನ್ನು ಅಂದೇ ತ್ಯಜಿಸಿದ್ದರೂ, ಸಾಹಿತ್ಯ-ವಾಙ್ಮಯ ಶರೀರಿಯಾಗಿ ಇಂದಿಗೂ ನಮ್ಮೆಲ್ಲರ ಮಧ್ಯೆ ಇರುವರು. ಅವರ ವ್ಯಕ್ತಿತ್ವ ಎಷ್ಟು ಘನವಾಗಿ, ಉನ್ನತವಾಗಿದ್ದಿತೋ ಅದರಂತೆ ಅವರು ನಮಗೆ ಕೊಟ್ಟಿರುವ ವಚನಗಳೂ ಸಹ ಉನ್ನತ-ತತ್ವಭರಿತವಾಗಿವೆ. ಇವರ ಬೆಡಗಿನ ವಚನಗಳು ಕಬ್ಬಿಣದ ಕಡಲೆಯಂತಿದ್ದರೆ, ಇನ್ನು ಕೆಲವು ಸುಲಿದ ಬಾಳೆಯಂತಿವೆ. ನ್ಯಾಯ ನಿಷ್ಠುರಿಗಳಾದ ಪ್ರಭುಗಳು ದೋಷ ಎಲ್ಲೇ ಇರಲಿ, ಯಾರಲ್ಲೇ ಇರಲಿ ಅದನ್ನು ಖಂಡಿಸುತ್ತಿದ್ದುದು ವೈಶಿಷ್ಟ್ಯಪೂರ್ಣವಾದುದು. ಅವರು ವಚನದಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಗೊಳಿಸುವ ರೀತಿಗೆ, ಅನುಭಾವಿಗಳು, ಸಾಹಿತಿಗಳು, ತತ್ತ್ವಜ್ಞಾನಿಗಳೆಲ್ಲರೂ ತಲೆದೂಗುವಂತಿದೆ. 'ಮಾತೆಂಬುದು ಜ್ಯೋತಿರ್ಲಿಂಗ'ವೆಂದು ನುಡಿದ ಅಲ್ಲಮ ಪ್ರಭುಗಳ ಒಂದೊಂದು ವಚನವೂ ಸುಜ್ಞಾನ ದೀಪ್ತಿಯಾಗಿ ಎಲ್ಲರಿಗೆ, ಎಲ್ಲಕಾಲಕ್ಕೆ ಮಾರ್ಗದರ್ಶನ ಮಾಡುವಂತಿವೆ. ಸಾಮಾನ್ಯ ರೀತಿಯ ಉಪಮೆಗಳ ಮೂಲಕ ಆಧ್ಯಾತ್ಮ ತತ್ತ್ವಗಳನ್ನು ಬಿಂಬಿಸುವ ಕಲೆ ಕರಗತವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿದೆ, ಈ ವಚನ.

ಕಾಲುಗಳೆರಡು ಗಾಲಿ ಕಂಡಯ್ಯ; ದೇಹವೆಂಬುದು ತುಂಬಿದ ಬಂಡಿ ಕಂಡಯ್ಯ

ಬಂಡಿಯು ಹೊಡೆವರ್ರೈವರು ಮಾನಿಸರು; ಒಬ್ಬರಿಗೊಬ್ಬರು ಸಮವಿಲ್ಲವಯ್ಯ
ಅದರಿಚ್ಛೆಯನರಿದು ಹೊಡೆಯದಿದ್ದರೆ, ಅದರಚ್ಚು ಮುರಿಯಿತ್ತು ಗುಹೇಶ್ವರಾ.

ಇಂಥ ಸುಂದರ ಉಪಮೆಯನ್ನೊಳಗೊಂಡ ವಚನಗಳಲ್ಲದೆ, ತಾತ್ತ್ವಿಕವಾದ ಅನೇಕ ವಚನಗಳು ತತ್ತ್ವಜ್ಞಾನಿಗಳಿಗೆ ಉದಿಸುವ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡುವಂತಿವೆ. ಅಂಥ ತತ್ತ್ವಭರಿತವಾದ ಒಂದು ವಚನ ಕೆಳಗೆ ಕೊಡಲಾಗಿದೆ.

ಆದಿಯಾಧಾರವಿಲ್ಲದಂದು,
ಹಮ್ಮು ಬಿಮ್ಮುಗಳಿಲ್ಲದಂದು,
ಸುರಾಳ-ನಿರಾಳಗಳಿಲ್ಲದಂದು,
ಶೂನ್ಯ-ನಿಶೂನ್ಯವಿಲ್ಲದಂದು,
ಸಚರಾಚರವೆಲ್ಲ ರಚನೆಗೆ ಬಾರದಂದು,
ಗುಹೇಶ್ವರಾ, ನೀನೊಬ್ಬನೇ ಇದ್ದೆಯಲ್ಲಾ ಇಲ್ಲದಂತೆ.

ಈ ವಚನವನ್ನು ಓದಿದಾಗ, ಅವರ ಜ್ಞಾನದ ಔನ್ನತ್ಯದ ಅರಿವಾಗದಿರದು. ದೊಡ್ಡ ದೊಡ್ಡ ತತ್ತ್ವಜ್ಞಾನಿಗಳಿಗೆ ಬಿಡಿಸಲಾರದ ಸಮಸ್ಯೆಯಾದ, ಸ್ವಯಂಭುವಿನ ಅಥವಾ ನಿಷ್ಕಲಲಿಂಗ (Transcendental Soul) ಕಲ್ಪನೆಯನ್ನು ಆರು ಸಾಲಿನ ವಚನದಲ್ಲಿ ಹೇಳಿರುವ ಅವರ ಕಲೆ, ಅದ್ಭುತವಾದದ್ದು. ಸೃಷ್ಟಿಯ ರಚನೆಯಾಗುವ ಪೂರ್ವದಲ್ಲಿ ದೇವರು ಹೇಗಿದ್ದ? ಎಂಬ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ಸೃಷ್ಟಿಯು ಆದಿಯಾದರೆ, ಸೃಷ್ಟಿಕರ್ತ ಅನಾದಿ. ಈ ಆದಿ-ಆಧಾರ ಎರಡೂ ಇಲ್ಲದಾಗ, ಸರ್ವಾಧಾರನಾಗಿ ತಾನೇ ತಾನಾಗಿ, ದೇವನಿದ್ದ. ಹಮ್ಮು ಬಿಮ್ಮುಗಳಿಲ್ಲದೆ, ಎಲ್ಲ ದ್ವಂದ್ವಗಳನ್ನು ಮೀರಿದ ಪರವಸ್ತು ತಾನಾಗಿ, ಸಚರಾಚರ, ಜಡಾಜಡ ವಸ್ತುಗಳನ್ನು ರಚಿಸುವ ಪೂರ್ವದಲ್ಲಿ ನಿರ್ವಿಕಾರಿಯಾಗಿ, ನಿರಂಜನನಾಗಿ, ಪರಮಾತ್ಮನಿದ್ದ. ಹೇಗಿದ್ದನೆಂದರೆ, ಇಲ್ಲದಂತೆ ಇದ್ದ. ಅವನಿದ್ದಾನೆಂದು ಗುರುತಿಸಲಿಕ್ಕೆ ಯಾರೂ ಇರಲಿಲ್ಲವಾದ ಕಾರಣ. ಇಲ್ಲದಂತೆ ಇದ್ದ. ಸೃಷ್ಟಿಯು ರಚನೆಗೆ ಕಾರಣಕರ್ತೃವಾಗದೆ. ಮಗುವಿಲ್ಲದಾಗ ತಾಯಿಯಾಗದೆ ಕನ್ಯೆಯಾಗಿ ಇರುವಂತೆ ದೇವನೂ ಸಹ ಸ್ವಯಂಭುವಾಗಿ ಇದ್ದನೆಂಬ ಸುಂದರ ಕಲ್ಪನೆಯನ್ನು ನೀಡಿರುವುದೇ ಪ್ರಭುಗಳಲ್ಲಿದ್ದ ಜ್ಞಾನಕ್ಕೆ, ವಿವೇಚನಾ ಶಕ್ತಿಗೆ ಪ್ರತಿರೂಪದಂತಿದೆ ಈ ಮೇಲಿನ ವಚನ.

(ಯುಗಾದಿಯ ಪ್ರತಿಪದೆಯಂದು ಪ್ರಭುದೇವರ ಜಯಂತಿ. ಅದರ ಸ್ಮರಣಾರ್ಥ ಈ ಲೇಖನ.)

ಅನುಭಾವಿಗಳ ದೃಷ್ಟಿಯಲ್ಲಿ "ಜ್ಯೋತಿಷ್ಯ ಶಾಸ್ತ್ರ"

—ಷಣ್ಮುಖಯ್ಯ ಅಕ್ಕುರಮಠ, ಎಂ.ಎ.

ಜ್ಯೋತಿಃಶಾಸ್ತ್ರವು ಬಹಳ ಪುರಾತನವಾದುದು. ಪ್ರಾಚೀನ ಜಗತ್ಪ್ರಸಿದ್ಧ ನಾಗರಿಕರಾದ ಇಜಿಪ್ತ, ಬ್ಯಾಬಿಲೋನಿಯಾ, ಚೈನಾದೇಶದವರು ಇದರಲ್ಲಿ ಅಪಾರ ಶ್ರದ್ಧೆ ಇಟ್ಟಿದ್ದರು. ಅಲ್ಲದೆ ಇಜಿಪ್ತ ಬ್ಯಾಬಿಲೋನಿಯಾದ ಪ್ರಾಚೀನ ನಾಗರಿಕರು ಇದರ ಅಭಿವೃದ್ಧಿಗೆ ಕಾರಣರಾದ ಸಂಗತಿ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಜಗತ್ತಿನಲ್ಲೆಲ್ಲ ಅಧಿಕ ಪ್ರಸಿದ್ಧಿ, ಅತ್ಯಧಿಕ ಪ್ರಚಾರ ಹೊಂದಿದ ಶಾಸ್ತ್ರ ಜ್ಯೋತಿಷ್ಯವೆನ್ನುವದರಲ್ಲಿ ಬಹುಶಃ ಭಿನ್ನಾಭಿಪ್ರಾಯವಿರಲಾರದು.

ಜ್ಯೋತಿಃ ಶಾಸ್ತ್ರಕ್ಕೆ ವಿಜ್ಞಾನವೆಂದು ಕರೆದು ವಿಜ್ಞಾನದಷ್ಟೇ ಜನಪ್ರಿಯ ಹೊಂದಿದ, ವಿಜ್ಞಾನದಷ್ಟೆ ಸಮಾನ ಮನ್ನಣೆಗೆ ಪಾತ್ರವಾದ ಹಾಗೂ ಜ್ಯೋತಿಷಿಗಳೂ ವಿಜ್ಞಾನಿಗಳ ಸಮಾನ ಪಂಕ್ತಿಯಲ್ಲಿ ಗೌರವಕ್ಕೆ ಪಾತ್ರರು ಎನ್ನುವ ವಿಷಯವನ್ನು ವಿದ್ವಾಂಸರಾದ -ಸಿಡ್ನಿ. ಕೆ. ಬೆನ್ನೆಟ್ಟ್ ಎಂಬುವವರು ಹೀಗೆ ಹೇಳುತ್ತಾರೆ:

Astrology's scientists and students are numberd by hundreds among the world's greatest of all time. Students of this science are in very good company, for they are standing side by side with Moses, Newton, Emerson, Kepler, Hermes, Plato........Copernicus, Galileo........and countless other guardians of wisdom in all ages and in all lands."

[Astrology for all by Bhawani Mishra-Page 10]

ಮೇಲ್ಕಂಡ ಅಭಿಪ್ರಾಯದಲ್ಲಿ ಜ್ಯೋತಿಃ ಶಾಸ್ತ್ರದ ಬಗ್ಗೆ ಅವರ ಭಾವನೆ ಏನು? ಎನ್ನುವದು ವ್ಯಕ್ತವಾಗುತ್ತದೆ. ಜಗತ್ಪ್ರಸಿದ್ಧ ನಾಟಕಕಾರ ಶೇಕ್ಸಪೀಯರ್‌ನೂ ಇದರಲ್ಲಿ ಶ್ರದ್ಧೆ ಹೊಂದಿದ್ದನು. ಉದಾಹರಣೆಗೆ-

"If I do wake, some planet strike me down"
(Titus Andronicus II–IV)

"And shake the yoke of inauspicious stars"
(Romeo and Juliet V–III)

"When beggars die, there are no comets seen"
(Julius ceaser II–ii)

ಮೇಲ್ಕಂಡ ಮಾತುಗಳನ್ನು ಪಾತ್ರಗಳ ಮುಖಾಂತರ ಹೇಳಿಸಿದ್ದರೂ ಅದು ನಾಟಕಕಾರನ ಅಭಿಪ್ರಾಯವೂ ಹೌದು.

ಹೀಗೆ ಜ್ಯೋತಿಃಶಾಸ್ತ್ರ ಎಲ್ಲ ದೇಶಗಳ–ಎಲ್ಲ ಕಾಲದ–ಎಲ್ಲರ ಕುತೂಹಲಕ್ಕೆ ಪಾತ್ರವಾಗಿದೆ ಎಂಬುದು ನಿಜಸಂಗತಿ.

ಇನ್ನು ಭಾರತದಲ್ಲಿ ಈ ಶಾಸ್ತ್ರದ ಉಗಮ ವೇದದಲ್ಲಿ: ವೇದದ ಷಡಂಗಗಳಲ್ಲಿ ಇದೂ ಒಂದಾಗಿದೆ. ಶಿಕ್ಷಾ, ಛಂದಸ್ಸು, ಕಲ್ಪ, ಜ್ಯೋತಿಷ್ಯ, ವ್ಯಾಕರಣ, ನಿರುಕ್ತ ಇವೇ ಆ ಅಂಗಗಳು. ಇವುಗಳಲ್ಲಿ ಜ್ಯೋತಿಷ್ಯವು ವೇದ ಪುರುಷನ 'ಚಕ್ಷು' ವೆಂಬ ಗೌರವಕ್ಕೆ ಪಾತ್ರವಾಗಿದೆ. ಸಹಸ್ರಾರು ವರ್ಷದ ಇತಿಹಾಸವನ್ನು ಪಡೆದ ಈ ಶಾಸ್ತ್ರವನ್ನು ಋಷಿಗಳು ಅಭ್ಯಸಿಸಿ ಜೀವನದಲ್ಲಿ ಪ್ರಯೋಗಮಾಡಿ ಪರೀಕ್ಷಿಸಿ ಸಿದ್ಧಾಂತಗಳನ್ನು ಕಂಡು ಹಿಡಿದಿದ್ದಾರೆ.

ಅಪ್ರತ್ಯಕ್ಷಾಣಿ ಶಾಸ್ತ್ರಾಣಿ ವಿವಾದಸ್ತೇಷು ಕೇವಲಂ ।
ಪ್ರತ್ಯಕ್ಷಂ ಜ್ಯೋತಿಷಂ ಶಾಸ್ತ್ರಂ ಚಂದ್ರಾರ್ಕೌ ಯತ್ರ ಸಾಕ್ಷಿಣೌ ॥
(ಹೋರಾಕ್ರೃಷ್ಣೀಯ)

ಶಾಸ್ತ್ರಗಳು ಪರವಸ್ತುವಿನ ಬಗ್ಗೆ ಸಾಕಷ್ಟು ಚರ್ಚಿಸಿ ಚರ್ಚಿಸಿ ವ್ಯರ್ಥ ಶ್ರಮಪಟ್ಟವು ಅವುಗಳಿಗೆ ಸತ್ಯದ ನೆಲೆ ತೋರಲಿಲ್ಲ! ಆದರೆ ಜ್ಯೋತಿಃ ಶಾಸ್ತ್ರ ಪ್ರತ್ಯಕ್ಷ ನಿದರ್ಶನಕ್ಕೆ ಬರುತ್ತದೆ (ಉದಾ: ಗ್ರಹಣಕಾಲ ನಿರ್ಣಯ) ಹೀಗೆಂದು ಇದರ ಮಹಿಮೆ ಕೊಂಡಾಡಿದವರೂ ಇದ್ದಾರೆ. ವೇದಾಂಗವಾದ ಈ ಶಾಸ್ತ್ರದ ಬೆಳೆವಣಿಗೆಗೆ ವರಾಹಮಿಹಿರ, ಕಾಳಿದಾಸ, ವರರುಚಿ, ಕಾಶ್ಯಪ, ನೀಲಕಂಠ, ಜಯದೇವ, ಗಣಪತಿ, ಬ್ರಹ್ಮದೇವ, ಭಾಸ್ಕರಾಚಾರ್ಯ, ಆರ್ಯಭಟ, ಬ್ರಹ್ಮಗುಪ್ತ ಮೊದಲಾದವರು ಕಾರಣರಾಗಿದ್ದಾರೆ.

ಪ್ರಾಚೀನ ಕಾಲದಿಂದಲೂ ಜ್ಯೋತಿಷ್ಯ ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿದೆ, ಉಳಿದು ಬಂದಿದೆ. ಮಾನವನ ಆಗುಹೋಗುಗಳಿಗೆಲ್ಲ ಇದು ಮೂಲವಾಯಿತು. ಗ್ರಹಗಳೂ ಮಾನವನ ಬದುಕಿನ ಎಲ್ಲ ಏರು–ಪೇರುಗಳಿಗೆ ಕಾರಣವೆನ್ನುವ ನಂಬಿಕೆ ಬಲವಾಗಿ ಬೆಳೆದು ಗ್ರಹಗಳಿಗೂ ದೈವತ್ವದ ಪಟ್ಟಬಂದಿತು. ಶೃತಿಗಳ ಕಾಲದ ಜ್ಯೋತಿಷ್ಯದ ಮುಖವಾಡ ಸ್ಮೃತಿಗಳ ಕಾಲದಲ್ಲಿ ಬದಲಾವಣೆ ಹೊಂದಿತು. ಧರ್ಮದ ಅಂಗವಾಗಿ ಇದು ಬೆಳೆದದ್ದರಿಂದ–ಹಿಂದೂ ಧರ್ಮದಲ್ಲಾದ ಅವ್ಯವಸ್ಥೆ ಇಲ್ಲೂ ನುಗ್ಗಿತು. ಅದೇನೆಂದರೆ ಗ್ರಹಗಳಿಗೂ 'ವರ್ಣಾಶ್ರಮ' ಪದ್ಧತಿಯ 'ಜನ್ಮಾಂತರಗಳ' 'ಕರ್ಮ

ಸಿದ್ಧಾಂತ'ದ ಬಣ್ಣ ಬಳಿಯಲಾಯಿತು. ಕ್ರಮೇಣ ಪುರಾಣಗಳ ಕಾಲದಲ್ಲಿ ವೈಜ್ಞಾನಿಕ ದೃಷ್ಟಿ ಸರಿದು–ಬಹುದೂರ ಸರಿದು ದುರಾದೃಷ್ಟದಿಂದ ಜ್ಯೋತಿಷ್ಯ 'ವಿಜ್ಞಾನ'ವಾಗದೆ ಪೌರಾಣಿಕ ಧರ್ಮವಾಯಿತು. ಸತ್ಯದೃಷ್ಟಿ ಕಡಿಮೆಯಾಗಿ ಶ್ರದ್ಧಾದೃಷ್ಟಿ ಬೆಳೆಯಿತು.

ನವಗ್ರಹಗಳೂ ದೇವತೆಗಳಾದವು! ಇದಕ್ಕೆಲ್ಲ ಕಾರಣ–ಹಿಂದುಗಳ ದಟ್ಟವಾದ ಧರ್ಮಶ್ರದ್ಧೆಯ ನೆರಳು ಜ್ಯೋತಿಷ್ಯಶ್ಯಾಸ್ತ್ರದ ಮೇಲೆ ಬಿದ್ದುದು. ಇದರಿಂದಾಗಿ ಜನಗಳಲ್ಲಿ ಜ್ಯೋತಿಷ್ಯದ ಬಗ್ಗೆ ಅಂಧಾನುಕರಣೆ, ಮೂಢನಂಬಿಕೆ, ಕಂದಾಚಾರಗಳು ಬೆಳೆದುಬಂದವು.

ಮನುಷ್ಯ ಸ್ವಾಭಾವಿಕವಾಗಿ 'ಆಶಾಜೀವಿ'; ಬದುಕುವ ಆಶೆಯ ಜೊತೆಗೆ ಮುಂದೆ ಏನಾಗುವದೆನ್ನುವ ಕುತೂಹಲ ಪ್ರತಿಯೊಬ್ಬನಿಗೂ ಇರುತ್ತದೆ. ಇದು ಮಾನವನ ಸಹಜ ಪ್ರವೃತ್ತಿಯೂ ಹೌದು. ಮನೋ ವೈಜ್ಞಾನಿಕವೂ ಹೌದು. ಮಾನವನ ಈ ಪ್ರವೃತ್ತಿಯೇ ಜ್ಯೋತಿಷ್ಯ ಶಾಸ್ತ್ರದ ಚಲಾವಣೆಗೆ ಮುಖ್ಯಕಾರಣವಾಗಿದೆ. ಈ ಶಾಸ್ತ್ರದಲ್ಲಿ ಸಮರ್ಥರಾದವರೂ ಇದ್ದರು ಎನ್ನುತ್ತಾನೆ ಕಾಳಿದಾಸ ತನ್ನ ಉತ್ತರ ಕಲ್ಪಾಮೃತದಲ್ಲಿ

ಶಾಸ್ತ್ರಂ ಸಮ್ಯಗಧೀತ್ಯ ಚಾಪಿ ಸುಧಿಯೋ ಬುಧ್ವಾವದಂತ್ಯುತ್ತಮಾಃ ।
ಕೋ ಜಾನಾತಿ ನಕೋಪಿ ಯದಿ ಚೇತ್ ಜಾನಾತಿ–ಚೈಕಃ ಸ್ವಯಂ

(ಶಾಸ್ತ್ರವನ್ನು ಪೂರ್ತಿಯಾಗಿ ಬಲ್ಲವರು ಎಲ್ಲಿಯಾದರೂ ಇರುವರೇ ? ಇರದೆ ಏನು ? ತಿಳಿದವರು ತಮ್ಮಷ್ಟಕ್ಕೆ ತಾವೇ ಇರುವರು)

ಆದರೆ ಜನರನ್ನು ಕೂಡಿಸಿ ಕರೆದು ಹೇಳಹೋಗುವುದಿಲ್ಲ ಎನ್ನುತ್ತಾನೆ. ಆದರೂ ಇಂಥವರ ಸಂಖ್ಯೆ ಕಡಿಮೆ ಇದ್ದಿತು. ಕ್ರಮೇಣ ಸಮಾಜದ ಮಾರುಕಟ್ಟೆಯಲ್ಲಿ ಜ್ಯೋತಿಷ್ಯಕ್ಕೆ ಗಿರಾಕಿಗಳಿಂದ ಸಾಕಷ್ಟು ಬೇಡಿಕೆ ಇರುವಾಗ ಬಹುಜನ–ಅಶಿಕ್ಷಿತರ, ಅಪ್ರಬುದ್ಧರ ಕೈಗೆ ಸಿಕ್ಕು ಅವರು ಹೊಟ್ಟೆ ಪಾಡಿಗಾಗಿ ಹಾದಿ–ಬೀದಿಯಲ್ಲಿ ಇದನ್ನು ಮಾರಿ ಜೀವಿಸತೊಡಗಿದಾಗ 'ಶಾಸ್ತ್ರ'ವು ಅವನತಿಯ ಹಾದಿಯನ್ನು ಹಿಡಿಯುತ್ತಾ, ಲೋಕದ ನಿಂದೆಗೂ ಪಾತ್ರವಾಯಿತು. ಋಷಿಗಳಲ್ಲಿ ಹುಟ್ಟಿ ಸಿದ್ಧಾಂತಿಗಳಲ್ಲಿ ಬೆಳೆದು, ಬುಡಬುಡಿಕೆಯವರು ಅಥವಾ ರಾಮಕೊಂಡಾಡಿಗಳ ಕೈಗೆ ಸಿಕ್ಕು ಅವನತಿ ಹೊಂದಿತು. ಈ ಮಾತು ಯಾವುದೇ ಶಾಸ್ತ್ರಕ್ಕಾದರೂ ಅನ್ವಯವಾಗಬಹುದು. ಉದಾಹರಣೆಗೆ— 'ಸಂಗೀತವು ಕವಿಯಲ್ಲಿ ಹುಟ್ಟಿ, ಗವಾಯಿಯಲ್ಲಿ ಬೆಳೆದು, ಕೊರವನ ಹತ್ತಿರ ಬಂದು ಸತ್ತಿತು.' ಎನ್ನುವ ಗಾದೆ ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿದೆ. ಅಂತೆಯೇ ವೇದವೂ ಕೂಡಾ ಋಷಿಗಳಲ್ಲಿ ಸೃಷ್ಟಿಯಾಗಿ ಘನಪಾಠಿಗಳಿಂದ ಬೆಳೆದು, ಹೊಟ್ಟೆಪಾಡಿನ ಪುರೋಹಿತರ ಕೈಯಲ್ಲಿ ತನ್ನ ಮೌಲ್ಯವನ್ನು ಕಳೆದುಕೊಂಡಿತು. ಯಾವುದೇ ಘನವಾದ ಶಾಸ್ತ್ರವು ಅಸಮರ್ಥರಾದ ಅನೇಕ ವ್ಯಕ್ತಿಗಳ ಕೈಯಲ್ಲಿ ಸಿಕ್ಕಾಗ ಅವನತಿ ಪಡೆಯುತ್ತದೆ.

ಹೀಗೆ ಜ್ಯೋತಿಃ ಶಾಸ್ತ್ರವು ತನ್ನ ಪ್ರಭಾವ ಕಳೆದುಕೊಂಡು ಅಂಧಶ್ರದ್ಧೆಯ, ಮೂಢನಂಬಿಕೆಯ ಊರು ಗೋಲಾಯಿತು. 'ಧಡ್ಡ' ಹಾಗೂ ಜಡಸಂಪ್ರದಾಯದ, ಆತ್ಮವಿಶ್ವಾಸ ಶೂನ್ಯರಾದ,-ಚಿತ್ತದಾಸ್ಯ ಭವಿಷ್ಯವಾದಿಗಳಾದ ಜನಾಂಗಕ್ಕೆ ಚಾಲನೆ ಕೊಡುವ ಕೀಲಿ ಕೈಯಾಯಿತು !

ಸಮಾಜದಲ್ಲಿ ದಟ್ಟವಾಗಿ ಅಂಧಶ್ರದ್ಧೆ-ಕಂದಾಚಾರ-ಮೂಢನಂಬಿಕೆ-ಚಿತ್ತದಾಸ್ಯ ಬೆಳೆಯಲು ಕೆಲಮಟ್ಟಿಗೆ ಕಾರಣವಾಗಿದ್ದ ಈ ಶಾಸ್ತ್ರದ ಬಗ್ಗೆ ಅನುಭಾವಿಗಳಿಗೆ ಅಂದರೆ ಪರಾತ್ಪರ ಚೈತನ್ಯ (ದೇವರು)ವೊಂದನ್ನೇ ನಂಬಿ ಆತ್ಮಸ್ಥೈರ್ಯದ ಪವಿತ್ರಜೀವನ ನಡೆಸುತ್ತಿದ್ದ ಮಹಾತ್ಮರು, ಶರಣರು, ಹಾಗೂ ಭಗವದ್ಭಕ್ತರಿಗೆ ಸ್ವಾಭಾವಿಕವಾಗಿ ತಿರಸ್ಕಾರ ಉಂಟಾಯಿತು.

ಅಂಧ ಸಂಪ್ರದಾಯ, ಮೌಢ್ಯ, ಮತಿಯ ವಿರುದ್ಧ ಸಿಡಿದೆದ್ದು ಜನಾಂಗದಲ್ಲಿ ವಿಚಾರ ಸ್ವಾತಂತ್ರ್ಯ, ಆತ್ಮ ವಿಶ್ವಾಸ, ಪೌರುಷ ಗುಣಗಳು ನೆಲೆಗೊಳ್ಳುವಂತೆ ಮಾಡಿ ಜನಜೀವನ ಜಾಗೃತಗೊಳಿಸುವುದು, ತನ್ಮೂಲಕ ಸಮಾಜದ ಸುಧಾರಣೆ ಮಾಡುವ ಉದ್ದೇಶವೇ ಎಲ್ಲ ಮಹಾಪುರುಷರ ಹಾಗೂ ಸಮಾಜ ಸುಧಾರಕರ ಮನೀಷೆ. ಜಗತ್ತಿನ ಎಲ್ಲ ಅನುಭಾವಿಗಳೂ ಸಮಾಜ ಸುಧಾರಕರೂ ಜಗತ್ತಿಗೆ ಮೂಲಕಾರಣವಾದ ಜೀವನದ ಆಗುಹೋಗುಗಳಿಗೆಲ್ಲ ಮೂಲಸೂತ್ರವಾದ ಒಂದು 'ದೈವೀ ಶಕ್ತಿ'ಯನ್ನು ನಂಬಿದ್ದರು. ಜಡವಸ್ತುಗಳಾದ ಗ್ರಹಗಳನ್ನು ಹಾಗೂ ಕ್ಷುದ್ರ ದೇವತೆಗಳನ್ನು ಅವರು ಅಲ್ಲಗಳೆದರು. 'ಏಕದೇವೋಪಾಸನೆ'ಯಲ್ಲಿ ಅವರ ಭಕ್ತಿ ಅಚಲ ಹಿಮಾಚಲದಂತಾಯಿತು. ಗ್ರಹಗಳ ಪ್ರಭಾವ, ಪರಿಣಾಮ, ಫಲದ ಬಗ್ಗೆ ಉದಾಸೀನರಾಗಿದ್ದರು. ಕೆಲವು ಅನುಭಾವಿಗಳು ತಿರಸ್ಕಾರ ಭಾವದಿಂದಲೂ ಕಂಡಿದ್ದಾರೆ. ಉದಾಹರಣೆಗೆ ಸಮಾಜ ಸುಧಾರಕ ಮಹಾನ್ ವಿಚಾರವಾದಿ ಬುದ್ಧನ ಅಭಿಪ್ರಾಯ ಹೀಗಿದೆ :

"ಸುಳ್ಳು ತಟವಟಿಕೆಯ ಮೋಸವಿದ್ಯೆಯಿಂದ ನಕ್ಷತ್ರಗಳ ಲೆಕ್ಕಾಚಾರ ಹಾಕಿ ಜೀವಿಸುವಂತಹ ವ್ಯಕ್ತಿಗಳಿಂದ ದೂರವಿರಬೇಕು.

ತಾರಾ ವೀಕ್ಷಣೆ, ಜ್ಯೋತಿಃ ಶಾಸ್ತ್ರ, ಚಿನ್ಹೆಯಿಂದ ಶುಭ-ಅಶುಭ ಘಟನೆಗಳ ಭವಿಷ್ಯ ನುಡಿ, ಮಂಗಳ ಅಮಂಗಳ ಕುರಿತು ಶಕುನ ಹೇಳುವದು-ಇವೆಲ್ಲ ನಿಷೇಧಿಸ ತಕ್ಕವು."

ಅದ್ವೈತ ಸಿದ್ಧಾಂತ ಪ್ರತಿಪಾದಕರಾದ ಶಂಕರಾಚಾರ್ಯರ ಅಭಿಪ್ರಾಯ ಹೀಗಿದೆ:

ಅದ್ಯಾಷ್ಟಮೀತ್ಯದ್ಯ ಚತುರ್ದಶೀತಿ
ಜ್ಯೋತಿಷ್ಕ ವಾಚೋಪ ವಸಂತಿ ಭಕ್ತ್ಯಾ ||
ಅಹೋ ಶ್ರುತೇಸ್ತತ್ತ್ವ ಮಸೀತಿ ವಾಕ್ಯಂ
ನ ವಿಶ್ವಸಂತ್ಯದ್ಭುತ ಮೇತ ದೇವ ||

"ಇಂದು ಅಷ್ಟಮೀ ಈ ದಿನ ಚತುರ್ದಶೀ ಎಂದು ಹೇಳುವ ಜೋಯಿಸನ ಮಾತುಗಳನ್ನುಕೇಳಿ ಜನರು ಭಕ್ತಿಯಿಂದ ಉಪವಾಸ ಮಾಡುತ್ತಾರೆ. ಆದರೆ 'ತತ್ವಮಸಿ' ಎಂದು ಹೇಳುವ ಸ್ವತಃ ಪ್ರಮಾಣಭೂತ ವೇದಗಳ ಮಾತನ್ನು ಅವರು ನಂಬುವದೇ ಇಲ್ಲ, ಇದಲ್ಲವೇ ಆಶ್ಚರ್ಯ !)" ಎಂದು ಹೇಳುತ್ತಾ ಜನರ ಮೂಢ ನಂಬಿಕೆಗೆ ಆಶ್ಚರ್ಯ ತೋರಿದ್ದಾರೆ! ಮಹಾ ಪ್ರವಾದಿಗಳಾದ ಏಸು-ಮಹಮ್ಮದರೂ ಈ ಶಾಸ್ತ್ರದ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಿರಲಿಲ್ಲವೆಂದು ತೋರುತ್ತದೆ.

ಆಧುನಿಕ ಸಂತ ಹಾಗೂ ಅನುಭಾವಿ ಸ್ವಾಮಿ ವಿವೇಕಾನಂದರು ಈ ಶಾಸ್ತ್ರದ ಬಗ್ಗೆ ಹೀಗೆ ಹೇಳುತ್ತಾರೆ—

'ಮೂಢನಂಬಿಕೆ ಮಾನವನ ಪರಮ ಶತ್ರು; ವಿವೇಚನಾ ರಹಿತ ನಡೆಗಿಂತ ಮಿಗಿಲಾದ ವೈರಿ ಇಲ್ಲ.

ನಕ್ಷತ್ರಗಳು ಮಿನುಗಲಿ; ನಮಗೆ ಅವುಗಳಿಂದೇನು ತೊಂದರೆ ? ನಕ್ಷತ್ರ ನನ್ನ ಬಾಳನ್ನು ಕದಡುವುದಾದರೆ ಅದರ ಬೆಲೆ ಕಿರುಕಾಸು. ಜ್ಯೋತಿಷ್ಯ ಹಾಗೂ ಇನ್ನಿತರ ಅತೀಂದ್ರಿಯ ವಸ್ತುಗಳು ನಿರ್ಬಲ ಮನಸ್ಸಿನ ಚಿಹ್ನೆಗಳು. ಮನಸ್ಸು ಬಡವಾದಾಗ, ನಾವು ಮಾಡಬೇಕಾದುದಿಷ್ಟೆ: ವೈದ್ಯರನ್ನು ಕಂಡು, ಚೆನ್ನಾಗಿ ಉಂಡು, ಉತ್ತಮ ವಿಶ್ರಾಂತಿ ಪಡೆಯುವುದು" ಎಂದು ಅಭಿಪ್ರಾಯ ಪಡುತ್ತಾರೆ.

ಕರ್ನಾಟಕದ ಅಧ್ಯಾತ್ಮ ಅನುಭಾವಿಗಳಾದ ಶರಣರೂ ದಾಸರೂ ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ತಿರಸ್ಕಾರ ಭಾವವನ್ನು ಹೊಂದಿದ್ದರು. ಅವರ ಕಾಲಕ್ಕೆ ಜನಜೀವನದಲ್ಲಿ ಅಂಧಶ್ರದ್ಧೆ - ಮೌಢ್ಯ - ಹೇಡಿತನಗಳು ಬೆಳೆಯಲು ಈ ಶಾಸ್ತ್ರ ಸಾಕಷ್ಟು ಕಾರಣ ವಾಗಿತ್ತು. ಭವಿಷ್ಯವನ್ನು ನಂಬಿ ಜನಜೀವನ ಪೌರುಷ ಶೂನ್ಯವಾಗಿತ್ತು; ಆತ್ಮವಿಶ್ವಾಸ ವನ್ನು ಕಳೆದುಕೊಂಡಿದ್ದಿತು. ಸಮಾಜ ಸುಧಾರಕರಾದ ಶರಣರು ಇದನ್ನು ಕಂಡು ಸಮಾಜದಲ್ಲಿ ಅಂಧಸಂಪ್ರದಾಯವನ್ನು ತೊಡೆದುಹಾಕಲು, ಜನಜೀವನದಲ್ಲಿ ಪೌರುಷ- ಆತ್ಮವಿಶ್ವಾಸಗಳನ್ನು ನೆಲೆಗೊಳಿಸಲು ಜ್ಯೋತಿಷ್ಯವನ್ನು ತಿರಸ್ಕರಿಸಲೇಬೇಕಾಯಿತು. ಜನಮನದಲ್ಲಿ 'ಏಕದೇವೋಪಾಸನೆ'ಯನ್ನು ಪ್ರಚಾರಗೊಳಿಸುವ ಕಾರಣವಾಗಿಯೇ ಗ್ರಹಗಳಂಥ ಕ್ಷುದ್ರದೈವಗಳ ನಂಬಿಕೆಯನ್ನು ಜನಜೀವನದಿಂದ ಬಡಿದೋಡಿಸ ಬೇಕಾಗಿತ್ತು. ಅದಕ್ಕಾಗಿ ಅನುಭಾವಿಗಳಾದ ಶರಣರು ಈ ಶಾಸ್ತ್ರದ ಬಗ್ಗೆ ಈ ರೀತಿ ಅಭಿಪ್ರಾಯ ಪಡುತ್ತಾರೆ. ಮಹಾಪ್ರವಾದಿ, ದಿಟ್ಟ ವಿಚಾರವಾದಿ,

ಅನುಭಾವಿಗಳಾದ ವಿಶ್ವಗುರು ಬಸವಣ್ಣನವರು ಹೀಗೆ ಹೇಳುತ್ತಾರೆ :—

"ಸೋಮವಾರ ಮಂಗಳವಾರವೆಂದು ಮಾಡುವ ಭಕ್ತನ
ಲಿಂಗಭಕ್ತಂಗೆಂತು ಸರಿಯೆಂಬೆನಯ್ಯ.

ದಿನ ಶ್ರೇಷ್ಠವೋ ಲಿಂಗಶ್ರೇಷ್ಠವೋ ?
ಆತ ದಿನವೇ ಘನವೆಂದು, ದಿನವೇ ದೈವವೆಂದು
ಮಾಡುವನಾಗಿ ಆತ ದಿನದ ಭಕ್ತನು.
ಲಿಂಗಭಕ್ತನು ಲಿಂಗವೇ ಘನವೆಂದು, ದೈವವೆಂದು
ಮಾಡುವನಾಗಿ ಆತ ಲಿಂಗಭಕ್ತನು.
ದಿನವೊಂದೇ ಶಿವಶರಣೆಂಬುವಂಗೆ
ದಿನವೊಂದೇ ಹರಶರಣೆಂಬುವಂಗೆ
ದಿನವೊಂದೇ ಕೂಡಲಸಂಗನ ಮಾಣದೆ ನೆನೆಯುವಂಗೆ. "

ಆ ದಿನ ಈ ದಿನ ಶುಭವೆಂದು ಮಾಡುವವನು ದಿನದ ಭಕ್ತನಾಗುತ್ತಾನಲ್ಲದೆ ದೈವ ಭಕ್ತನಾಗುವದಿಲ್ಲವೆಂದು ಹೇಳಿ 'ಕೂಡಲ ಸಂಗನ' ನೆನೆವ ದಿನವೇ ಶುಭದಿನವೆಂದು, ಅದೇ ಶುಭ ಮುಹೂರ್ತವೆಂದು ಬಸವಣ್ಣನವರ ಅಭಿಪ್ರಾಯ. ವಾರದ ಭ್ರಮೆ ಕೆಲವರಿಗಿದ್ದರೆ 'ತಿಥಿ'ಯ ಭ್ರಮೆ ಮತ್ತೆ ಕೆಲವರಿಗೆ.

ಇದನ್ನು ಕಂಡು ಬಸವಣ್ಣನವರು ಮತ್ತೆ ಹೀಗೆ ಹೇಳುತ್ತಾರೆ :

"ಅಷ್ಟಮಿ ನವಮಿಯೆಂಬ ಕಲ್ಪಿತವೇಕೋ ಶರಣಂಗೆ
ತಪ್ಪಿತ್ತು ಗಣಪದವಿ, ಲಿಂಗಕ್ಕೆ ದೂರ
ಒಬ್ಬರಿಗಾಳಾಗಿ ಒಬ್ಬರ ನೋಲೈಸುವ
ನಿರ್ಬುದ್ಧಿ ಮನುಜರನೇನೆಂಬೆ ಕೂಡಲ ಸಂಗಮದೇವಾ. "

ಅಷ್ಟಮಿ – ನವಮಿಯೆಂಬ ಕಲ್ಪಿತವೇಕೋ ಶರಣಂಗೆ ಎಂದು ಪ್ರಶ್ನಿಸುತ್ತಾ, ಅದನ್ನೇ ಹಿಡಿದುಕೊಂಡರೆ ಗಣಪದವಿ ತಪ್ಪಿ ದೇವರಿಗೆ ದೂರವಾಗುತ್ತೇವೆ ಎಂದು ಎಚ್ಚರಿಸುತ್ತಾರೆ.

ಮತ್ತೆ ಬಸವಣ್ಣನವರು ಹೀಗೆ ಹೇಳುತ್ತಾರೆ:

"ಲಗ್ನವೆಲ್ಲಿಯದೋ ವಿಘ್ನವೆಲ್ಲಿಯದೋ ಸಂಗಯ್ಯ ?
ದೋಷವೆಲ್ಲಿಯದೋ ದುರಿತವೆಲ್ಲಿಯದೋ ಸಂಗಯ್ಯಾ ?
ನಿಮ್ಮ ಮಾಣದೆ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲ ಸಂಗಯ್ಯ."

ಪರಮಾತ್ಮನನ್ನು ಸತತ ನೆನೆಯುವ ಸದ್ಭಕ್ತರಿಗೆ ಯಾವುದೇ ಲಗ್ನ–ವಿಘ್ನಗಳೂ ಇಲ್ಲ; ದುರಿತದೋಷಗಳೂ ಇಲ್ಲ ; ಅಷ್ಟೇ ಅಲ್ಲ 'ಭವಕರ್ಮ'ವೂ ಇಲ್ಲವೆಂದು ಸ್ಪಷ್ಟ ಪಡಿಸುತ್ತಾರೆ.

ಪುನಃ ಬಸವಣ್ಣನವರು ಹೀಗೆ ಅಭಿಪ್ರಾಯ ಪಡುತ್ತಾರೆ—

"ಇಪ್ಪತ್ತು ನಾಲ್ಕು ತಿಥಿಯಿಂದ ವೆಗ್ಗಳ
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ
ಏಕಾದಶಿ ವ್ಯತಿಪಾತದಿಂದ ವೆಗ್ಗಳ
ಸೂಕ್ಷ್ಮ ಶಿವಪಥವನರಿದವಂಗೆ ಹೋಮ ನೇಮ ಜಪ ತಪಗಳಿಂದ ವೆಗ್ಗಳ
ಕೂಡಲ ಸಂಗಮ ದೇವಾ ನಿಮ್ಮ ಮಾಣದೆ ನೆನೆವಂಗೆ."

ತಿಥಿ, ಸಂಕ್ರಾಂತಿ, ಗ್ರಹಣ, ಏಕಾದಶಿ ಹೋಮ ನೇಮಗಳಿಗಿಂತಲೂ ಶಿವಪಥವನರಿವುದು–ಕೂಡಲ ಸಂಗನ ನೆನೆವುದು ಶ್ರೇಷ್ಠವೆಂದು ಅವರ ಸ್ಪಷ್ಟ ನಿಲುವು.

ಮತ್ತೊಂದು ವಚನದಲ್ಲಿ ಭಕ್ತಿ ಭಂಡಾರಿ ಶಿವಾನುಭವಿಗಳಾದ ಬಸವಣ್ಣನವರು ಹೀಗೆ ಹೇಳುತ್ತಾರೆ.

"ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ
ರಾಶಿ ಕೂಟ ಗಣ ಸಂಬಂಧ ಉಂಟೆಂದು ಹೇಳಿರಯ್ಯ
ನಾಳಿನ ದಿನಕ್ಕಿಂದಿನ ದಿನ ಲೇಸೆಂದು ಹೇಳಿರಯ್ಯ
ಕೂಡಲ ಸಂಗಮ ದೇವನ ಪೂಜಿಸಿದ ಫಲ ನಿಮ್ಮದಯ್ಯ ||

ಹಿರಿಯರು-ಸಜ್ಜನರು-ಸದ್ಭಕ್ತರು (ದೈವದವರು) ಒಪ್ಪಿ ಮಾಡುವ ಲಗ್ನ ಸಂಬಂಧವೇ ಶ್ರೇಷ್ಠವಾದುದು. ರಾಶಿ ಕೂಟ-ಗಣ ಕೂಟ-ನಾಡಿ ಕೂಟವೆಂದು ಶಾಸ್ತ್ರಕ್ಕೆ ಕಟ್ಟು ಬೀಳಬೇಕಾದುದಿಲ್ಲ. ಸಮಯವನ್ನು ನಿಶ್ಚಯ ಮಾಡಬೇಕಾದುದೂ ಇಲ್ಲ. ದೈವಭಕ್ತರು (ಶರಣರು) ಮಾಡುವ ಲಗ್ನ ಸಂಬಂಧಕ್ಕೆ ಕಾಲ ನಿಯಮ ಬೇಕಾಗಿಲ್ಲ. ಭಗವದ್ಭಕ್ತರಾದ ಶರಣರಿಗೆ ಅವರು ಆರಾಧಿಸಿದ 'ದೈವೀಕರುಣೆ'ರಕ್ಷಾ ಕವಚದಂತೆ ಅವರನ್ನು ಕಾಪಾಡುತ್ತದೆ ಎಂದು ನಿಶ್ಚಯವಾಗಿ ತಿಳಿಸುತ್ತಾರೆ.

ಮತ್ತೊಬ್ಬ ಅನುಭಾವಿಗಳಾದ ಚನ್ನಬಸವಣ್ಣನವರು ತಮ್ಮ ವಚನದಲ್ಲಿ ಈ ರೀತಿ ಹೇಳುತ್ತಾರೆ :

ತಿಥಿ ವಾರ ವೆಂದರಿಯೆ ಲಗ್ನ-ವಿಲಗ್ನವೆಂದರಿಯೆ
ಇರುಳೊಂದು ವಾರ ಹಗಲೊಂದು ವಾರ—
ಈ ವಾರ ಶರಣರಿಗೆ ಸಲ್ಲದು
ಶರಣರ ನುಡಿಯೇ ಜ್ಯೋತಿಷ್ಯ, ನಡೆಯೇ ಪಂಚಾಂಗ ||

ವಾರ–ತಿಥಿಗಳು ಮನುಷ್ಯನ ವ್ಯವಹಾರಕ್ಕೆ ಇವೆ: ಅವು ವ್ಯಾವಹಾರಿಕ ಸಾಧನಗಳು ಮಾತ್ರ. ಅದೇ ಸರ್ವಸ್ವವೆಂದು ಭಾವಿಸಿದಲ್ಲಿ ಅಪಾಯವಿದೆ. ಈ ದೃಷ್ಟಿಯಿಂದ

ಶರಣರ ನುಡಿಯೇ ಜ್ಯೋತಿಷ್ಯವಾಗಿ, ಅವರ ನಡೆಯೇ ಪಂಚಾಂಗವಾಯ್ತು ಎಂದು ಚನ್ನಬಸವಣ್ಣನವರ ಅಭಿಪ್ರಾಯ.

ಚನ್ನಬಸವಣ್ಣನವರು ತಮ್ಮ ಮತ್ತೊಂದು ವಚನದಲ್ಲಿ ಈ ರೀತಿ ತಿಳಿಸುತ್ತಾರೆ :

"ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ
ಮಾಡುವ ಕರ್ಮಿ ನೀ ಕೇಳಾ
ಉದಯವೆಂದೇನೋ ಶರಣಂಗೆ?
ಮಧ್ಯಾಹ್ನವೆಂದೇನೋ ಶರಣಂಗೆ?
ಅಸ್ತಮಾನವೆಂದೇನೋ ಶರಣಂಗೆ
ಮಹಾ ಮೇರುವಿನ ಮರೆಯಲಿರ್ದು
ತನ್ನ ನೆರಳನರಸುವ ಭಾವ ಭ್ರಮಿತರ ಮೆಚ್ಚ
ನಮ್ಮ ಕೂಡಲ ಚನ್ನಸಂಗಮದೇವಾ.

ಉದಯ-ಮಧ್ಯಾಹ್ನ-ಸಂಧ್ಯಾಕಾಲವ ನೋಡಿ ಕರ್ಮ ಮಾಡುವ ಕರ್ಮಿ ನೀ ಕೇಳಾ ಎಂದು ಪ್ರಶ್ನಿಸಿ, 'ಶರಣರಿಗೆ ಕಾಲದ ಹಂಗಿಲ್ಲ ಅವರು ಕಾಲಾತೀತರು - ಮಹಾ ಮೇರು ಸದೃಶ ಭಗವಂತನ ಆಶ್ರಯದ ನೆರಳಲ್ಲಿ ನೆಲೆನಿಂತ ಮಾನವರು ಅಲ್ಪವಾದ ತಮ್ಮ ನೆರಳನ್ನು ಹುಡುಕುವದು ಭ್ರಮೆಯಾಗುತ್ತದೆ' ಎಂದು ಚನ್ನಬಸವಣ್ಣನವರು ಎಚ್ಚರಿಸುತ್ತಾರೆ.

ಭಗವಂತನ ಮಹಾನೆರಳಿನಲ್ಲಿ ಮನುಜರ ಅಲ್ಪ, ಕುಬ್ಜ ನೆರಳು ನಾಪತ್ತೆಯಾಗಿರುತ್ತದೆ. ಪ್ರಜ್ವಲಿಸುವ ಜ್ಯೋತಿಯ ಮುಂದೆ ಮಿಂಚುಹುಳದ ಬೆಳಕೆಲ್ಲಿ ಕಾಣುತ್ತದೆ? ಕಾಲವನ್ನು ವಿಭಾಗಿಸಿ ಶುಭಾಶುಭಗಳನ್ನು ಅರಿಯುವುದಕ್ಕಿಂತ 'ಅಖಂಡ' ಕಾಲಾತೀತ ಸ್ವರೂಪನಾದ ದೇವನಲ್ಲಿ ಭಕ್ತಿ-ಶ್ರದ್ಧೆ ಇಡುವುದೇ ಮೇಲೆಂದು ಶರಣರ' ಅನುಭವಿಗಳ ಅಚಲವಾದ ನಂಬಿಕೆ.

ಸೊಡ್ಡಳ ಬಾಚರಸನೆಂಬ ಅನುಭಾವಿ ಶರಣನು ಈ ರೀತಿ ಹೇಳುತ್ತಾನೆ :

"ಚಂದ್ರಬಲ ತಾರಾಬಲ ಎಂಬಿರಿ: ಎಲೆ ಅಣ್ಣಗಳಿರಾ
ಚಂದ್ರಂಗೆ ಯಾರ ಬಲ? ಇಂದ್ರಂಗೆ ಯಾರ ಬಲ
ಇಂದ್ರಂಗೆ ಮುಕುಂದಂಗೆ ಬ್ರಹ್ಮಂಗೆ ಚಂದ್ರಗೆ
ಬರದೇ ಸೊಡ್ಡಳನ ಬಲವು ಕೇಳಿರಣ್ಣಾ."

ಚಂದ್ರಬಲ - ಇಂದ್ರಬಲ - ತಾರಾಬಲಕ್ಕಿಂತ ಭಗವಂತನ ಬಲವೇ ಶ್ರೇಷ್ಠವೆಂದು ಸೊಡ್ಡಳ ಬಾಚರಸ ಖಚಿತವಾಗಿ ನುಡಿಯುತ್ತಾನೆ.

ಮತ್ತೊಬ್ಬ ಅನುಭಾವಿ ಹಡಪದ ಅಪ್ಪಣ್ಣ ಹೀಗೆ ಅಭಿಪ್ರಾಯ ಪಡುತ್ತಾನೆ :

"ಆಗುತಿವೆ ಉದಯ ಮಧ್ಯಾಹ್ನ ಅಸ್ತಮಾನ
ಹೋಗುತಿವೆ ದಿನ ವಾರ ಮಾಸ ಸಂವತ್ಸರವು
ಸಾವುತಿವೆ ಆಯುಷ್ಯ ಭಾಷೆ
ಇದರೊಳು ಬೇಗ ತಿಳಿದು, ನೀಗಿ ನಿಷ್ಪತ್ತಿಯಾದರೆ
ಬಸವ ಪ್ರಿಯ ಕೂಡಲ ಚನ್ನಬಸವಣ್ಣ."

ಕಾಲದ ಗಣನೆಯಲ್ಲಿ ಆಯುಷ್ಯ ಭಾಷೆ ಸಾಯುತಿದೆ. ಇದನ್ನು ಬೇಗ ತಿಳಿದು ಭಗವದ್ಭಕ್ತಿಯಲ್ಲಿ ತೊಡಗಿ ಜೀವನವನ್ನು ಪಾವನ ಗೊಳಿಸಿಕೊಳ್ಳಬೇಕೆಂದು ಅಪ್ಪಣ್ಣ ಎಚ್ಚರಿಸುತ್ತಾನೆ.

ಅನುಭಾವಿ ಹಡಪದ ಅಪ್ಪಣ್ಣ ಮತ್ತೊಂದು ವಚನದಲ್ಲಿ ಈ ರೀತಿ ಹೇಳುತ್ತಾನೆ:

"ಉದಯ-ಮಧ್ಯಾಹ್ನ-ಅಸ್ತಮಯ ಕತ್ತಲೆಯ ಬೆಳಗು
ದಿನವಾರ ಲಗ್ನ ತಿಥಿ ಮಾಸ ಸಂವತ್ಸರಗಳು
ಹೋಗುತ್ತ ಬರುತ್ತಲಿವೆ.
ಇವನೋಡಿದವರೆಲ್ಲ ಇದರೊಳಗೆ ಹೋಗುತ್ತಾ ಬರುತ್ತಲಿದ್ದಾರೆ
ಜಗಕ್ಕೆ ಇದೀಗ ಇಷ್ಟವಾಗಿಪ್ಪವು
ಎನ್ನ ದೇವಂಗೆ ಇವೊಂದೂ ಇಲ್ಲ-ಬಸವ ಪ್ರಿಯ ಕೂಡಲ ಚನ್ನ ಬಸವಣ್ಣ.

ಹಡಪದ ಅಪ್ಪಣ್ಣ ತನ್ನ ಸಮಕಾಲೀನ ಜನರ ನಂಬಿಕೆಗಳನ್ನು ಈ ವಚನದಲ್ಲಿ ಪ್ರತಿಬಿಂಬಿಸಿದ್ದಾನೆ. ಇದು ಆಗಿನ ಸಮಾಜದ ಗತಿಬಿಂಬವೂ ಹೌದು. ಜನರು 'ಸುಮುಹೂರ್ತ' ದಿನ-ವಾರ-ತಿಥಿ-ಮಾಸದಲ್ಲಿ ಆಸಕ್ತರಾಗಿದ್ದಾರೆ. ಜನರಿಗೆ ಇವೇ ಇಷ್ಟವಾಗಿವೆ. ಆದರೆ ದೇವನಿಗೆ ಇವುಗಳ ಹಂಗಿಲ್ಲ; ಆತನು 'ಕಾಲಾತೀತನು' ಎಂದು ತನ್ನ ವಿಚಾರ ವ್ಯಕ್ತಪಡಿಸುತ್ತಾನೆ.

ಮತ್ತೊಬ್ಬ ಅನುಭಾವಿ ದೇವರ ದಾಸಿಮಯ್ಯನ ಅಭಿಪ್ರಾಯ ಹೀಗಿದೆ, ತನ್ನ ಒಂದು ವಚನದಲ್ಲಿ—

"ಅಚ್ಚ ಶಿವೈಕ್ಯಂಗೆ ಹೊತ್ತಾರೆ ಅಮವಾಸ್ಯೆ
ಮಟ್ಟ ಮಧ್ಯಾಹ್ನ ಸಂಕ್ರಾಂತಿ ಮತ್ತೆ ಅಸ್ತಮಾನ
ಪೌರ್ಣಮಿ ಎಂಬುದಿಲ್ಲ. ಭಕ್ತನ ಮನೆಯ ಅಂಗಳವೇ
ವಾರಣಾಸಿ ಕಾಣಾ ರಾಮನಾಥ ||

ಭಗವದ್ಭಕ್ತನಿಗೆ ಅಮವಾಸ್ಯೆ ಸಂಕ್ರಾಂತಿ ಪೌರ್ಣಮಿ ಉದಯ ಅಸ್ತಮಾನಗಳೆಂಬ ಕಾಲನಿಯಮ ನಿಬಂಧನೆಗಳಿಲ್ಲ, ತೀರ್ಥಯಾತ್ರೆಗಳೂ ಇಲ್ಲ. ಭಗವದ್ಭಕ್ತರ ಮನೆಯ 'ಅಂಗಳ'ವೇ 'ಕಾಶಿ'ಯಷ್ಟು ಪರಮ ಪವಿತ್ರವೆಂದೂ, ಅದೇ ತೀರ್ಥಕ್ಷೇತ್ರ-ಸುಕ್ಷೇತ್ರವೆಂದು ದಾಸಿಮಯ್ಯನು ಅಭಿಪ್ರಾಯ ಪಡುತ್ತಾನೆ.

ಶರಣರ ತರುವಾಯ ಬಂದ ದಾಸಕೂಟದ ಅಗ್ರಮಾನ್ಯ ಅನುಭಾವಿ ಪುರಂಧರದಾಸರು ತಮ್ಮ ಕಾಂಬೋಧಿ ರಾಗದ ಕೀರ್ತನೆಯಲ್ಲಿ ಈ ರೀತಿ ಬೋಧಿಸಿದ್ದಾರೆ—

ಸಕಲ ಗ್ರಹಬಲ ನೀನೆ ಸರಸಿಜಾಕ್ಷ ‖ ಪ ‖
ನಿಖಿಲ ರಕ್ಷಕ ನೀನೆ ವಿಶ್ವವ್ಯಾಪಕನೆ ‖ ಅ. ಪ ‖
ರವಿ ಚಂದ್ರ ಬುಧ ನೀನೆ ರಾಹು ಕೇತುವು ನೀನೆ |
ಕವಿಗುರು ಶನಿಯು ಮಂಗಳನು ನೀನೆ | ದಿನ ರಾತ್ರಿಯು ನೀನೆ |........
........ಪಕ್ಷ ಮಾಸವು ನೀನೆ ಸರ್ವಕಾಲವು ನೀನೆ| ನಕ್ಷತ್ರ-ಯೋಗ-ತಿಥಿಕರಣ ನೀನೆ|
........ಋತು ವತ್ಸರವು ನೀನೆ ಮತ್ತೆ ಯುಗಾದಿಯು ನೀನೆ| ಕ್ರತು ಹೋಮ
ಯಜ್ಞ ಸದ್ಗತಿಯು ನೀನೆ....ಶ್ರುತಿಗೆ ಸಿಲುಕದ ಅಪ್ರತಿಮ ಮಹಿಮ ನೀನೆ ‖ ೩ ‖
ಜಿತವಾಗಿ ಎನ್ನೊಡೆಯ ಪುರಂಧರ ವಿಠಲನೆ | ಎನ್ನುತ್ತಾರೆ.

ಎಲ್ಲ ಗ್ರಹಕ್ಕೂ ಬಲಿಷ್ಟನಾಗಿ ಒಡೆಯನಾಗಿ ಕಾಲಕ್ಕೆ ಮೂಲಾಧಾರನಾಗಿ 'ಕಾಲ' ಸ್ವರೂಪನೂ ಆಗಿ ಶ್ರುತಿಗೆ ನಿಲುಕದ ದೇವನನ್ನು ಶರಣರು ಕೊಂಡಾಡುತ್ತಾರೆ.

ಹೀಗೆ ಅನುಭಾವಿಗಳ - ಮಹಾಪುರುಷರ-ಮಹಾತ್ಮರ - ದೈವಭಕ್ತರ ವಿಚಾರ ಸರಣಿಗಳನ್ನು ಸಿಂಹಾವಲೋಕನ ಮಾಡಿದಾಗ ನಮಗೆ ಒಂದು ವಿಚಾರ ಸ್ಪಷ್ಟವಾಗಿ ಹೊಳೆಯುತ್ತದೆ. ಏನೆಂದರೆ—ಜ್ಯೋತಿಃಶಾಸ್ತ್ರದ ಬಗ್ಗೆ ಜನಗಳಲ್ಲಿದ್ದ ದಟ್ಟವಾದ ಮೂಢನಂಬಿಕೆ, ಅಂಧಾನುಕರಣೆ,ಚಿತ್ತದಾಸ್ಯಗಳನ್ನು ಆಯಾಕಾಲದ ಅನುಭಾವಿಗಳು ಖಂಡಿಸುತ್ತಲೇ ಬಂದು, ಜನಗಳಲ್ಲಿ ವಿಚಾರ ಸ್ವಾತಂತ್ರ್ಯ, ಆತ್ಮವಿಶ್ವಾಸ ದೈವಭಕ್ತಿಗಳು ನೆಲೆಗೊಳ್ಳುವಂತೆ ಮಾಡಿದ್ದಾರೆ.

ಬುದ್ಧನಿಂದ ಹಿಡಿದು ಮಹಾತ್ಮಾ ಗಾಂಧೀಜಿಯವರೆಗೂ ಶರಣರು-ದಾಸರು ಮೊದಲ್ಗೊಂಡು ಈ ಎಲ್ಲ ಅನುಭಾವಿಗಳ ದೃಷ್ಟಿಯಲ್ಲಿ 'ಜ್ಯೋತಿಷ್ಯ ಶಾಸ್ತ್ರ'ಕ್ಕೆ ಯಾವ ಪುರಸ್ಕಾರವೂ ದೊರೆಯಲಿಲ್ಲ; ಎನ್ನುವ ಸತ್ಯ ಸಂಗತಿಯನ್ನು ಒಪ್ಪಲೇ ಬೇಕಾಗುತ್ತದೆ.

———

ವೈಜ್ಞಾನಿಕ ಯುಗದಲ್ಲಿ ಅಕ್ಕಮಹಾದೇವಿಯ ಸಂದೇಶ

—ನೂತೆ ಮಹಾದೇವಿ

ಅಕ್ಕಮಹಾದೇವಿ ಅಪರಿಮಿತ ವೈರಾಗ್ಯನಿಧಿ, ಭಕ್ತ ಶಿರೋಮಣಿ, ಮಹಾ ಶಿವಯೋಗಿಣಿ. ಶಿವಯೋಗ ಸಾಧನೆಯಲ್ಲಿ ಆಕೆ ನಿಂತ ನಿಲುವು, ಮುಟ್ಟಿದ ಮಟ್ಟಗಳು ಕಲ್ಪನಾತೀತ. ಆಕೆಯ ವಿಚಾರಗಳು ಹನ್ನೆರಡನೆಯ ಶತಮಾನಕ್ಕೇಕೆ, ಇಪ್ಪತ್ತನೆಯ ಶತಮಾನಕ್ಕೂ ಅನ್ವಯಿಸಬಲ್ಲ ಮಹತ್ಸಂದೇಶಗಳಾಗಿರುವುವು. ಶರಣರು ಕಟ್ಟಿದ ಧರ್ಮ ಪ್ರಗತಿಪರ ಧರ್ಮ, ಪೌರಾಣಿಕ ಧರ್ಮವಲ್ಲ. ಬರೀ ಪುರಾಣ, ಶಬ್ದ ಪ್ರಮಾಣಗಳ ಆಧಾರದ ಮೇಲಷ್ಟೇ ನಿಲ್ಲದೆ ಅನುಭವ ಪ್ರಮಾಣದ ಮೇಲೆ ನಿಂತು ತತ್ತ್ವಜ್ಞಾನದ ಒರೆಗಲ್ಲಿಗೆ ತಿಕ್ಕಿದಾಗ ಇನ್ನೂ ಹೆಚ್ಚು ಲಕಲಕಿಸುವುದಲ್ಲದೆ ಮಂಕಾಗದು. ಪೌರಾಣಿಕ ಧರ್ಮಕ್ಕೆ ಭೂತಕಾಲ ಮಾತ್ರವಿದೆ, ಭವಿಷ್ಯವಿಲ್ಲ. ಆದರೆ ಶರಣ ಧರ್ಮಕ್ಕೆ ಅಪಾರ ಭವಿಷ್ಯವಿದೆ, ಚಲಿಸುವ ಚಿನ್ನದ ನಾಣ್ಯದಂತೆ ತುಂಬಾ ಚಲನೆ, ಬೆಲೆಯುಂಟದಕ್ಕೆ. ಇಂತಹ ಪ್ರಗತಿಪರ ಧರ್ಮಕ್ಕೆ ಅಕ್ಕಮಹಾದೇವಿಯ ಕೊಡುಗೆ ಅಪಾರವಿದೆ. ಅಕ್ಕಮಹಾದೇವಿ ಹೇಳುವ ದೇವರ ಕಲ್ಪನೆಯನ್ನು ನೋಡುವ :

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವಂಗಾನೊಲಿದೆನವ್ವಾ
ಎಡೆಇಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆ ಎಲೆ ಅವ್ವಾ ‖
ನೀನು ಕೇಳಾ ತಾಯೆ ಭವವಿಲ್ಲದ ಭಯವಿಲ್ಲದ
ನಿರ್ಭಯ ಚೆಲುವಂಗೊಲಿದೆ ನಾನು! ಕುಲಸೀಮೆಯಿಲ್ಲದ
ನಿಸ್ಸೀಮ ಚೆಲುವಂಗೆ ನಾನೊಲಿದೆ. ಇದು ಕಾರಣ
ಚನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ ಈ ಸಾವ
ಕೆಡುವ ಗಂಡರ ನೊಯ್ದು ಒಲೆಯೊಳಗಿಕ್ಕು!

ತತ್ತ್ವಜ್ಞಾನಿಗಳು ಒಪ್ಪುವಂತಹ ವಿಶಾಲ, ತಾತ್ತ್ವಿಕ ದೇವರ ಕಲ್ಪನೆಯನ್ನು ಅಕ್ಕಮಹಾದೇವಿ ಕೊಡುತ್ತಿದ್ದಾಳೆ. ಪರಮಾತ್ಮನಿಗೆ ಸಾವಿಲ್ಲ, ಏಕೆ? ಅವನಿಗೆ ಹುಟ್ಟಿಲ್ಲದುದರಿಂದ! ಆದ್ದರಿಂದ ಹುಟ್ಟಿ-ಸತ್ತವರಾರೂ ದೇವರಲ್ಲ. ಪರಮಾತ್ಮನಿಗೆ ಕೇಡಿಲ್ಲ. ಮಂಗಲ ಸ್ವರೂಪನವನಾದುದರಿಂದ! ಅವನಿಗೆ ರೂಪಿಲ್ಲ. ಖಂಡಿತ ಸಾಕಾರಕ್ಕೆರೂಪುಂಟು ಆದರವನು ಅಖಂಡ ನಿರಾಕಾರವಾಗಿ ರೂಹಿಗತೀತನಾಗಿರುವನು. ಆದರೂ ಅವನು ಚಲುವ! ಅರಳುವ ಹೂವಿನಲ್ಲಿ, ಮೂಡುವ ರವಿಯಲ್ಲಿ, ಪ್ರಕೃತಿಯ ರಮ್ಯತೆಯಲ್ಲಿ ಅವನ ಚೆಲುವಿಕೆ ತುಂಬಿತುಳುಕುತ್ತಿದೆ. ಶಿವನಿಗೊಂದು ಎಡೆಯಿಲ್ಲ, ಏಕೆಂದರೆ ಕಾಲ ಸ್ಥಾನಕ್ಕತೀತವನನು. ಆ ಅಖಂಡ ರೂಪನಿಗೆ ಕಡೆಯೂ ಇಲ್ಲ, ಏಕೆ ? ಅವನಿಗೆ ಮೊದ

ಲಿಲ್ಲ, ಆದಿ ಇಲ್ಲದುದಕ್ಕೆ ಅಂತ್ಯವೆಲ್ಲುಂಟು ? ಪರಮಾತ್ಮನು ತೆರಹಿಲ್ಲದೆ ಸಮಸ್ತ ಸಚರಾಚರ ಸೃಷ್ಟಿಯಲ್ಲಿ ತುಂಬಿ ತುಳುಕುತ್ತಿದ್ದಾನೆ. ನಿರಾಕಾರ ನಿರವಯನವನಿಗೆ ವಿಶಿಷ್ಟ ಕುರುಹಿಲ್ಲ. ಹುಟ್ಟು ಸಾವುಗಳಿಲ್ಲದ ಸ್ವಯಂಭೂವಾದ ಕಾರಣ ಭವವಿಲ್ಲವವನಿಗೆ, ದ್ವಂದ್ವಾತೀತನಾದ ಅವನಿಗೆ ಭಯವಿಲ್ಲ, ನಿರ್ಭಯನು. ಪರಮಾತ್ಮನು ಅದಾವ ಕುಲದವನೂ ಅಲ್ಲ. ಹೆಣ್ಣಲ್ಲ, ಗಂಡಲ್ಲ ; ಶ್ರೇಷ್ಠ ಜಾತಿಯ ಸ್ವತ್ತೂ ಅಲ್ಲ. ಭಕ್ತರ ಸೊಮ್ಮು ಅವನು. ಸೀಮೆಯೊಂದಿಲ್ಲದ ನಿಸ್ಸೀಮನವನು ಯಾವುದೇ ಒಂದು ವಿಶಿಷ್ಟ ಸ್ಥಾನದಲ್ಲಿ ಮರ್ಯಾದಿತನಾಗಿ ಇರಲಾರ. ಎಲ್ಲೆಯೊಂದಿಲ್ಲದ ಸರ್ವವ್ಯಾಪಿ, ಸರ್ವಾಂತರ್ಯಾಮಿ. ಹೀಗೆ ಅಕ್ಕಮಹಾದೇವಿಯ ದೇವರ ಕಲ್ಪನೆ ಉದಾತ್ತ, ವಿಶ್ವವಂದ್ಯವಾಗಿದೆ.

ಮನೋದಾರ್ಢ್ಯತೆಯ ಬಗ್ಗೆ ಅಕ್ಕನ ಮತ್ತೊಂದು ವಚನವಿಂತಿದೆ :

ಲೋಕದಾ ಚೇಷ್ಟೆಗೆ ರವಿಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳುದೊಂದು ಮನ, ಅದು ನಿಮ್ಮಲ್ಲಿ ಒಡವೆರೆದ ಬಳಿಕ
ಎನಗಿನ್ನಾವ ಭಯವಿಲ್ಲ ಕಾಣಾ, ಚನ್ನಮಲ್ಲಿಕಾರ್ಜುನ !

ಜಗತ್ತಿನ ಕಾರ್ಯಚಟುವಟಿಕೆಗಳಿಗೆ ಸೂರ್ಯನೇ ಬೀಜ. ಆ ಸೂರ್ಯೋದಯವಾದಾಗ ಜಗದ ಕ್ರಿಯೆಗಳು ಆರಂಭವಾಗುವವಷ್ಟೇ ಅಲ್ಲದೆ ನಮ್ಮ ಪೃಥ್ವಿಗೂ ಸೂರ್ಯನೇ ತಾಯಷ್ಟೇ ? ಅದೇ ತೆರನಂತೆ ನಮ್ಮ ಕರಣಗಳ ಇಂದ್ರಿಯಗಳ ಚಟುವಟಿಕೆಗಳಿಗೆ ಮನಸ್ಸೇ ಬೀಜ. ಮನಸ್ಸುಅತ್ತೆಡೆ ಅಭಿಮುಖವಾಗದೇ ಇದ್ದಾಗ ಇಂದ್ರಿಯಗಳ ಮುಂದೆ ಏನಿದ್ದರೂ ಅಲ್ಲಿ ವಿಕಾರಕ್ಕಾಸ್ಪದವಿಲ್ಲ. ಗಾಳಿಗೆ ತನ್ನದೇ ಆದ ವಾಸನೆ ಇಲ್ಲ. ಅದು ಕೆಟ್ಟ ವಾತಾವರಣದಿಂದ ಬೀಸಿ ಬಂದಾಗ ದುರ್ವಾಸನೆಯನ್ನೀಯುತ್ತದೆ, ಸದ್ವಾತಾವರಣದಿಂದ ಬಂದಾಗ ಸುವಾಸನೆಯನ್ನೀಯುವುದು. ಅಂತೆಯೇ ಮನವು ಇಂದ್ರಿಯಗಳ ಮೂಲಕ ಬಾಹ್ಯಕ್ಕೆ ಅಧೋಮುಖವಾಗಿ ಹರಿದಾಗ ವಿಷಯ ವಾಸನೆ ಬೀರುವುದು. ಇದೇ ಮನವು ಅಂತರಾತ್ಮನ ಮೂಲಕ ಅಂತರಾಳಕ್ಕೆ ಊರ್ಧ್ವಮುಖವಾಗಿ ಹರಿದಾಗ ಶಿವವಾಸನೆ ಬೀರುವುದು. ಅದಾವ ಮನವು ಭವಬಂಧನಕಾರಕವಾಗಿ ನಮ್ಮನ್ನು ಕೆಳಗೆಳೆಯಲು ಯತ್ನಿಸುವದೋ ಅದನ್ನೇ ಹಿಡಿದು ಊರ್ಧ್ವಗತಿಯಲ್ಲಿ ಸಾಗಬೇಕು. ಮನಸ್ಸನ್ನು, ಇಂದ್ರಿಗಳ ಪ್ರವಾಹವನ್ನು ಒತ್ತಾಯದಿಂದ ತಡೆಹಿಡಿಯಬಾರದು. ಸ್ಪ್ರಿಂಗನ್ನು ಒತ್ತಿಕ್ಕಿದಷ್ಟೂ ಜೋರಾಗಿ ಸಿಡಿಯುವದು. ನೀರಿನ ಪ್ರವಾಹವನ್ನು ಸಹಜವಾಗಿ ಹೋಗಬಿಟ್ಟರೆ ಅದರಿಂದ ಹೆಚ್ಚಿನ ಉಪಯೋಗವಾಗದು. ಅಥವಾ ಅದಕ್ಕೊಂದು ಬಲವಾದ ಒಡ್ಡು ಅಣೆಕಟ್ಟು ಹಾಕಿದರೂ ಸಾಲದು. ನೀರಿನ ಪ್ರವಾಹ ಬಲ ಅದನ್ನೇ ಕೊಚ್ಚಿ ಹಾಕುವದು. ಸೃಜಿಸಿದ ಒಡ್ಡಿಗೆ ನಾಲೆ ಕಾಲುವೆಗಳನ್ನು ಮಾಡಿದರೆ ಆ ನೀರು ಸದುಪಯೋಗ ಪಡೆದು ಲಕ್ಷಾವಧಿ ಎಕರೆ ಭೂಮಿಗೆ ನೀರುಣ್ಣಿಸು

ವದು. ಅಂತೆಯೇ ಇಂದ್ರಿಯ ಪ್ರವಾಹಕ್ಕೆ ಸಂಯಮದ ಕಟ್ಟೆ ಹಾಕಿ ಬಿಟ್ಟರೆ, ಇಂದ್ರಿಯ ದಮನ ಮಾಡಿದರೆ ಅದು ಕೆಲವೊಮ್ಮೆ ಆಸ್ಫೋಟಿಸುವ ಸಂಭವವುಂಟು. ಸಂಯಮದ ಕಟ್ಟೆಯಲ್ಲಿ ಸಹೃದಯತೆಯ ಕಣ್ಣುಮಾಡಿ, ವಿಶ್ವಪ್ರೇಮದ ಕಾಲುವೆ–ನಾಲೆಗಳನ್ನು ಸೃಜಿಸಬೇಕು. ಆಗ ಮಾನವ ಕುಲಕೋಟಿಯೆಲ್ಲ ಪ್ರೇಮದ ಬೆಳಸನ್ನುಣ್ಣುವದು. ಹೀಗೆ ಇಂದ್ರಿಯ ದಮನಕ್ಕಿಂತಲೂ ಉದಾತ್ತೀಕರಣ ತುಂಬಾ ಒಳ್ಳಿತು. ಮಾನವ ಸಹಜವಾದ ಬಯಕೆಗಳನ್ನು ಉದಾತ್ತೀಕರಿಸಿಕೊಂಡು ಆಧ್ಯಾತ್ಮಿಕ ಫಲಗಳನ್ನು ಪಡೆಯಬೇಕು.

ಆಧುನಿಕ ಹೆಂಗಳೆಯರಿಗೆ ಅಕ್ಕ ನೀಡುವ "ಸಂದೇಶ" ಒಂದಿದೆ. ಪರಸಂಸ್ಕೃತಿಯ ಅಂಧಾನುಕರಣೆಗೆ ಬಲಿಯಾಗಿ ತಮ್ಮತನ ಕಳೆದುಕೊಳ್ಳುವ ಸ್ವೇಚ್ಛಾ ಪರರಿಗೆ ಇದು ದಾರಿದೀಪ. ಮನಕ್ಕೆ ಬಂದಂತೆ ಇರುವುದು ಸ್ವಾತಂತ್ರ್ಯವಲ್ಲ ; ಸ್ವಾತಂತ್ರ್ಯದ ಹೆಸರಿನ ಸ್ವೇಚ್ಛೆ, ಸ್ವಾತಂತ್ರ್ಯವೆಂದರೆ ಮಾನವನ ಸುಪ್ತಶಕ್ತಿಗಳ ಆವಿಷ್ಕಾರಕ್ಕೆ ಅನುವು ಮಾಡಿಕೊಡುವಸಾಧನ, ಸದವಕಾಶ.

ಎರದ ಮುಳ್ಳಿನಂತೆ ಪರಗಂಡರೆನಗವ್ವಾ
ಸೋಂಕಲಮ್ಮೆ ಸುಳಿಯಲಮ್ಮೆ
ನಂಬಿ ನಚ್ಚಿ ಮಾತಾಡಲಮ್ಮೆನವ್ವಾ
ಚನ್ನಮಲ್ಲಿಕಾರ್ಜುನನಲ್ಲದ ಗಂಡನ ಉರದಲ್ಲಿ
ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ !

ಪತಿವ್ರತಾ ನಿಷ್ಠೆಯನ್ನು ಅಕ್ಕಮಹಾದೇವಿ ಒತ್ತಿ ಹೇಳುತ್ತಾಳೆ. "ನನ್ನ ಪತಿಯಲ್ಲದ ಪುರುಷನ ಎದೆಯಲ್ಲಿ ಪಾಪದ ಮುಳ್ಳಿದೆ ಎಂದು ನಾನಪ್ಪಲಾರೆ. ಎರದ ಮುಳ್ಳು ಚುಚ್ಚಿದಾಗ ಭೌತಿಕ ನೋವಾದರೆ ಪಾಪದ ಮುಳ್ಳು ಚುಚ್ಚಿದಾಗ ಭವದ ನೋವಾಗುವದು. ಲೌಕಿಕ ಮಾನವರಾರನ್ನೂ ನಂಬಿ ನಚ್ಚಿ ಮಾತಾಡೆ" ಎಂದು ಅಕ್ಕ ಸಂದೇಶ ಬೀರುತ್ತಾಳೆ. ಪತಿವ್ರತಾ ಸ್ತ್ರೀಯರಿಗಿದು ಸಂಜೀವಿನಿ. ಅಕ್ಕ ಮತ್ತೊಂದು ಲೌಕಿಕ ಉದಾಹರಣೆ ಇತ್ತು ಅದ್ವಿತೀಯ ಸಂದೇಶ ನುಡಿಯುತ್ತಾಳೆ. ಕಲ್ಯಾಣದಿಂದ ಕದಳಿಗೆ ಬೀಳ್ಕೊಡಲು ಅಸಂಖ್ಯಾತ ಶರಣರು ನಿಂತಿದ್ದಾರೆ; ನುಡಿಯುತ್ತಾಳೆ ಅಕ್ಕ :

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ, ಬೆಳೆದೆ ಅಸಂಖ್ಯಾತರ ಕಾರುಣ್ಯದೊಳಗೆ
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪಾರಮಾರ್ಥವೆಂಬ
ಸಕ್ಕರೆಯ ನಿಕ್ಕಿದರು ನೋಡಾ, ಇಂತಪ್ಪ ತ್ರಿವಿಧಾಮೃತವ
ದಣಿಯಲೆರೆದು ಸಲಹಿದರೆನ್ನ, ವಿವಾಹವ ಮಾಡಿದಿರಿ.
ಸಯವಪ್ಪ ಗಂಡಂಗೆ ಕೊಟ್ಟಿರಿ; ಕೊಟ್ಟ ಮನೆಗೆ ಕಳುಹಲೆಂದು

ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ. ಬಸವಣ್ಣ ಮೆಚ್ಚುವಂತೆ
ಒಗೆತನವ ಮಾಡುವೆ. ಚೆನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ಮುಂಡೆಗೆ ಹುವ್ವ ತಹೆನಲ್ಲದೆ, ಹುಲ್ಲ ತಾರೆನವಧರಿಸಿ,
ಮರಳಿ ಬಿಜಯಂಗೈಯ್ಯುವುದು; ನಿಮ್ಮಡಿಗಳಿಗೆ ಶರಣು ಶರಣಾರ್ಥಿ.

ಜಗದಲ್ಲಿ ಜನ್ಮಿಸಿದ ಪ್ರತಿಯೊಬ್ಬನೂ ತಾಯಿ ತಂದೆಯರ ವಾತ್ಸಲ್ಯಾಮೃತದ ಹಾಲು, ಸಮಾಜದ ಋಣವೆಂಬ ತುಪ್ಪ; ರಾಷ್ಟ್ರ, ಗುರು ಹಿರಿಯರ ಸಂದೇಶವೆಂಬ ಸಕ್ಕರೆಯನ್ನುಂಡ ಬಳಿಕ ತನ್ನದಾದ ಕಾಣಿಕೆಯನ್ನು ಜಗತ್ತಿಗೆ ತಾನೇನು ಸಲ್ಲಿಸಿದೆ ಎಂದು ವಿಚಾರಿಸಿಕೊಳ್ಳಬೇಕು. ಹುಟ್ಟಿದ ಮನೆಯನ್ನು, ಕೊಟ್ಟ ಮನೆಗಳೆರಡನ್ನೂ ಹೆಣ್ಣು ಮಗಳು ಬೆಳಗಬೇಕು. ಅದೇ ರೀತಿ ಹುಟ್ಟಿದ ಸಮಾಜವನ್ನು ಕೊಟ್ಟ ಪರಮಾತ್ಮನ ಹೃದಯವನ್ನು ಬೆಳಗಿ ನಾವು ಹುಟ್ಟಿದ ಸಮಾಜಕ್ಕೆ ಹೂವನ್ನೂ, ಅರ್ಥಾತ್ ಶ್ರೇಯಸ್ಸು-ಕೀರ್ತಿಯನ್ನು ತರಬೇಕೇ ಹೊರತು, ಅಪಕೀರ್ತಿಯ ಹುಲ್ಲುಕಡ್ಡಿಯನ್ನಲ್ಲ; ಜಗದಲ್ಲಿ ಬಾಳಿ ಬದುಕಿದ ಬಳಿಕ ತನ್ನದಾದ ಕಾಣಿಕೆಯನ್ನು ಸಲ್ಲಿಸಿಯೇ ತೀರಬೇಕು. ಜಗದೊಳಗಿದ್ದೂ ಇಲ್ಲದಂತೆ ತಾವರೆಯ ಎಲೆಯಂತೆ, ನಿರ್ಲಿಪ್ತನಾಗಿ ಚಿತ್ತಸಮತೆಯಿಂದ ಬಾಳನ್ನು ಸ್ವೀಕರಿಸಬೇಕು. ಜಗತ್ತಿಗೆ ಬೆನ್ನು ತೋರಿಸಿ ಹೋಗುವುದು ಶರಣರ ಮಾರ್ಗವಲ್ಲ. ಅನಿಷ್ಟದೊಡನೆ ಹೋರಾಡಿ ಇಷ್ಟವನ್ನು ಸಾಧಿಸುವ ಪ್ರವೃತ್ತಿ ಮಾರ್ಗವೇ ಶ್ರೇಯಸ್ಕರ, ಅದಕ್ಕಾಗಿ ಸಂಸಾರ ಬಿಡಬೇಕಾಗಿಲ್ಲ. ಅದನ್ನು ಸದ್ಗತಿಯ ಸಾಧನವಾಗಿ ಮಾಡಿಕೊಳ್ಳಬೇಕು. ಸರ್ವಾಂಗವನ್ನು ಲಿಂಗಮಯ ಮಾಡಿಕೊಂಡು, ಉದಾತ್ತೀಕರಿಸಿಕೊಂಡು ಮುಗ್ಧವಾದ ಪವಿತ್ರ ಮಗುವಿನಂತಾಗಬೇಕು. Unless ye be children you cannot enter into the kingdom of God.

ಎಂದು ಏಸುವು ನುಡಿದ. ಅಕ್ಕಮಹಾದೇವಿ ನಗ್ನಳಾಗಿ ಅನುಭವ ಮಂಟಪದ ಮುಂದೆ ಬಂದು ನಿಂತಾಗ ಶರಣರಿಗೆ ಕಂಡ ರೂಪಾವುದು ? ಸಣ್ಣ ಕೂಸಿನ ರೂಪ.

ಹೆಂಗೂಸಿನಂಗವ ನೋಡಿರೆ ಪುರಾತನರು
ಬಾಲತನದಂಗವ ನೋಡಿರೆ ಲಿಂಗವಂತರು

ಎಂದು ಅಣ್ಣನವರು ಬಾಯ್ತುಂಬಿ ನುಡಿದರು. ಹೀಗೆ ಅಕ್ಕನು ಮಾಯೆಯ, ಮೋಹದ ಸೆರಗನ್ನು ಬೀಸದೆ, ಜಗಕ್ಕೆ ವಾತ್ಸಲ್ಯ ವೈರಾಗ್ಯದ ಮಡಿಲನ್ನು ನೀಡಿ ಜಗತ್ಪತಿಯನ್ನು ಲಗ್ನವಾಗಿ ಜಗನ್ಮಾತೆಯಾದಳು. ★

ಕಲ್ಯಾಣ ಕಿರಣಕ್ಕೆ ಚಂದಾದಾರರಾಗಿರಿ

ಸ್ಫುರಣ-ಕಿರಣ

ಅಪಾಯಕಾರಿ ಆಶ್ರಯ

ಸಂ : ಮಾತಾಜಿ

ಒಂದು ದಿವಸ ಜಯನಗರದ ಕಡೆಗೆ ಪ್ರವಚನಕ್ಕೆ ಕಾರಿನಲ್ಲಿ ಹೋಗುತ್ತಿದ್ದೆವು. ಪಕ್ಕದಲ್ಲಿ ಒಬ್ಬ ಸೈಕಲ್ ಸವಾರನು ಸಾಹಸದಿಂದ, ಹೋಗುವ ಲಾರಿಯ ಕಟ್ಟನ್ನು ಹಿಡಿದು ಸಾಗುತ್ತಿದ್ದ. 'ಲಾರಿಯ ಬಲದಿಂದ ನಿರಾಯಾಸವಾಗಿ, ಸೈಕಲ್ ತುಳಿಯದೆಯೇ ಮುಂದೆ ಹೋಗಬೇಕು' ಎಂಬ ಆಕಾಂಕ್ಷೆ ಅವನದು. ನಾನು ಆಲೋಚಿಸುತ್ತಿದ್ದೆ : "ಅಕಸ್ಮಾತ್ ಏನಾದರೂ ಅಡ್ಡಬಂದು, ವೇಗವಾಗಿ ಹೋಗುವ ಲಾರಿ ಗಕ್ಕನೆ ನಿಂತರೆಂತು ? ಯಾವುದರ ಬಲದಿಂದ ಹೋಗುತ್ತಿರುವನೋ ಅದರ ಗಾಲಿಯ ಕೆಳಗೆ ಬಿದ್ದು ಸಾಯುವನಲ್ಲವೆ ? ಅದರ ಬದಲು ತಡವಾದರೂ, ನಿಧಾನವಾದರೂ ಚಿಂತೆಯಿಲ್ಲ ತನ್ನ ಸ್ವಂತ ಬಲದಿಂದ ತಾನೇ ಮುಂದೆ ಸಾಗುವುದು ಸುರಕ್ಷಿತ ಮತ್ತು ಹಿತವಲ್ಲವೆ ? ಅದೇ ರೀತಿ ಮೂಢ ಸಂಪ್ರದಾಯದ ಬಲದಿಂದ ಮುಂದೆ ಹೋಗುವುದು ಸ್ವಲ್ಪ ಹರ್ಷದಾಯಕವಾಗಿ ಮತ್ತು ಸುಲಭವಾಗಿ ಪ್ರಾರಂಭದಲ್ಲಿ ಕಂಡರೂ, ವಿಜ್ಞಾನವು ಆ ಮೂಢ ಸಂಪ್ರದಾಯಕ್ಕೆ ಅಡ್ಡಬಂದು ಅದು ಗಕ್ಕನೆ ನಿಂತಾಗ ಅದನ್ನು ಅವಲಂಬಿಸಿದವನೂ ತಾಪತ್ರಯಕ್ಕೆ ಸಿಕ್ಕಿ ನಲುಗುವುದು ಖಂಡಿತ; ಅದರ ಬದಲು ವೈಚಾರಿಕತೆಯ ಸ್ವಂತ ಬಲದಿಂದ ಮುಂದೆ ಸಾಗುವವನು ನಿರಪಾಯದಿಂದ ಮುಂದೆ ಸಾಗುವನು.

ಈ ಉದಾಹರಣೆಯನ್ನು ಇನ್ನೊಂದು ರೀತಿ ವಿಸ್ತರಿಸಬಹುದು. ಕೆಲವರು (ಸ್ವಾಮಿಗಳು, ರಾಜಕಾರಣಿಗಳು) ಜಾತೀಯತೆ ಪೋಷಿಸಿ, ತಮ್ಮ ಜಾತಿಯನ್ನು ಇತರರ ಹತ್ತಿಕ್ಕುವಿಕೆಯ ಮೇಲೆ ಸಂಘಟಿಸಿ, ರಾಜಕೀಯ ಬಲ ಉಪಯೋಗಿಸಿ ಮುಂದೆ ಬರಲು ಎಳಸುವರು. ಮುಂದೆ ಬರುವರೂ (ಬಂದಂತೆ ಕಾಣುವರೂ) ಸಹ. ಆದರೆ ಮತಾಂಧತೆ, ದುರಭಿಮಾನ, ಒಡೆದು ಆಳುವ ನೀತಿಗಳೆಂಬ ಲಾರಿ ಗಕ್ಕನೆ ನಿಂತಾಗ ಅದನ್ನು ಅವಲಂಬಿಸಿದ ಇವರೂ ಸಹ ಘಾಸಿಯಾಗುವುದು ಸಹಜ. ಅದರ ಬದಲು

ತಪಸ್ಸಾಧನೆ, ಸಾತ್ವಿಕ ವೃತ್ತಿ, ವಿಶಾಲ ಜಾತ್ಯತೀತ ಮನೋಭಾವನೆಯಿಂದ ಮುಂದು ವರಿದರೆ ನಿಧಾನವಾದರೂ, ಪರಿಶ್ರಮವಾದರೂ ಚಿಂತೆಯಿಲ್ಲ ನಿರಪಾಯವಾಗಿ ಗುರಿಯನ್ನು ಮುಟ್ಟಬಹುದಷ್ಟೇ.

ಪಾಸ್‌ಪೋರ್ಟ್–ಪ್ರವೇಶಪತ್ರ

ವಿದೇಶಕ್ಕೆ ಹೊರಟಿದ್ದ ಭಾರತೀಯರೊಬ್ಬರು ದರ್ಶನಕ್ಕೆ ಬಂದಿದ್ದರು. ಮೊದಲು ತಿಳಿಸಿದ ದಿನಾಂಕಕ್ಕೆ ಹೊರಡಲು ಅವರಿಗೆ ಆಗಿರಲಿಲ್ಲ. ಏಕೆಂದಾಗ ರಹದಾರಿ ಸಿಕ್ಕಿದೆ ಮಾತ್ರ, ಬ್ರಿಟಿಷ್ ಎಂಬೆಸ್ಸಿಯಿಂದ ಪ್ರವೇಶ ಒಪ್ಪಿಗೆ ಸಿಕ್ಕಿಲ್ಲವಾದ ಕಾರಣ ಪ್ರಯಾಣ ಮುಂದೂಡಬೇಕಾಯಿತು ಎಂದರು. ಈ ಪ್ರಸಂಗದಿಂದ ಪೂಜ್ಯರಾದ ಸದ್ಗುರು ಲಿಂಗಾನಂದ ಸಾಮಿಗಳಿಗೆ ಒಂದು ವಿಚಾರ ಸ್ಫುರಿಸಿತು. ಆಗ ಹೇಳಿದರು : "ವಿದೇಶಕ್ಕೆ ಹೋಗಬೇಕು ಎಂಬುವ ಮನುಷ್ಯನಿಗೆ ನಮ್ಮ ದೇಶದಿಂದ ಹೋಗಬಹುದು ಎಂಬ ರಹದಾರಿ ಪತ್ರ, ತಮ್ಮ ದೇಶದೊಳಗೆ ಬರಬಹುದು ಎಂಬ ಪ್ರವೇಶ ಪತ್ರ (Entry permit) ಗಳೆರಡೂ ಬೇಕಲ್ಲವೆ? ಹಾಗೆ ದೈವೀರಾಜ್ಯ, ದಿವ್ಯಾನುಭವ ವಲಯಕ್ಕೆ ಪ್ರವೇಶಿಸಬಯಸುವ ಮುಮುಕ್ಷುವಿಗೆ ದೀಕ್ಷಾಗುರುವಿನಿಂದ ಅನುಗ್ರಹವೆಂಬ ರಹದಾರಿ ಪತ್ರ, ಧರ್ಮಗುರುವಿನ ಕಾರುಣ್ಯವೆಂಬ ಪ್ರವೇಶ ಪತ್ರ ಬೇಕೇಬೇಕು.

ಟ್ಯೂಬು–ಲೈಟು

ಜಯನಗರದಲ್ಲಿ ಪ್ರವಚನ ನಡೆದಿತ್ತು. ತಂತಿ ಸ್ವಲ್ಪ ಷಾರ್ಟ್‌ಆಗಿ ಸುಟ್ಟು ಒಂದು ಭಾಗದ ವಿದ್ಯುತ್ ಸಂಚಾರ ವ್ಯವಸ್ಥೆ ನಿಂತುಹೋಯಿತು. ಟ್ಯುಬ್ ಲೈಟುಗಳನ್ನು ಅಡ್ಡಲಾಗಿ, ಕಂಭಕ್ಕೆ ಸಮಾನಾಂತರವಾಗಿ ವಿವಿಧ ಭಂಗಿಗಳಲ್ಲಿ ಕಟ್ಟಿತ್ತು. ಆದರೂ ವಿದ್ಯುತ್ ಹರಿಯದಾಗ ಯಾವಬಗೆಯಲ್ಲಿ ಕಟ್ಟಿದರೂ ಅವು ಟ್ಯೂಬ್ ಎನ್ನಿಸಿಕೊಳ್ಳಬಲ್ಲವೇ ವಿನಾ ಲೈಟ್ ಅಲ್ಲ,

ಆಗ ಗುರೂಜಿಯವರು ನುಡಿದರು : ಅದೇ ರೀತಿಯಲ್ಲಿ ಲಿಂಗಾಯತರು ಹಣೆಯ (ಮೇಲೆ ೩ ಬಿಳಿಯ ವಿಭೂತಿಪಟ್ಟೆ ಟ್ಯೂಬ್‌ಗಳನ್ನು) ಧರಿಸಿಕೊಳ್ಳಬಹುದು. ರಾಮಾನುಜ ಪಂಥೀಯರು ಉದ್ದುದ್ದವಾಗಿ ಮೂರು (ನಾಮದ)ಪಟ್ಟೆಗಳನ್ನು ಹಾಕಬಹುದು, ಇನ್ನು ಕೆಲವರು ಬೇರೆ ಬೇರೆ ರೀತಿಯ ಧರ್ಮಲಾಂಛನ ಧರಿಸಬಹುದು. ಆದರೆ ಜ್ಞಾನದ ವಿದ್ಯುತ್ ಅಲ್ಲಿ ಹರಿಯದಿದ್ದರೆ, ಸಾತ್ವಿಕತೆ ಅಳವಡದಿದ್ದರೆ ಆ ಲಾಂಛನಗಳು ಯಾಂತ್ರಿಕವಾಗಿದ್ದು 'ಟ್ಯೂಬ್' ಎನಿಸಿಕೊಳ್ಳಬಹುದೇ ವಿನಾ ಟ್ಯೂಬ್ ಲೈಟಲ್ಲ.

ಕಲ್ಯಾಣ ಕಿರಣ

ಮಾತು ಜ್ಯೋತಿರ್ಲಿಂಗ

—ಸಂ : ಎಸ್. ನಂಜಾಮರಿ, ಬಿ.ಎ.,

1. ಬಡವರು ನೀವೆಂದು ಯೋಚಿಸಬೇಡಿ. ಹಣವೊಂದೇ ಶಕ್ತಿಯಲ್ಲ, ಒಳ್ಳೆಯತನ, ಪಾವಿತ್ರ್ಯತೆಗಳೇ ನಿಜವಾದ ಶಕ್ತಿಗಳು. —**ವಿವೇಕಾನಂದ.**

2. ಯಾವನು ಸೇವೆಗಾಗಿ ಶರೀರಾತ್ಮಗಳನ್ನು ಮತ್ತು ತನ್ನನ್ನೂ ಸಮರ್ಪಿಸುವನೋ ಅವನೇ ವಿಜಯಶಾಲಿ. —**ಪೈಗಂಬರ.**

3. ಪ್ರಪಂಚದ ಎಲ್ಲಾ ತಿಳುವಳಿಕೆಯ ಸಂಗ್ರಹವನ್ನು ನಾನು ನನ್ನ ನೆಲದಂತೆ ಪ್ರೀತಿಯಿಂದ ಕಾಣುತ್ತೇನೆ. —**ಬೇಕನ್.**

4. ಇನ್ನೊಬ್ಬರನ್ನು ಸರಿಯಾಗಿ ತಿಳಿದುಕೊಂಡಾತ ಪಂಡಿತ, ಆದರೆ ತನ್ನನ್ನೇ ಸರಿಯಾಗಿ ತಿಳಿದುಕೊಂಡಾತ ಧೀಮಂತ. —**ಲಾವೋತ್ಸೆ.**

5. ಸದ್ಗುಣ ಎಂದೂ ಏಕಾಕಿಯಾಗಿರುವುದಿಲ್ಲ. ಅದಕ್ಕೆ ನೆರೆಹೊರೆ ಇದ್ದೇ ಇರುತ್ತವೆ. —**ಕನ್‌ಫ್ಯೂಷಿಯಸ್.**

6. ಮನೆಯೊಳಗಣ ಕಿಚ್ಚು ಮನೆಯನ್ನೇ ಸುಡುವಂತೆ, ಮನದೊಳಗಣ ಕೋಪದ ಕಿಚ್ಚು ತನ್ನನ್ನೇ ಸುಡುವುದು. —**ಬಸವಣ್ಣ.**

7. ಅಪವಾದ ಬರುವುದು ಹೆಚ್ಚು ಎತ್ತರ ಬಿತ್ತರವಾಗಿ ಇರುವವನಿಗೆ ; ಗಾಳಿ ಬಡಿಯುವುದು ಎತ್ತರವಾದ ಗಿಡಕ್ಕಲ್ಲದೆ ಅದರ ಚಾಟಿನಲ್ಲಿ ಬೆಳೆದಿರುವ ಸಣ್ಣ ಗಿಡಕ್ಕಲ್ಲ, ಹಾಗೆಯೇ ಮಹಾತ್ಮರುಗಳಿಗೆ ಹೆಚ್ಚಿನ ಅಪವಾದವಲ್ಲದೆ ಸಾಮಾನ್ಯರಿಗಲ್ಲ.

—**ಸ್ವಾಮಿ ಲಿಂಗಾನಂದರು.**

8. ತಾನು ಕೊಟ್ಟುದನ್ನು ಮರೆತು, ಪಡೆದುದನ್ನು ಮರೆಯದಿರುವುದೇ ಸ್ನೇಹದ ಪ್ರಮುಖ ಲಕ್ಷಣ. —**ಎ. ಡ್ಯುಮಾಸ್.**

9, ಹಣವೇ ಸರ್ವಸ್ವವೆನ್ನುವವನಿಗೆ ಗುರು ಮತ್ತು ಬಂಧುಗಳಿಲ್ಲ ; ವಿದ್ಯಾರ್ಥಿಗೆ ಸುಖನಿದ್ರೆಯಿಲ್ಲ ; ಸಾಧಕನಿಗೆ ರುಚಿ ಕಾಲವಿಲ್ಲ. —**ರವೀಂದ್ರನಾಥ ಠಾಗೋರ್.**

ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ

ಬಸವ ಮಂಟಪ ದೂರವಾಣಿ: 82335
24, ಎರಡನೆ ಬ್ಲಾಕು, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-560010

ಕಳೆದ ವರ್ಷದಿಂದ ಧರ್ಮ ಪ್ರಸಾರಕರನ್ನು ತರಬೇತಿಗೊಳಿಸುವ ಉದ್ದೇಶ ಹೊಂದಿ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ ಪ್ರಾರಂಭವಾಯಿತಷ್ಟೇ. ಮೊದಲ ತಂಡವು ಒಂದು ವರ್ಷದ ಅಧ್ಯಯನ ಮುಗಿಸಲಿದೆ, ಎರಡನೇ ವರುಷದ ತರಬೇತಿಗೆ ಪ್ರವೇಶವು ಏಪ್ರಿಲ್ ತಿಂಗಳ ಎರಡನೆಯವಾರದಲ್ಲಿ ಪ್ರಾರಂಭವಾಗಲಿದೆ. ಆದ್ದರಿಂದ ಒಂದು ವರ್ಷದ "ಧರ್ಮಶಾಸ್ತ್ರ ಪ್ರವೇಶ" ಅಧ್ಯಯನ ಮಾಡಲು ಇಚ್ಛಿಸುವವರು ಏಪ್ರಿಲ್ ಹದಿನೈದರೊಳಗೆ ಮುಟ್ಟುವಂತೆ ಅರ್ಜಿಸಲ್ಲಿಸಬೇಕು. ಪ್ರಾಸ್ಪೆಕ್ಟಸ್ ಮತ್ತು ಅರ್ಜಿಗಾಗಿ ೨ ರೂಪಾಯಿ (ಅಂಚೆಶುಲ್ಕ ೦-೫೦) ಗಳನ್ನು ಎಂ. ಓ ಮಾಡಿಕಳಿಸಿರಿ. ಇದಕ್ಕೆ ಕನಿಷ್ಠಾರ್ಹತೆ. ಎಸ್. ಎಸ್. ಎಲ್. ಸಿ.

ಸಾಧಕರಿಗೆ ಪ್ರವೇಶ

ಸದ್ಗುರುಗಳ ಸನ್ನಿಧಿಯಲ್ಲಿ, ಸಜ್ಜನರ ಸಂಗದಲ್ಲಿ ಕಾಯಕ, ಅಧ್ಯಯನ, ಅರ್ಚನೆ ಮಾಡಿಕೊಂಡು ಸಾತ್ವಿಕರೀತಿಯಲ್ಲಿ ಜೀವನವನ್ನು ಕಳೆಯಬೇಕೆಂಬುವ ಮುಮುಕ್ಷುಗಳಿಗೆ ಆಶ್ರಮದಲ್ಲಿ ಪ್ರವೇಶ ಉಂಟು ಕೆಲವಾರು ದಿವಸಗಳ ಮಟ್ಟಿಗೆ ತಾತ್ಕಾಲಿಕ ಪ್ರವೇಶ ಮಾತ್ರ. ಅವರ ಸ್ವಭಾವ,ವೃತ್ತಿ ಆಸಕ್ತಿಗಳನ್ನು ಅಭ್ಯಸಿಸಿದ ನಂತರ ಸ್ಥಿರವಾದ ಅವಕಾಶ, ದೀಕ್ಷೆ ಕೊಡಲಾಗುವುದು. ಖಾಯಂ ಆಶ್ರಮವಾಸಿಯಾದ ನಂತರ ಜೀವ ವಿಮಾ ಯೋಜನೆಯನ್ವಯ "ಸಾಧಕ" ಭದ್ರತಾ ನಿಧಿ (Aspirants Security Fund) ಯಿಂದ ವಿಮಾ ಸೌಲಭ್ಯ ಉಂಟು. ನಿರ್ಧಾರಗಳ ಹಕ್ಕು ಸಂಸ್ಥೆಯ ನೇತಾರರಿಗೆ ಮಾತ್ರ.

ವೃದ್ಧಾಲಯ

ಮಕ್ಕಳಿಲ್ಲದ, ಮಕ್ಕಳಿದ್ದೂ ನೋಡಿಕೊಳ್ಳದ, ಎಲ್ಲ ಅನುಕೂಲವಿದ್ದೂ ಸಹ ಅಧ್ಯಾತ್ಮಿಕ ವಾತಾವರಣದಲ್ಲಿರಬಯಸುವ ವಯಸ್ಕರಾದರವರಿಗೆ ಒಳ್ಳೆಯ ವಾತಾವರಣ ಶಾಂತಿ, ಸಾತ್ವಿಕರ ಸಂಗವನ್ನು, ಸಾಮೂಹಿಕ ಬದುಕನ್ನು ಒದಗಿಸಿ ಕೊಡಲು ಒಂದು ಅವಕಾಶ ಕಲ್ಪಿಸಲಿದೆ ವಿಶ್ವಕಲಾಣ ಮಿಷನ್. ತಮ್ಮ ಜೀವನ ನಿರ್ವಹಣಾ ವೆಚ್ಚವನ್ನು ಸಂಸ್ಥೆಗೆ ಕೊಡ ಬೇಕಾಗುತ್ತದೆ. ಈ ಯೋಜನೆಯ ವಿವರ ತಿಳಿಯಲು ಸಂಸ್ಥೆಗೆ ಬರೆದುಕೊಳ್ಳಿರಿ.

ಆದರದ ಸೇವೆ, ಒಳ್ಳೆಯ ವೈದ್ಯಕೀಯ ಸೌಲಭ್ಯ, ಸ್ನೇಹ ಸೌಹಾರ್ದಗಳ ವಾತಾವರಣ ಲಭ್ಯವಾಗುವುದು ಪ್ರವೇಶಕ್ಕೆ ಬೇಕಾದ ಅರ್ಹತೆ, ನಿಯಮಗಳನ್ನು ಆಸಕ್ತಿ ಇದ್ದವರು ಬರೆದು ತಿಳಿದುಕೊಳ್ಳಬೇಕು.

ವಿಶ್ವ ಕಲ್ಯಾಣ ಮಿಷನ್ ಜಾಹಿರಾತು ಪ್ರಕಟಣೆ

ಬೇಕಾಗಿದ್ದಾರೆ

(ದೂರವಾಣಿ 82339)

1. ಕಲ್ಯಾಣ ಕಿರಣ ಮಾಸಪತ್ರಿಕೆ ಕಾರ್ಯಾಲಯದಲ್ಲಿ ಉಪಸಂಪಾದಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ.

ಅರ್ಹ : ಸಾಹಿತ್ಯದಲ್ಲಿ ಆಸಕ್ತಿ ಮತ್ತು ಅನುಭವ. ವಚನ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮತ್ತು ಬರವಣಿಗೆಯ ಕಲೆ. ಗ್ರಂಥಗಳನ್ನು ರಚಿಸಿದ್ದರೆ ಅಥವಾ ಲೇಖನಗಳನ್ನು ಎಲ್ಲಿಯಾದರೂ ಪ್ರಕಟಿಸಿದ್ದರೆ ಅದರ ಮಾಹಿತಿ, ಪತ್ರಿಕೋದ್ಯಮದಲ್ಲಿ ಹೃತ್ಪೂರ್ವಕ ಶ್ರದ್ಧೆ ಇರಬೇಕು. ಕನಿಷ್ಠಾರ್ಹತೆ ಎಸ್. ಎಸ್. ಎಲ್. ಸಿ.

2. ವಿಶ್ವಕಲ್ಯಾಣ ಮಿಷನ್ ಕಾರ್ಯಾಲಯದಲ್ಲಿ ಲೆಖ್ಖಪತ್ರಗಳನ್ನಿಡಲು, ಪತ್ರ ವ್ಯವಹಾರ ಮಾಡಲು ಒಳ್ಳೆಯ ಬರವಣಿಗೆ ಇರುವ ಕಾರಕೂನರು ಬೇಕಾಗಿದ್ದಾರೆ. ಅಕೌಂಟೆನ್ಸಿಯಲ್ಲಿ ತಿಳುವಳಿಕೆ ಇರಬೇಕು. ಅರ್ಹತೆ: ಅನುಭವ ಮತ್ತು ಶ್ರದ್ಧೆ. ಕನಿಷ್ಠ ವಿದ್ಯಾರ್ಹತೆ : ಎಸ್. ಎಸ್. ಎಲ್.ಸಿ. ಟೈಪ್‌ರೈಟಿಂಗ್ ಅವಶ್ಯ.

ವಿ. ಸೂ :—ಮಾದರಿಗಾಗಿ ಅರ್ಜಿಯನ್ನು ಮುದ್ರಿಸಲಾಗಿದೆ ಅದನ್ನು ಸ್ಪಷ್ಟವಾಗಿ ಬರೆದಾಗಲೀ ಅಥವಾ ಟೈಪ್ ಮಾಡಿಯಾಗಲಿ ತುಂಬಿ ಕಳುಹಿಸಿರಿ.

ಚೇರ್ಮನ್, ವಿಶ್ವಕಲ್ಯಾಣ ಮಿಷನ್
ಬಸವ ಮಂಟಪ, 24, 2ನೇ ಬ್ಲಾಕ್
ಕಾರ್ಡ್'ರಸ್ತೆ, ರಾಜಾಜಿನಗರ, ಬೆಂಗಳೂರು-560010

1. ಅಭ್ಯರ್ಥಿಯ ಹೆಸರು. ತಂದೆಯ ಹೆಸರು
2. ಪೂರ್ಣ ವಿಳಾಸ
   (1) ತಾತ್ಕಾಲಿಕ (2) ಸ್ಥಿರ
3. ಸ್ತ್ರೀಯೋ ಅಥವಾ ಪುರುಷನೋ
4. a) ಧರ್ಮ b) ಜಾತಿ
5. ಹುಟ್ಟಿದ ದಿನಾಂಕ ಮತ್ತು ವಯಸ್ಸು
6. ವಿದ್ಯಾರ್ಹತೆ. (ಅವಶ್ಯಕ ಪ್ರಮಾಣಪತ್ರಗಳ ನಕಲು)
7. ಸದ್ಯದಲ್ಲಿ ಕೈಗೊಂಡಿರುವ ವೃತ್ತಿ.
8. ಸಂಸ್ಥೆಯನ್ನು ಪ್ರವೇಶಿಸುವ ಉದ್ದೇಶ.
9. ವಿವಾಹಿತ ಅಥವಾ ಅವಿವಾಹಿತ.
10. ಈಗ ಅರ್ಜಿಹಾಕಿರುವ ಹುದ್ದೆಯಾವುದು ?

ಅಭ್ಯರ್ಥಿಯ ಸಹಿ

ಹಿಂದಿನ ಸಂಚಿಕೆಯವರೆಗೆ

(ಧರ್ಮ ಪ್ರಸಾರ–ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆಯವರು ೧೯೭೬ ಮೇ ೧೪ ರಂದು ತಾಯ್ನಾಡಿನಿಂದ ತೆರಳಿದ್ದರು. ಏಕಾಂಗಿನಿಯಾಗಿ ಅಪರಿಚಿತ ನಾಡಿಗೆ ಹೋದ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರೂ, ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗಿದರು. ತಮ್ಮ ಅನುಭವಗಳನ್ನು ತತ್ತ್ವಜ್ಞಾನದೊಡನೆ ಮೇಳೈಸಿ ವಿವರಿಸುತ್ತಿದ್ದಾರೆ.)

ಧಾರಾವಾಹಿ–೭. **ಜಗದ್ಗುರು ಮಾತಾಜಿ.**

ಬಿಡುವು ದೊರೆತಾಗಲೆಲ್ಲ ಬ್ರಿಟಿಷ್ ಮ್ಯೂಸಿಯಮ್ ಗ್ರಂಥಾಲಯಕ್ಕೆ ಹೋಗುತ್ತಲಿದ್ದೆ. ಒಂಟಿತನದ ಬೇಸರವನ್ನು ಕಳೆಯುವುದು ಉದ್ದೇಶಗಳಲ್ಲಿ ಒಂದಾದರೆ, ಭಾರತೀಯ ಧರ್ಮಗಳ ಬಗ್ಗೆ ವಿಶೇಷ ಗ್ರಂಥ ಸಂಗ್ರಹವಿದ್ದುದು ಅಲ್ಲಿನ ನಿಜವಾದ ಆಕರ್ಷಣೆಯಾಗಿತ್ತು. ಆಧ್ಯಾತ್ಮ ಶಾಸ್ತ್ರಗಳನ್ನು ಅಭ್ಯಸಿಸುತ್ತ, ಆಂಗ್ಲನಾಡಿನ ಕೆಲವು ಆಧುನಿಕ ಸಾಹಿತಿಗಳ, ಕಾದಂಬರಿಕಾರರ ಕೃತಿಗಳ ಪರಿಚಯಕ್ಕೂ ತೊಡಗಿದ್ದೆ. ಸಾಹಿತ್ಯಾಧ್ಯಯನದ ರುಚಿಯನ್ನು ಬಲ್ಲವರೇ ಬಲ್ಲರು. ಅದು ಏಕಾಂಗಿತನದ ಬೇಸರ ಕಳೆಯಬಲ್ಲದು, ಏಕಾಗ್ರತೆ ನೀಡಬಲ್ಲದು; ಜೀವನದ ಬಗೆಯನ್ನು ರೂಪಿಸಬಲ್ಲದು, ಜಗತ್ತನ್ನು ಅಂಗೈಯಲ್ಲಿ ತೋರಿಸಬಲ್ಲದು. ಸಾಹಿತ್ಯ ಸರಸ್ವತಿಯ ಸ್ನೇಹಾಸಕ್ತನಿಗೆ ಬೇಸರ–ಜಿಗುಪ್ಸೆಗಳು ಸನಿಹಕ್ಕೆ ಸುಳಿಯಲಾರವು.

ನನ್ನೊಡನೆ ಉಪಯುಕ್ತ ಕೆಲವೇ ಗ್ರಂಥಗಳನ್ನು ಒಯ್ದಿದ್ದೆ. ಹೀಗಾಗಿ ಹೆಚ್ಚಿನ ವಿವರ ಬೇಕಾದಲ್ಲಿ, ಅದರಲ್ಲೂ ಮುಖ್ಯವಾಗಿ ಕಿಟೆಲ್ ಶಬ್ದಕೋಶ ಅವಶ್ಯವೆನಿಸಿದಲ್ಲಿ ಗ್ರಂಥಾಲಯದ ಓರಿಯಂಟಲ್ ವಿಭಾಗಕ್ಕೆ ಹೋಗಿ ಪಡೆಯುತ್ತಿದ್ದೆ. ವ್ಯವಸ್ಥೆ ಬಹು ಗಂಭೀರ; ಸಂಗ್ರಹಾಲಯದ ಮಹಾದ್ವಾರದಲ್ಲಿ ಒಮ್ಮೆ ತಪಾಸಣೆ. ಗ್ರಂಥಾಲಯ ಹೊಗುವಾಗ ಮತ್ತೊಮ್ಮೆ, ಓರಿಯಂಟಲ್ ವಿಭಾಗವಂತೂ ಸಹಾ ಕೀಲಿಯಲ್ಲಿ. ನಮ್ಮ ಪ್ರವೇಶ ಪತ್ರ ನೋಡಿದಾಗಲೇ ಕೀಲಿಯನ್ನು ತೆರೆಯುತ್ತಿದ್ದ ದ್ವಾರಪಾಲಕ. ನಿರ್ಲಕ್ಷ–ಆಲಸ್ಯಗಳ ಸೋಂಕಿಲ್ಲದ ಕರ್ತವ್ಯ ನಿಷ್ಠೆ ದ್ವಾರಪಾಲಕರಲ್ಲಿ. ಗ್ರಂಥಾಲಯದಲ್ಲಿ ಕುಳಿತು ಅಧ್ಯಯನ ಮಾಡುವಾಗಲೇ ನನ್ನ ಮೇಲೆ ಕುತೂಹಲದ ದೃಷ್ಟಿ ಬಿದ್ದು, ಗೌರವ ಮಿಶ್ರಿತ

ಆದರದಿಂದ ಪರಿಚಯ ಮಾಡಿಕೊಂಡ ವ್ಯಕ್ತಿ ಡಾ|| ತ್ರಿಲೋಚನ ಸಿಂಗ್. ಪಂಜಾಬಿನ ಈ ವಿದ್ವಾಂಸರು ಉಪನ್ಯಾಸ ಕಾರ್ಯಾರ್ಥ ಲಂಡನ್ನಿಗೆ ಬಂದಿದ್ದು ಬಿಡುವಿನಲ್ಲಿ ಗ್ರಂಥಾಲಯಕ್ಕೆ ಬರುತ್ತಿದ್ದರು.

ಮುಡಿಯನ್ನು ಎತ್ತಿಕಟ್ಟಿ, ರುದ್ರಾಕ್ಷಿ–ವಿಭೂತಿ ಮುಂತಾದುವನ್ನು ಧರಿಸಿ, ಕಾವಿಯನ್ನು ಉಟ್ಟು ಓಡಾಡುವ ನನ್ನ ಬಗ್ಗೆ ಸ್ವಾಭಾವಿಕ ಆಸಕ್ತಿ ಕೆರಳಿ, ನಾನು ಅಭ್ಯಾಸದಲ್ಲಿ ತೊಡಗಿದ್ದಾಗ ನನ್ನ ಸನಿಹ ಬಂದು, 'ಕ್ಷಮಿಸಿ ತಾಯಿ, ತಮ್ಮೊಡನೆ ಮಾತನಾಡಬೇಕಿತ್ತು' ಎಂದರು. ಸಿಖ್ ಧರ್ಮದಲ್ಲಿ ಆಳವಾದ ಅಧ್ಯಯನ ಮಾಡಿ ಹಲವಾರು ಗ್ರಂಥಗಳನ್ನು ರಚಿಸಿದ್ದ ಅವರ ವ್ಯಕ್ತಿತ್ವ ಸಾತ್ವಿಕ, ಪ್ರೌಢ ಮತ್ತು ಗಂಭೀರವಾಗಿತ್ತು. ಸಿಖ್ ಜನಾಂಗವನ್ನು ಕಂಡರೆ ನನಗೆ ಮೊದಲಿನಿಂದಲೂ ವಿಶೇಷ ಆಸಕ್ತಿ. ಏಕೆಂದರೆ ವೀರತ್ವ–ವಿನಯಗಳೆರಡರ ಸಂಗಮವಾಗಿದ್ದಾರೆ ಅವರು. ಧೈರ್ಯ, ರಾಷ್ಟ್ರಾಭಿಮಾನ, ಧರ್ಮಾಭಿಮಾನ ಅವರಲ್ಲಿ ಉತ್ಕಟ. ಆದರೆ ಎಂದೂ ಇನ್ನೊಬ್ಬರ ಮೇಲೆ ಆಕ್ರಮಣ ಮಾಡುವವರಲ್ಲ. ಇನ್ನೊಬ್ಬರ ಮೇಲೆ ಎಂದೂ ಆಕ್ರಮಣ ಮಾಡುವವರಲ್ಲವಾದರೂ ಇನ್ನೊಬ್ಬರು ಆಕ್ರಮಣ ಮಾಡಿದಾಗ ಆತ್ಮರಕ್ಷಣೆ ಸಮರ್ಪಕವಾಗಿ ಮಾಡಿಕೊಳ್ಳುವವರು. ಸಾಧು–ಸಂತರೆಂದರೆ ಅವರಿಗೆ ಎಲ್ಲಿಲ್ಲದ ಭಕ್ತಿ, ತಮ್ಮ ಗುರುದ್ವಾರಗಳ ಬಗ್ಗೆ ಅಖಂಡ ನಿಷ್ಠೆ.

ಡಾ|| ತ್ರಿಲೋಚನ ಸಿಂಗರ "The Sacred writings of the Sikhs" ಜಾರ್ಜ್ ಅಲೆನ್ ಮತ್ತು ಅನ್‌ವಿನ್ ಲಿಮಿಟೆಡ್‌ನಿಂದ ಪ್ರಕಟಗೊಂಡಿತ್ತು. ಈಗವರು "ಭಾರತೀಯ ಅನುಭಾವ ಸಾಹಿತ್ಯದ" ಮೇಲೆ ಸಂಶೋಧನೆ ನಡೆಸಿದ್ದರು. ಅವರ ಪರಿಚಯದಿಂದ ಅಪೂರ್ವ ಆನಂದವಾಯಿತು ನನಗೆ. ನಾನಿದ್ದಲ್ಲಿಗೇ ಬಂದರೆ ನಮ್ಮ ಕೆಲವು ಸಾಹಿತ್ಯಕೃತಿ ಕೊಡಬಹುದೆಂದು ಭಾವಿಸಿ ಆಹ್ವಾನಿಸಿದೆ. ನನ್ನ ಕೋಣೆಯಲ್ಲಿದ್ದ ಬಸವಣ್ಣನವರ ಭಾವಚಿತ್ರ ನೋಡಿ ಆಶ್ಚರ್ಯ ಚಕಿತರಾಗಿ "ಇವರು ಯಾರು?" ಎಂದರು. ಆಗ ನಾನು ವಚನ ಸಾಹಿತ್ಯದ ಹಿರಿಮೆ–ಗರಿಮೆಗಳ ಬಗ್ಗೆ ಹೇಳಿ ಬಸವಣ್ಣನವರ ಪರಿಚಯ ಮಾಡಿಕೊಟ್ಟು ಕೆಲವು ವಚನ ಗ್ರಂಥಗಳನ್ನು ಕೊಟ್ಟೆ. ಅವರು ಮೂಕ ವಿಸ್ಮಿತರಾದರು. ಆನಂದ ತುಂದಿಲರಾದರು. ಬಸವಣ್ಣ ಮತ್ತು ಅಕ್ಕಮಹಾದೇವಿಯ ಕೆಲವು ವಚನ ಹಾಡಿದಾಗ ಹರುಷ ಜಲಧಾರೆಯನ್ನು ಹರಿಸಿದರು.

"ಭಾರತೀಯ ಅನುಭಾವ ಸಾಹಿತ್ಯಕ್ಕೆ ವಚನಕಾರರದ್ದು ಅಪೂರ್ವ ಕೊಡುಗೆ; ಅದರ ಅಧ್ಯಯನ ಮಾಡದಿದ್ದರೆ ಆ ಬಗ್ಗೆ ನೀವು ಮಾಡುವ ಸಂಶೋಧನೆ ಅಪೂರ್ಣವಾಗುವುದು" ಎಂದು ಹೇಳಿದಾಗ ಅವರು ಪ್ರಾಮಾಣಿಕವಾಗಿ ಒಪ್ಪಿದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕೆಲವಾರು ತಿಂಗಳ ಕಾಲ ಇದ್ದು ಅವಶ್ಯವಾದ ಸಾಹಿತ್ಯವನ್ನು ಅವಲೋಕಿಸಬಹುದೆಂದು ನಾನು ತಿಳಿಸಿದೆನಲ್ಲದೆ, ಆ ಬಗ್ಗೆ ವಿಶ್ವವಿದ್ಯಾಲಯದ ಉಪ

ಕುಲಪತಿಗಳೇನಾದರೂ ಸಹಕಾರ ನೀಡಬಹುದೇ ಎಂದು ಪತ್ರ ಬರೆದಾಗ, ಸನ್ಮಾನ್ಯ ಡಾ॥ ಆರ್. ಸಿ. ಹಿರೇಮಠರಿಂದ ಹೃತ್ಪೂರ್ವಕ ಸಹಕಾರದ ಭರವಸೆಯ ಪತ್ರ ಸಹ ಬಂದಿತು. ಸಮಯ ದೊರೆತಾಗ ಮತ್ತು ಅವಶ್ಯವೆನಿಸಿದಾಗ ಕರ್ನಾಟಕಕ್ಕೆ ಬರುವ ಅಪೇಕ್ಷೆ ಡಾ॥ ತ್ರಿಲೋಚನ ಸಿಂಗರು ವ್ಯಕ್ತಪಡಿಸಿದರಲ್ಲದೆ, ಮತ್ತೊಮ್ಮೆ ಭೇಟಿಯಾದಾಗ ವಿಷಾದದಿಂದ ನುಡಿದರು : "ಇಂಥಾ ಅಪೂರ್ವವಾದ, ಮಧುರಾ ಭಕ್ತಿಯ ಅನುಭಾವ ದಿಂದ ಪರಿಪ್ಲುತವಾದ ನಿತ್ಯನೂತನ ವಚನ ಸಾಹಿತ್ಯದ ಪರಿಚಯ ಭಾರತೀಯರಿಗೇ ಸಾಕಷ್ಟಿಲ್ಲದುದು, ಪ್ರಚಾರವು ಸರಿಯಾಗಿ ಆಗದುದು ತುಂಬಾ ದುರ್ದೈವದ ಸಂಗತಿ. ಕನ್ನಡ ಭಾಷೆಗೆ ಸೀಮಿತವಾಗಿ ಉಳಿದ ವಿಶ್ವಮೌಲ್ವಿಕ ಈ ಸಾಹಿತ್ಯ ಭಾರತೀಯ ಎಲ್ಲ ಸಹೋದರಿ ಭಾಷೆಗಳಿಗೆ ಅನುವಾದಗೊಳ್ಳಬೇಕು."

ಮೇಜರ್ ರಾಮಚಂದ್ರನ್ ಒಂದು ದಿವಸ ಬ್ರಿಟಿಷ್ ಮ್ಯೂಸಿಯಮ್ ಗ್ರಂಥಾ ಲಯವು ಸಂಜೆ 5ಕ್ಕೆ ಮುಚ್ಚಿದ ನಂತರ ಅಲ್ಲಿಂದಲೇ ನನ್ನನ್ನು 'ನ್ಯೂ ಆಕ್ಸ್‌ಫರ್ಡ್ ಸ್ಟ್ರೀಟ್‌ನಲ್ಲಿರುವ ಭಾರತೀಯ ವಿದ್ಯಾಭವನಕ್ಕೆ ಕರೆದೊಯ್ದರು. ಅಲ್ಲಿಯ ರಜಿಸ್ಟ್ರಾರ್ ಕೃಷ್ಣಮೂರ್ತಿ ಮತ್ತೂರರು ಹೃತ್ಪೂರ್ವಕ ಸ್ವಾಗತ ಕೋರಿದರು. ತಮ್ಮ ಗ್ರಂಥ ಭಂಡಾರ, ಮಾರಾಟ ಮಳಿಗೆ, ಯೋಗ ಮಂದಿರಗಳನ್ನು ಸಂತೋಷದಿಂದ ತೋರಿಸಿದರು. ಮತ್ತೂರು ಕೃಷ್ಣಮೂರ್ತಿಯವರು ಲಂಡನ್ ಶಾಖೆಯ ಭಾರತೀಯ ವಿದ್ಯಾಭವನ ವನ್ನು ಸಾಕಷ್ಟು ಅಭಿವೃದ್ಧಿ ಪಡಿಸಿ, ಜನತೆಯನ್ನು ಆಕರ್ಷಿಸಿದ್ದಾರೆ. ಮತ್ತು ಭಾರತ ದಿಂದ ಹೋಗುವ ಸಾಧುಸಂತರ ಪರಿಚಯ ತಮ್ಮ ಸಂಸ್ಥೆಯ ಮುಖೇನ ಮಾಡಿ ಕೊಡುತ್ತಾರೆ.

ಒಂದು ದಿನ ಮತ್ತೂರು ಕೃಷ್ಣಮೂರ್ತಿಯವರಿಂದ ಫೋನಿನಲ್ಲಿ ಕರೆಬಂದಿತು. ಇಸೆಕ್ಸ್‌ನಲ್ಲಿ ಸನಾತನ ಧರ್ಮ ಮಂಡಳಿ ಇದ್ದು, ಅದರ ನೇತಾರರಾದ ಶ್ರೀ ಚಮನ ಲಾಲ್ ಮಾರ್ವಾರವರು ತಮ್ಮ ಸಂಸ್ಥೆಗೆ ನನ್ನನ್ನು ಆಹ್ವಾನಿಸಬಯಸುವರೆಂದು ತಿಳಿಸಿ ದರು. ಜುಲೈ ಮೂರರಂದು ಸನಾತನ ಧರ್ಮ ಮಿಷನ್ ಮತ್ತು ವರ್ಲ್ಡ್ ಸ್ಪಿರಿಚು ಯಲ್ ಸೊಸೈಟಿಯವರು ವಿಶೇಷ ಸಮ್ಮೇಳನ ನಡೆಸಲಿದ್ದು ನನ್ನನ್ನೇ ಮುಖ್ಯ ಅತಿಥಿ ಯನ್ನಾಗಿ ಆಮಂತ್ರಿಸಲು ತಾವು ಸೂಚಿಸಿದ್ದು, ಅಂದಿನ ಸಭಾ ಅಧ್ಯಕ್ಷತೆಯನ್ನು ಜರ್ಮನಿ ಯಲ್ಲಿ ವಾಸಿಸುತ್ತಿರುವ ಸ್ವಾಮಿ ಡಾ॥ ಪೂರ್ಣಾನಂದಗಿರಿ ವಹಿಸಲಿದ್ದಾರೆಂದು, ನಾನು ನಿರಾಕರಿಸಬಾರದೆಂದು ವಿನಂತಿಸಿದರು. ಅಂದೆಯೇ ಶ್ರೀ ಮಾರ್ವಾರಿಂದಲೂ ಫೋನ್ ಬಂದಿತು, ಕಾರ್ಯಕ್ರಮಕ್ಕೆ ಆಮಂತ್ರಣ ನೀಡಿ. ಸಂತೋಷದಿಂದ ಆ ವಿಶೇಷ ಕಾರ್ಯ ಕ್ರಮವನ್ನು ನಾನು ಒಪ್ಪಿಕೊಂಡೆ.

ಸನಾತನ ಧರ್ಮ ಮಿಷನ್‌ನವರು ನನ್ನ ಭಾಷಣ ಕೇಳಲು ತುಂಬಾ ಕಾತುರ ರಾಗಿರುವುದರಿಂದ, ದರ್ಶನ ಪಡೆಯಲು ಉತ್ಕಟಾಪೇಕ್ಷೆಗಳಾಗಿರುವುದರಿಂದ ಜೂನ್ ಹದಿಮೂರರ ಭಾನುವಾರದಂದೇ ಬಂದು, ದರ್ಶನ ನೀಡಿ ವಾರಾಂತ್ಯದ ಸತ್ಸಂಗದಲ್ಲಿ

ಭಾಗವಹಿಸಬೇಕೆಂದು ಆಗ್ರಹ ಪಡಿಸಿದರು. ಇವರ ಶ್ರದ್ಧೆ-ಭಕ್ತಿಗಳನ್ನು ಕಂಡು ಮೂಕ ವಿಸ್ಮಿತಳಾದೆ. ಉತ್ತರ ಭಾರತೀಯರೊಡನೆ ಆತ್ಮೀಯವಾಗಿ ವ್ಯವಹರಿಸುತ್ತಿ ದ್ದುದು ಅದೇ ಮೊದಲು. ಆಮಂತ್ರಣ ಸ್ವೀಕರಿಸಿದಾಗ ಅವರೆಲ್ಲರಿಗೆ ಮೇರೆ ಮೀರಿದ ಖುಷಿ. ಕಾರನ್ನು ತರಲು ತಾವು ಸಿದ್ಧವಿರುವುದಾಗಿಯೂ ಆದರೆ ಅದು ಹೆಚ್ಚಿನ ವಿಳಂಬವಾಗುವುದರಿಂದ ಭೂಗರ್ಭ ರೇಲ್ವೆಯಲ್ಲೇ ಬರಬಹುದೆಂದು ಡೈರೆಕ್ಷನ್ ಕೊಟ್ಟರು. ಹೊಸದಾಗಿ ನಾನು ಲಂಡನ್‌ಗೆ ಬಂದಿರುವುದರಿಂದ ಎಲ್ಲಿ ದಾರಿ ತಪ್ಪು ವೆನೋ ಎಂಬ ಕಳವಳ ಅವರೆಲ್ಲರಿಗೆ. "ನಿಮ್ಮ ಅಡ್ರೆಸ್ ಪೂರ್ಣ ಕೊಡಿ ಮತ್ತು ಚಾಡ್‌ವೆಲ್ ಹೀತ್ ರೇಲ್ವೆ ನಿಲ್ದಾಣಕ್ಕೆ ಕರೆಯಲು ಬಂದು ಬಿಡಿ, ಇನ್ನೇನೂ ಬೇಡ" ಎಂದು ನಾನಂದಾಗ ನನ್ನ ಧೈರ್ಯ ನೋಡಿ ಸ್ವಲ್ಪ ದಿಗ್ಭ್ರಾಂತರಾದರಂತೆ.

ಈಸ್ಟ್ ಫಿಂಚ್ಲೆ ರೇಲ್ವೆ ನಿಲ್ದಾಣ ನನಗೆ ಸನಿಹ. ಸುಮಾರು ಎರಡು ಫರ್ಲಾಂಗ್ ದೂರ. ಅಲ್ಲಿಂದ ಲಿವರ್ ಪೂಲ್ ರೇಲ್ವೆನಿಲ್ದಾಣದವರೆಗೆ ಅಂಡರ್‌ಗ್ರೌಂಡ್ ಟ್ಯೂಬ್ ಮೂಲಕವೇ ಹೋದರೆ ಅಲ್ಲಿಂದ ಬ್ರಿಟಿಷ್ ರೇಲು, ಅಂದರೆ ಭೂಚರ ರೇಲ್ವೆ ಹಿಡಿಯ ಬೇಕು. ಭೂಗತ ವ್ಯವಸ್ಥೆಯು ಲಂಡನ್ ಸಾರಿಗೆ ಸಂಸ್ಥೆಗೆ ಸಂಬಂಧಿಸಿದುದಾದರೆ, ಸರ್‌ಫೇಸ್ ರೇಲ್ವೆಯು ಬ್ರಿಟಿಷ್ ಸಾರಿಗೆ ಸಂಸ್ಥೆಗೆ ಸಂಬಂಧಿಸಿದುದು. ಅತ್ಯಂತ ದೊಡ್ಡ ದಾದ ರೇಲ್ವೆ ನಿಲ್ದಾಣವಾದ ಲಿವರ್ ಪೂಲಿನಿಂದ ದಕ್ಷಿಣ ದಿಕ್ಕಿಗೆ ಸಾಗಿದರೆ ಚಾಡ್‌ವೆಲ್ ಹೀತ್. ಲಂಡನ್ ಹೊರವಲಯಕ್ಕೆ ನಾನು ಹೊರಟಿದ್ದುದು ಇದೇ ಮೊದಲು. ಬೃಹತ್ ಲಂಡನ್ ತನ್ನ ಕಬಂಧ ಬಾಹುಗಳನ್ನು ಚಾಚುತ್ತ ಇಸೆಕ್ಸ್ ತನಕ ಹಬ್ಬಿ ತ್ತಿದೆಯಾದ್ದರಿಂದ ಹೊರಗು ಒಳಗಾಗಿದ್ದಿತೀಗ. ನಿಲ್ದಾಣದಲ್ಲಿ ಇಳಿದು ಸಾರ್ವಜನಿಕ ಟೆಲಿಫೋನ್‌ನಿಂದ ಶ್ರೀ ಮಾರ್ವಾರವರಿಗೆ ಫೋನ್ ಮಾಡುತ್ತಲೇ ಐದು ನಿಮಿಷಗಳಲ್ಲಿ ಅವರು ತಮ್ಮ ಸ್ನೇಹಿತ ಡಾ॥ ಶಿವಕುಮಾರ್‌ರವರೊಡನೆ ಕಾರಿನಲ್ಲಿ ಬಂದು ಇಳಿದರು. ನಿರಾತಂಕವಾಗಿ ಮೂರು ನಾಲ್ಕು ಕಡೆ ಗಾಡಿಗಳನ್ನು ಬದಲಿಸಿ, ದಟ್ಟವಾದ ಕಾಡಿನಲ್ಲಿ ರುವ ಗೊಂದಲಮಯ ಕಾಲುದಾರಿಗಳಂತೆ ಇರುವ ಪ್ಲಾಟ್‌ಫಾರ್ಮ್‌ಗಳನ್ನು ಬದಲಿಸಿ ಯಾವ ತೊಂದರೆ ಇಲ್ಲದೆ ನಾನು ಬಂದಿಳಿದುದನ್ನು ಕಂಡು ಅವರಿಗೆಲ್ಲ ತುಂಬಾ ಅಚ್ಚರಿ. (ನನಗೇನೂ ಇದೊಂದು ಸಾಹಸವೆನಿಸಿರಲಿಲ್ಲ. ಸಹಜ ಮತ್ತು ಸಾಮಾನ್ಯ ವಾಗಿತ್ತು) ಏಕೆಂದರೆ ಅನೇಕರಿಗೆ ಈ ಗೊಂದಲಮಯ ಪ್ರಯಾಣದ ರಹಸ್ಯ ತಿಳಿಯ ಲಿಕ್ಕೇ ಹಲವಾರು ವರುಷ ಬೇಕಂತೆ. ನಾನು 29ದಿವಸಗಳಲ್ಲಿ ನಿರಾತಂಕವಾಗಿ ಅಷ್ಟು ದೂರ ಪಯಣಿಸಿದುದು ಅವರಿಗೆ ಒಂದು ಪವಾಡವೆನಿಸಿತ್ತು. ಇದರ ರಹಸ್ಯ ಬಹಳ ಸುಲಭ. 'ಲಂಡನ್ ಸ್ಟ್ರೀಟ್ ಫೈಂಡರ್' ಎಂಬ ಸಣ್ಣ ಹೊತ್ತಿಗೆ, ಭೂಗರ್ಭ ರೇಲ್ವೆಯ ಪುಟಾಣಿ ಭೂಪಟ, ನಾವು ತಲುಪಬೇಕಾದ ವಿಳಾಸ, ಮತ್ತು ಹುಡುಕುವ ಬುದ್ಧಿ- ಇಷ್ಟಿದ್ದರೆ ಎಲ್ಲಿಗೆ ಬೇಕಾದರೂ ಹೋಗಬಹುದು. ಈ ಜೀವನವಾದರೂ ಅಷ್ಟೇ ಅಲ್ಲವೆ? ಇದರ ರಹಸ್ಯಮಯ ಪಥದಲ್ಲಿ ಮುನ್ನಡೆಯಲು ಶಾಸ್ತ್ರಗಳೆಂಬ "ಸ್ಟ್ರೀಟ್

ಫ್ರೆಂಡರ್ಸ್", ಗುರುಕಾರುಣ್ಯವೆಂಬ ವಾಹನ, ತಲುಪಬೇಕಾದ ಗುರಿ, ಸ್ವತಂತ್ರ ವಿಚಾರ ಪ್ರಜ್ಞೆಯಿಂದ ಕೂಡಿದ ನಿತ್ಯಾನಿತ್ಯ ವಿವೇಕ, ಆತ್ಮಸ್ಥೈರ್ಯಗಳಿದ್ದರೆ ಸಾಕಷ್ಟೆ. ಬಹುಶಃ ಬೆಂಗಳೂರಿನ ವೆಸ್ಟ್ ಆಫ್ ಕಾರ್ಡ್ ರೋಡಿನಲ್ಲಿ ಮನೆ ಹುಡುಕೋದಕ್ಕೆ ಎಷ್ಟು ತಾಸು ಬೇಕಾದೀತೋ,ಲಂಡನ್‌ನಲ್ಲಿ ಆ ಸಮಸ್ಯೆಯೇ ಇಲ್ಲ. ಓಣಿ ಹೆಸರು ಗೊತ್ತಿದ್ದರೆ ಸಾಕು. ಪುಟ ತೆರೆದರೆ ರಸ್ತೆಯ ಭೂಪಟ. ರಸ್ತೆಯ ಮೇಲೆ ಎಷ್ಟನೇ ನಂಬರಿನಿಂದ ಎಷ್ಟರವರೆಗೆ ಮನೆಗಳಿವೆ ಎಂಬುವ ಸಂಖ್ಯೆ. ಅಲ್ಲಿಯ ವೈಶಿಷ್ಟ್ಯವೆಂದರೆ ಸರಿ ಸಂಖ್ಯೆ ಒಂದು ಕಡೆ, ಬೆಸ ಸಂಖ್ಯೆ ಒಂದು ಕಡೆ. ಬಲಬದಿಯ ಮೊದಲ ಮನೆ ೨ ಇದ್ದರೆ, ಅದರ ಪಕ್ಕದ್ದು ನಾಲ್ಕು, ನಂತರ ಆರು. ಎಡಬದಿಗೆ ೧, ೩, ೫, ೭ ಹೀಗೆ ಹೋಗುತ್ತದೆ. ಭೂಪಟದಲ್ಲಿ ಎಲ್ಲವೂ ಅಂಗೈಯಲ್ಲಿಟ್ಟಷ್ಟು ಸ್ಪಷ್ಟ. ಇನ್ನು ಫೋನ್ ಸೌಲಭ್ಯವಂತೂ ಅಸದಳ. ಬಸ್ ನಿಲ್ದಾಣ, ರೇಲ್ವೆ ನಿಲ್ದಾಣ, ರಸ್ತೆಯ ಬದಿಯಲ್ಲಿ, ವೃತ್ತಗಳಲ್ಲಿ ಸಾಕಷ್ಟು ದೂರವಾಣಿಗಳು. ಊರಿಂದ ಊರಿಗೆ ಹೋಗುವಾಗ ನೇರ ಡಯಲಿಂಗ್ ಇರುವ ಸಾಕಷ್ಟು ಫೋನುಗಳು ರಸ್ತೆಯ ಪಕ್ಕದಲ್ಲಿ. ಪ್ರಯಾಣದಲ್ಲಿ ವಿಳಂಬವಾದರೆ ನಿರೀಕ್ಷಿಸುವವರಿಗೆ ಆತಂಕವಾಗದಂತೆ ತಿಳಿಸಲು ಅಚ್ಚುಕಟ್ಟಾದ ವ್ಯವಸ್ಥೆ. ದಾರಿಯಲ್ಲಿ ಕಾರು ಕೆಟ್ಟರೂ ಅಷ್ಟೇ. ತನಗೆ ರಿಪೇರಿ ಮಾಡಲು ಬರದಿದ್ದರೆ ತನ್ನ ಗ್ಯಾರೇಜಿನವನಿಗೆ ಫೋನ್ ಮುಖಾಂತರ ತಿಳಿಸಿ ಯಾವುದಾದರೊಂದು ಬಸ್ಸು – ಕಾರು ಹಿಡಿದು ಹೋಗಿಬಿಟ್ಟರೆ ಆಯಿತು. ಅವನದೇ ಜವಾಬ್ದಾರಿ, ರಿಪೇರಿ ಮಾಡಿ ತಂದು ಮನೆಗೆ ಮುಟ್ಟಿಸುವುದು.

ಅತ್ಯಂತ ಸಹಜ ಮತ್ತು ಸುಲಭವಾಗಿ ನನ್ನನ್ನು ಗುರುತಿಸಿದ ಡಾ|| ಶಿವಕುಮಾರ್ ಧಾವಿಸಿ ಬಂದು ಪಾದ ಮುಟ್ಟಿ ನಮಸ್ಕರಿಸಿ, ಸಾಮಾನುಗಳನ್ನು ಕೈಲಿಂದ ಪಡೆದು ಪ್ರಯಾಣಕ್ಕೆ ತೊಂದರೆಯಾಗಲಿಲ್ಲವೇ ಎಂದು ಯೋಗಕ್ಷೇಮ ವಿಚಾರಿಸಿದರು. ಅವರ ಹೆಸರು, ಬಣ್ಣ, ಭಕ್ತಿ, ನಮಸ್ಕರಿಸಿದ ರೀತಿ ಕಂಡು ಇವರು ಕನ್ನಡ ನಾಡಿನವರಿರಬಹುದೇ ಎಂಬ ಸಂಶಯ ಒದಗಿತು. ಅವರು ಮಧ್ಯ ಪ್ರದೇಶದವರು. ಶ್ರೀ ಮಾರ್ವಾರ್ಃ ಪಂಜಾಬಿನವರು. ಮೊತ್ತ ಮೊದಲ ಬಾರಿಗೆ ಸ್ತ್ರೀ ಸನ್ಯಾಸಿನಿಯನ್ನು ತಮ್ಮ ದೇಶದಲ್ಲಿ ದರ್ಶಿಸಿ ಉಭಯತರು ಸಂಭ್ರಾಂತರಾಗಿದ್ದರು. ಮನೆಯ ಬಳಿ ಸಾಗುತ್ತಲೇ ಕೆಲವಾರು ಸುಮಂಗಳೆಯರು ಬಾಗಿಲಲ್ಲಿ ಆರತಿ ಮಾಡಿ, ನಮಸ್ಕರಿಸಿದರು. ಗುಲಾಬಿಯ ಹೂಮಾಲೆಯನ್ನು ಕೊರಳಿಗೆ ಹಾಕಿ, ಪಾದಕ್ಕೆ ಹೂವಿನ ಪಕಳೆಗಳನ್ನು ಸುರಿದು ಗಂಗಾದೇವಿ ಸ್ವಾಗತಿಸಿದರು. ಸಮುದ್ರ ದಾಟಿ ಬಿಳಿಯರ ದೇಶಕ್ಕೆ ಬಂದು ಹಲವಾರು ವರ್ಷಗಳು ಸಂದಿದ್ದರೂ ಮಾತೃಭೂಮಿಯ ಸಂಸ್ಕೃತಿಯನ್ನು ಈ ಜನ ಮರೆತಿಲ್ಲವಲ್ಲಾ ಎಂದು ಅಚ್ಚರಿಯಾಯಿತು.

ವಿಶೇಷವಾಗಿ ಅಲಂಕರಿಸಿದ ಪೀಠದಲ್ಲಿ ಕುಳ್ಳಿರಿಸಿ, ಗಂಗಾಮಾಯಿ ಬಂದು ಪಾದದ

ಬಳಿ ಕುಳಿತರು. "ಮಗನ ಸಲುವಾಗಿ ಈ ದೇಶಕ್ಕೆ ಬಂದುದಾಯಿತು. ಸತ್ಸಂಗವಿಲ್ಲ, ಗುರುದರ್ಶನವಿಲ್ಲ, ಆ ಕೊರತೆ ಇಂದು ತುಂಬಿತು." ಮಾತಿಗೆ ಮೀರಿದ ಆನಂದ ಆಕೆಯ ಶಬ್ದಗಳಲ್ಲಿ ಸೂಸುತ್ತಿತ್ತು. ಸನಾತನ ಧರ್ಮ ಮಿಷನ್ ಕಾರ್ಯಾಲಯ ಮಾರ್ವಾರ ಮನೆಯ ಅರ್ಧ ಭಾಗವನ್ನೇ ಆಕ್ರಮಿಸಿತ್ತು. ಮಧ್ಯ ಪ್ರದೇಶದ ಡಾ|| ಶಿವಕುಮಾರ್ ಮತ್ತು ಅವರ ಹೆಂಡತಿ ಡಾ|| ಮನೋರಮಾ, ರಾಜಾಸ್ಥಾನದ ಡಾ|| ಪಂಚಾರ್ಯ ಮತ್ತು ಅವರ ತಾಯಿ ಗಂಗಾಮಾಯಿ, ಉಗಾಂಡದಿಂದ ವಲಸೆ ಬಂದ ಗುಜರಾತಿ ಜನಾಂಗದ ಕೌಸಲ್ಯ, ಪಂಜಾಬಿನ ಚಮನ್‌ಲಾಲ್ ಮಾರ್ವಾ, ಇನ್ನೂ ಮುಂತಾದವರಿಂದ ಪುಟ್ಟದೊಂದು ಭಾರತವೇ ಅಲ್ಲಿ ನೆರೆದಂತಿತ್ತು. ಒಬ್ಬೊಬ್ಬರ ಭಾಷೆ ಒಂದೊಂದು, ಎಲ್ಲರನ್ನೂ ಸಂಪರ್ಕಿಸುವ ಭಾಷೆ ಇಂಗ್ಲಿಷ್ ಮತ್ತು ಹರುಕು ಮುರುಕು ಹಿಂದಿ; ಅದೆಲ್ಲಕ್ಕಿಂತ ಮಿಗಿಲಾಗಿ ಅವರನ್ನು ಬಂಧಿಸಿದ್ದು ಧರ್ಮಾಭಿಮಾನ; ತಮ್ಮ ಧರ್ಮದ ಸಂಸ್ಕೃತಿಯನ್ನು ಕಳೆದುಕೊಳ್ಳಬಾರದೆಂಬ ಅದಮ್ಯ ಆಕಾಂಕ್ಷೆ.

ಇಂಗ್ಲೆಂಡಿಗೆ ಬಂದ ಮೇಲೆ ಮೊಟ್ಟ ಮೊದಲ ಬಾರಿಗೆ ಆತ್ಮೀಯ ಪರಿಸರದ ಅನುಭವವಾಯಿತು. "ಪರವಾಗಿಲ್ಲ; ಕಷ್ಟ ಸುಖಕ್ಕೆ ಆಗಬಲ್ಲ ನನ್ನವರು ಎಂಬುವ ಜನ ಅಂತೂ ದೊರೆತರು" ಎಂಬ ಸಮಾಧಾನ ಉಕ್ಕಿತು. "ಯಾರ್‍ಯಾರು ನಮಗೆ ಸಹಾಯ ಮಾಡಬಹುದು" ಎಂದು ಕ್ಯಾಲಿಕ್ಯುಲೇಶನ್ ಹಾಕಿ ಇಲ್ಲಿಂದ ಹೊರಟಿದ್ದೆನೋ ಅದೆಲ್ಲ ತಲೆ ಕೆಳಗಾಗಿ ಎಂದೂ ಕಾಣದವರು, ನಮ್ಮ ಸಾಹಿತ್ಯ ಓದಿ ಪ್ರಭಾವಿತರಾದವರು, ಧರ್ಮಶ್ರದ್ಧೆಯುಳ್ಳವರು ಸಹಾಯ–ಸಹಕಾರ ನೀಡಲು ಮುಂದೆ ಬಂದರು. "ಮಾತಾಜಿ, ನಿಮ್ಮ ದರ್ಶನ ಭಾಗ್ಯವೇ ನಮಗೆ ಮಹಾಪುಣ್ಯದ ಪ್ರತಿಫಲ. ಏನೇ ತೊಂದರೆ ಇದ್ದರೂ ತಿಳಿಸಬಹುದು. ಅವಸರಕ್ಕೆ ಹಣ ಬೇಕಾದರೆ, ಯಾರೂ ಪರಿಚಿತರಿಲ್ಲದೆ ಬೇಸರವಾದರೆ, ವಸತಿಗೇನಾದರೂ ಅನಾನುಕೂಲವಿದ್ದರೆ ನಿಸ್ಸಂಕೋಚವಾಗಿ ಬಂದು ಬಿಡಿ. ವಾರಾಂತ್ಯವನ್ನು ನಿಮ್ಮ ಸೇವೆಗಾಗಿ ಮೀಸಲಿಡುತ್ತೇವೆ" ಎಂದು ಡಾ|| ಶಿವಕುಮಾರ್ ಮತ್ತು ಗಂಗಾಮಾಯಿ ಹೇಳಿದಾಗ ನನಗೆ ತುಂಬಾ ಸಂತೋಷವೆನಿಸಿತ್ತು. ಧಾರ್ಮಿಕ ಸಂಸ್ಕಾರಹೊಂದಿದ ಹೃದಯ ಎಷ್ಟೊಂದು ಮಾನವೀಯತೆ–ದಯೆ–ಭಕ್ತಿಗಳ ಪ್ರಯಾಗವಾಗಿರುತ್ತದೆ ಎನ್ನಿಸದಿರಲಿಲ್ಲ. "ಭಕ್ತಿಗೆಯೂ ಬೇಟಕ್ಕೆಯೂ ಜಾತಿಸೂತಕವುಂಟೆ?" ಎಂಬ ಅಕ್ಕಮಹಾದೇವಿಯ ವಾಣಿ ಎಷ್ಟು ಅರ್ಥಗರ್ಭಿತ ಎನಿಸಿತು, ಪ್ರೇಮಿಸಲು ಅಥವಾ ಸ್ನೇಹ ಮಾಡಲು ಹೇಗೆ ಜಾತಿಯು ಅಡ್ಡ ಬರದೋ ಹಾಗೆಯೇ ಭಕ್ತಿ ಮಾಡಲು ಸಹ ಭಾಷೆ, ಜಾತಿ, ದೇಶಗಳ ಅಡ್ಡ ಬರಲಾರವಷ್ಟೇ! ಆ ಭಾನುವಾರ ಹರ್ಷದಾಯಕವಾಗಿ ಕಳೆಯಿತು. ಸಂಜೆ ಸತ್ಸಂಗ, ಪ್ರಾರ್ಥನೆ ಮತ್ತ ಪ್ರವಚನ. ಇಂಗ್ಲಿಷಿನಲ್ಲೇ ಪ್ರವಚನವಾದರೂ 'ಹರನಾಮ ಸುಮರ' ಎಂಬ ಹಿಂದೀ ಗೀತೆಯನ್ನು, ಬಸವಣ್ಣನವರ ವಚನದ ಹಿಂದೀ ಅನುವಾದಗಳನ್ನು, 'ಚಿದಾನಂದ ರೂಪಃ ಶಿವೋಹಂ' ಎಂಬ ಶ್ರೀ ಶಂಕರಾಚಾರ್ಯರ ಸಂಸ್ಕೃತ ಗೀತೆಯನ್ನು ಹಾಡಿದಾಗ ಆನಂದ ರಸವಾರಿಧಿ

ಯಲ್ಲಿ ಸನಾತನ ಧರ್ಮ ಮಿಷನ್ ಬಳಗದವರು ತೇಲಾಡಿದರು. ಡಾ|| ಶಿವಕುಮಾರ್ ನನ್ನನ್ನು ಕಾಣುತ್ತಲೇ ಮುಂದಿಡುತ್ತಿದ್ದ ಅಪೇಕ್ಷೆ, "ಮಾತಾಜಿ, ಚಿದಾನಂದ ರೂಪಃ ಶಿವೋಹಂ ಹಾಡಿರಿ. ಅದನ್ನು ಕೇಳುತ್ತಾ ಹೋದಂತೆ ನನ್ನನ್ನು ಮರೆತಂತಾಗುತ್ತದೆ, ದೇಹ ಇಂದ್ರಿಯ ಮನಗಳ ಬಂಧನ ದಾಟಿ ಮೇಲೆ ಮೇಲೆ ಏರಿದಂತಾಗುತ್ತದೆ.'' ಸಂಜೆ ಕಾರಿನಲ್ಲಿ ಕರೆತಂದು ಇಲ್‌ಫರ್ಡ್ ತನಕ ಬಿಟ್ಟರು ಅಲ್ಲಿಂದ ಫಿಂಚ್ಲೆಗೆ ಮರಳಿದೆ.

ಮರುದಿನ ಹತ್ತು ಗಂಟೆಗೆ ಫೋನ್ ಬಂದಿತು, ಬಿ. ಬಿ. ಸಿ. ವರ್ಲ್ಡ್ ಸರ್ವಿಸಿನವರಿಂದ. ''ತಾವು ನಮ್ಮ ದೇಶಕ್ಕೆ ಬಂದುದು ತುಂಬಾ ಸಂತೋಷ.ಅದಕ್ಕಾಗಿ ಹೃತ್ಪೂರ್ವಕ ಸ್ವಾಗತ ಬಯಸುತ್ತೇವೆ'' ಹೀಗೆ ಶುಭಾಶಯ ಕೋರಿ ಸಂದರ್ಶನವನ್ನು ನೀಡಬೇಕೆಂದು ವಿನಂತಿಸಿದರು. ಜೂನ್ ೨೧ ರಂದು ಸೋಮವಾರ ಬೆಳಿಗ್ಗೆ ೧೧–೩೦ ಗಂಟೆಗೆ ಧ್ವನಿ ಮುದ್ರಣಕ್ಕೆ ಕೇಳಿದರು. ವೇಳೆಗೆ ಸರಿಯಾಗಿ ಪೋರ್ಟ್ ಲ್ಯಾಂಡ್ ಪ್ಲೇಸಿನಲ್ಲಿರುವ ಬಿ. ಬಿ. ಸಿ. ಆಕಾಶವಾಣಿ ಎದುರು ಹಾಜರಾಗುತ್ತಲೇ ನನಗಾಗಿ ಕಾಯುತ್ತಲಿದ್ದ ಓರ್ವ ಸ್ವಾಗತಿಸಿ, ಧಾರ್ಮಿಕ ವಿಭಾಗಕ್ಕೆ ಕರೆದೊಯ್ದನು. ಆ ವಿಭಾಗದ ಮುಖ್ಯಸ್ಥ ಕಾಲಿನ್ ಸೆಂಪರ್‌ರವರು ಹಾರ್ದಿಕ ಸ್ವಾಗತವನ್ನು ಬಯಸಿದರು. ಹಸ್ತಲಾಘವಕ್ಕಾಗಿ ಕೈಚಾಚಿದರು. ನಾನು ಮುಗುಳ್ನಕ್ಕು, ಕೈಜೊಡಿಸಿ, 'ಇದು ನಮ್ಮ ಸಾಂಸ್ಕೃತಿಕ ಪದ್ಧತಿ ಎಂದೆ. ಅವರು ಅದನ್ನೇ ಅನುಸರಿಸಿದರು. ನನ್ನ ವೇಷಭೂಷಣ, ವಯಸ್ಸಿನ ಕಿರಿತನ ಅವರನ್ನು ಆಶ್ಚರ್ಯದ ಸರಸಿಯಲ್ಲಿ ಇಳಿಸಿದವು. ''ಮಾರ್ವೆಲಸ್, ಈ ವಯಸ್ಸಿನಲ್ಲಿ ನೀವೊಬ್ಬರೇ ವಿದೇಶಕ್ಕೆ ಬಂದಿರಾ? ಎಂತಹ ಧೈರ್ಯ!'ಉದ್ಗರಿಸಿದರು"Religion and Science", "Religion in present day India" "Contribution of Basavanna to modern world." ಎಂಬ ಈ ಮೂರು ವಿಷಯಗಳ ಬಗ್ಗೆ ಸಂವಾದ ನಡೆಯಿತು. ವಿಚಾರಗಳ ಸ್ಪಷ್ಟತೆ, ದೃಷ್ಟಾಂತಗಳ ಮುಖೇನ ನಾನು ತತ್ತ್ವವನ್ನು ಮಂಡಿಸಿದುದು ಅವರ ಮನಸ್ಸನ್ನು ಬಹಳಸೆರೆ ಹಿಡಿಯಿತು. ''ವಿಜ್ಞಾನವು ಮಾನವನ ಭೌತಿಕ ಮುಖವನ್ನು ತೃಪ್ತಿಪಡಿಸುವುದು. ದೈಹಿಕ ಮೂಲಭೂತ ಅವಶ್ಯಕತೆಗಳನ್ನು ತೃಪ್ತಿ ಪಡಿಸುವುದೇ ವಿನಾ ಆತ್ಮದ ಮೂಲಭೂತ ಹಸಿವನ್ನಲ್ಲ. ನಿಮ್ಮಲ್ಲಿ ವಿಜ್ಞಾನದ ದೈತ್ಯಬಲ ಸಾಕಷ್ಟು ಉಪಯೋಗವಾಗಿದೆ. ಆದರೇನೋ ಜೀವನ ಯಾಂತ್ರಿಕ ಮತ್ತು ಕೃತಕ ಎನ್ನಿಸುತ್ತಿದೆ. ಜೇನುತುಪ್ಪದೊಳಗೆ ಒಂದು ದುಂಬಿಯನ್ನು ಹಾಕಿದರೆ, ಅದು ಮಕರಂದವನ್ನು ಪಾನ ಮಾಡಿಯೇ ಬದುಕುವ ಜೀವಿಯಾಗಿದ್ದರೂ ಸಹ ಉಸಿರುಕಟ್ಟಿ ವಿಲಿವಿಲಿ ಒದ್ದಾಡುವಂತೆ, ಈ ಸಮಸ್ತ ವೈಭವ–ಸುಖಗಳ ಮಧ್ಯೆ ಇದ್ದರೂ ಜನರು ಉಸಿರು ಕಟ್ಟಿಕೊಂಡು ಚಟಪಟಿಸುವವರಂತೆ ಕಾಣುತ್ತಾರೆ. ಇದಕ್ಕೆ ಕಾರಣ ಕೆಲವು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಅರಿವು ಇಲ್ಲದಿರುವುದು.''

ಕಾಲಿನ್ಸ್ ಸೆಂಪರ್ ಕೇಳಿದ ಇನ್ನೊಂದು ಪ್ರಶ್ನೆಯೆಂದರೆ, ''ಧರ್ಮವು ಮಾನವ ಸಮಾಜವನ್ನುಗುಂಪುಗಳಾಗಿ ಒಡೆದಿದೆ. ಧರ್ಮವು ಹೀಗೆ ಸಮಾಜವನ್ನು ವಿಂಗಡಿಸುವುದರಿಂದಲೇ ಅದರ ಬಗ್ಗೆ ಜನಕ್ಕೆ ಜಿಗುಪ್ಸೆ''. ಸಮಾಜವನ್ನು ಒಡೆಯುವ ಆಕಾಂಕ್ಷೆ ಇರುವುದು ಧರ್ಮಕ್ಕಲ್ಲ,ಮಾನವನ ಸ್ವಾರ್ಥಕ್ಕೆ ದೇಶದ ಹೆಸರಲ್ಲೋ ಭಾಷೆಯ ಹೆಸರಲ್ಲೋ, ಜನಾಂಗದ ಹೆಸರಿನಲ್ಲೋ, ರಾಜಕೀಯ ಸಿದ್ಧಾಂತಗಳ ನೆಪದಲ್ಲೋ ಹೋರಾಡುವುದು ಮನುಷ್ಯನಲ್ಲಿ ಹುದುಗಿರುವ ಸ್ವಭಾವಗಳಲ್ಲೊಂದು. ಈ ದೌರ್ಬಲ್ಯ ತೃಪ್ತಿಗಾಗಿ ಧರ್ಮವನ್ನೂ ಅವನು ಸಾಧನವಾಗಿ ಮಾಡಿಕೊಳ್ಳಬಹುದು. ಒಂದು ಚಾಕುವನ್ನು ಉಪಯೋಗಿಸಿ ನಾವು ಹಣ್ಣೊಂದನ್ನು ಕೊಯ್ದು, ಅದನ್ನು ಹಂಚಲು ಬರುತ್ತದೆ. ಅಥವಾ ಅದರ ಸಹಾಯದಿಂದ ಇರಿಯಲೂ ಬರುತ್ತದೆ. ಚಾಕು ಬಳಸಿ ಯಾವನಾದರೋರ್ವನು ಹಣ್ಣನ್ನು ಕೊಯ್ಯುವ ಬದಲು ಹೆರರ ಕುತ್ತಿಗೆ ಕೊಯ್ದರೆ ಅದು ಚಾಕುವಿನ ತಪ್ಪಲ್ಲ, ಚಾಕು ಮಾಡಿದವನ ತಪ್ಪೂ ಅಲ್ಲ, ಕೆಡುಕಿಗೆ ಬಳಸಿದ ವಿಕೃತ ಬುದ್ಧಿಯ ತಪ್ಪು. ಹಾಗೆಯೇ ಧರ್ಮವೂ ಸಹ. ಸಮಾಜವನ್ನು ಒಂದುಗೂಡಿಸಲು ಸಾಧಕವಾಗಬೇಕಾದುದು ಒಡೆದರೆ ಅದು ಸ್ವಾರ್ಥ ಮಾನವನ ಕುಬುದ್ಧಿಯ ಕೈವಾಡ. ಆದ್ದರಿಂದ ಧರ್ಮವೇ ಬೇಡವೆಂಬುದು ಸರಿಯಲ್ಲ; ಮಾನವನ ದೃಷ್ಟಿಕೋನ–ವಿಚಾರಗಳಿಗೆ ಸರಿಯಾದ ತಿರುವು ಕೊಡಬೇಕು.

ಭಾರತದಲ್ಲಿ ಧರ್ಮದ ಬಗ್ಗೆ ಯುವಜನರ ಒಲವಿನ ಬಗ್ಗೆ ನಂತರ ಚರ್ಚೆಯಾಯಿತು. "ಒಂದು ಬಗೆಯ ಜನಾಂಗ ಕಂದರ (Generation gap) ನಿರ್ಮಾಣವಾಗುತ್ತಿದ್ದು ಹಿರಿಯರಲ್ಲಿ ಹಳತನ್ನು ಬಿಗಿಯಾಗಿ ಕಪಿಮುಷ್ಟಿಯಿಂದ ಹಿಡಿದು, ಹೊಸತನ್ನು ತಿರಸ್ಕರಿಸುವ ಸಾಂಪ್ರದಾಯಿಕ ಮನೋಭಾವ, ಕಿರಿಯರಲ್ಲಿ ಹಳತನ್ನು ವಿಡಂಬಿಸಿ ಬದಿಗೊತ್ತಿ, ಹೊಸತಿನ ಹಂದರ ಕಟ್ಟುವ ಆತುರದ ನಿರ್ಧಾರ ಕಂಡು ಬರುತ್ತಿದೆ. ಈರ್ವರಲ್ಲೂ ಬದಲಾವಣೆಗಳಾಗಿ ಹಳೆಯ ಮೌಲ್ಯಗಳಲ್ಲಿರುವ ವೈಚಾರಿಕ ಗಟ್ಟಿಕಾಳುಗಳನ್ನು ಆರಿಸಿ, ಮೂಢ ನಂಬಿಕೆಯ ಜೊಳ್ಳು ಕಾಳನ್ನು ಬಿಡುವ ಬೌದ್ಧಿಕ ಪ್ರಾಮಾಣಿಕತೆ ಕಿರಿಯರಲ್ಲಿ, ತಾವು ನಂಬಿದುದನ್ನೇ ಸತ್ಯವೆಂದು ಸಾಧಿಸದೆ ಸತ್ಯವನ್ನು ನಂಬಲು ಕಲಿಯುವ ವೈಚಾರಿಕ ಪ್ರಜ್ಞೆ ಹಿರಿಯರಲ್ಲಿ ಮೂಡಬೇಕಾಗಿದೆ" ಎಂದು ನಾನು ಹೇಳಿದೆ.

ಮೂರನೆಯದಾಗಿ,'ಬಸವಣ್ಣನವರ ಕೊಡುಗೆ-ಭಾರತೀಯ ಧರ್ಮ ಪ್ರಪಂಚಕ್ಕೆ' ಎಂಬ ಬಗ್ಗೆ ಚರ್ಚೆ ನಡೆಯಿತು. ನಮ್ಮ ನಾಡಿನಲ್ಲೂ ಸ್ತ್ರೀಯರ ಗುರುತ್ವಕ್ಕಾಗಿ ಹೋರಾಟ ಎಷ್ಟೋ ವರ್ಷಗಳಿಂದ ನಡೆದಿದೆ. ಆದರೆ ಪಟ್ಟಭದ್ರರಾಗಿರುವ ಪೀಠಾಧಿಪತಿಗಳಿಂದ, ಧರ್ಮಾಧಿಕಾರಿಗಳಿಂದ ಸ್ತ್ರೀಯರ ಕನಸು ನನಸಾಗಿಲ್ಲ. ನೀವು ಒಂದು ಹೆಜ್ಜೆ ಮುಂದೆ ಹೋಗಿರುವುದು ಜಗತ್ತಿನ ಸ್ತ್ರೀ ಕುಲಕ್ಕೆ ಹೆಮ್ಮೆಯ ವಿಷಯ" ಎಂದು ಸೆಂಪರ್‌ರವರು ನುಡಿದರು. ''ನಿಜ, ಇಲ್ಲಿ ಬೇಡಿ ದಾನ ಪಡೆಯಬೇಕಾಗಿಲ್ಲ, ಸ್ತ್ರೀಯರು

ಅರ್ಹತೆಗಳಿಸಿಕೊಂಡು, ಆ ಸ್ಥಾನ ಪಡೆದುಕೊಂಡು ಮುಂದಾಗಬೇಕು. ನಮಗೆ ಬಸವಣ್ಣನವರ ತತ್ತ್ವದ ಬೆನ್ನಬಲವಿತ್ತೆಂದೇ ದಾರಿ ಸುಲಭವಾಯಿತು". ನಾನು ಮಾರ್ನುಡಿದೆ.

ಬಸವಣ್ಣನವರ ವಿಚಾರಧಾರೆಯ ಬಗ್ಗೆ ಸೂಕ್ಷ್ಮ ಪರಿಚಯ ಮಾಡಿಕೊಟ್ಟಾಗ ಅವರು ಬಹಳ ಮೆಚ್ಚಿಕೊಂಡು, ಪ್ರಸ್ತುತ ಭಾರತದ ಸಮಸ್ಯೆಯ ಬಗ್ಗೆ ಒಂದೇ ಅಲ್ಲ, ವಿಶ್ವದ ಅನೇಕ ಸಮಸ್ಯೆಗಳಿಗೆ ಬಸವಣ್ಣನವರ ತತ್ತ್ವಶಾಸ್ತ್ರವು ಪರಿಹಾರ ನೀಡಬಲ್ಲುದು" ಎಂದು ಉದ್ಗರಿಸಿದರು.

ಸುಮಾರು ಮುಕ್ಕಾಲು ಗಂಟೆ ಕಾಲ ನಡೆದ ಈ ಸಂವಾದವನ್ನು ಮೂರುಭಾಗ ಮಾಡಿ ಹದಿನೈದು ನಿಮಿಷಗಳಿಗೊಂದು ವಿಷಯವಾಗಿ ಧ್ವನಿಮುದ್ರಣ ಮಾಡಿಕೊಂಡರು. ಧ್ವನಿಮುದ್ರಣವನ್ನು ಮುಗಿಸಿಕೊಂಡು ಹೊರಟಾಗ ಮಿ॥ ಕಾಲಿನ್ಸರು ದಾರಿ ತೋರಲು ಹಿಂಬಾಲಿಸಿದರು. ಬೃಹತ್ತಾದ ಭವನ, ಅಸಂಖ್ಯಾತ ಕೋಣೆಗಳು, ಸ್ವಯಂಚಾಲಿತ ಬಾಗಿಲುಗಳು, ದಾರಿಯೇ ತಿಳಿಯದಷ್ಟು ದಿಗ್ಭ್ರಾಂತಿ.

"ಮಾನವ ನಿರ್ಮಿತ ಕಾಡಿನಂತಿದೆಯಲ್ಲವೇ ಈ ಮಂದಿರ?" ಎಂದು ನಾನಂದಾಗ "ಒಳ್ಳೆಯ ಉಪಮೆ" ಎಂದು ನಕ್ಕರು. ಅತ್ಯಂತ ಸೌಜನ್ಯಶೀಲರಾದ ಅವರು ಲಿಫ್ಟಿನೆಡೆಗೆ ಕರೆತಂದು ಪೂರ್ತಿ ಹೊರಬಾಗಿಲವರೆಗೆ ಬಿಟ್ಟು, ಭಾರತೀಯ ಪದ್ಧತಿಯಂತೆ ಕೈ ಜೋಡಿಸಿ ವಂದಿಸಿ ಬೀಳ್ಕೊಟ್ಟರು. ನಾನು ಬ್ರಿಟಿಷ್ ಮ್ಯೂಸಿಯಮ್‌ನ ಕಡೆ ಹೋಗಲು ಭೂಗರ್ಭ ರೈಲ್ವೆ ನಿಲ್ದಾಣಕ್ಕೆ ನಡೆದೆ. ಬಿ. ಬಿ. ಸಿ. ವರ್ಲ್ಡ್ ಸರ್ವಿಸಿನವರು ಧ್ವನಿ ಮುದ್ರಣಗಳನ್ನು ಆಸಕ್ತಿಯಿಂದ ಪ್ರಸಾರ ಮಾಡಿದರು. (ಸಶೇಷ)

ಕಲ್ಯಾಣ ಕಿರಣ

ಅಂಧ ಭಕ್ತಿಯ ಧರ್ಮಮೌಢ್ಯವನು ಕಳೆದೊಗೆದು
ಸಾಂದ್ರ ಕಂದಾಚಾರ ಸಾಂಪ್ರದಾಯಕ ರೂಢಿ-
ಯಿಂದ ನರಳುತ್ತಿರುವ ಮನುಜಕುಲವನೆಚ್ಚರಿಸೆ
ಬಂದ "ಕಲ್ಯಾಣ ಕಿರಣ"ವೊ ಮುಗ್ಧ ಸಂಗ

—ಮಾ. ನಂ. ನಂ.

ಕಲ್ಯಾಣ ಕಿರಣ ಮಾಸಪತ್ರಿಕೆಗೆ ಚಂದಾದಾರರಾಗಿರಿ
ವಾರ್ಷಿಕ ಚಂದಾ ಹನ್ನೆರಡು ರೂಪಾಯಿ.

ಹರಿಹರ ಕಂಡಂತೆ ಬಸವಣ್ಣ-ಅಕ್ಕಮಹಾದೇವಿ

ಭಾಗ-೧ **ಜಗದ್ಗುರು ಮಾತೆಮಹಾದೇವಿ.**

ಹನ್ನೆರಡನೆಯ ಶತಮಾನವು ವಿಶೇಷವಾದೊಂದು ಕ್ರಾಂತಿಯನ್ನು ಕಾಣಿಕೆಯಾಗಿ ಜಗತ್ತಿಗೆ ನೀಡಿತು ; ಅದು ನಡೆದುದು ಕನ್ನಡ ನಾಡಿನ ಕ್ಷೇತ್ರದಲ್ಲಿ. ಅದನ್ನು ಕೇವಲ ಭಕ್ತಿ ಪಂಥದ ಒಂದು ಚಟುವಟಿಕೆ ಎಂದಾಗಲೀ, ಅನುಭಾವ ಪ್ರಧಾನ ಧಾರ್ಮಿಕ ಚಳುವಳಿಯೆಂದಾಗಲೀ ಕರೆಯ ಹೋದರೆ ಅದು ನಮ್ಮ ಅಜ್ಞಾನ ಪ್ರದರ್ಶನವಲ್ಲದೆ ಮತ್ತೇನಲ್ಲ. ಏಕೆಂದರೆ ಅಂದಿನ ಕ್ರಾಂತಿಯು ಗುರಿಯಾಗಿರಿಸಿಕೊಂಡುದು ಕೇವಲ ಒಂದು ಬಗೆಯ ಧಾರ್ಮಿಕ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ಸಮಾಜದ ಸರ್ವಾಂಗೀಣ ಉತ್ಥಾನವನ್ನು, ಪ್ರಗತಿಪರ ಸಮಾಜ ರಚನೆಯನ್ನು, ಸಮತಾವಾದೀ ಕಲ್ಯಾಣ ರಾಜ್ಯವನ್ನು! ಅನೇಕ ಸಾಧುಸಂತರು ವೈಯಕ್ತಿಕ ನೀತಿವಂತಿಕೆಯಿಂದ ಬಾಳಿ, ಜಾತ್ಯತೀತ ಮನೋಭಾವವನ್ನು ಹೊಂದಿ, ದೀನದಲಿತರ ಬಗ್ಗೆ ಅನುಕಂಪ ತಾಳಿ, ಬಡವರ ಬಗ್ಗೆ ಮರುಕವನ್ನು ತೋರಿ ತಮ್ಮ ಸಾಹಿತ್ಯ-ಜೀವನಗಳಲ್ಲಿ ಅದನ್ನು ವ್ಯಕ್ತಪಡಿಸಿದ್ದಾರೆ. ಆದರೆ ಹನ್ನೆರಡನೆಯ ಶತಮಾನದಲ್ಲಿ ನಡೆದುದು ಒಂದು ಬಗೆಯ ಸಾಮಾಜಿಕ ಆಂದೋಳನ. ನೆಲೆಗೊಂಡಿದ್ದ ಶುಷ್ಕ ಸಂಪ್ರದಾಯಗಳ ವಿರುದ್ಧ ಬಂಡಾಯ. ಇದು ಕೇವಲ ಒಬ್ಬ ವ್ಯಕ್ತಿಯು ಇನ್ನೊಬ್ಬ ಸಾಮಾಜಿಕ ಶೋಷಿತನಾದ ಅಸ್ಪೃಶ್ಯನ ಬಗ್ಗೆ ತೋರುವ ಅನುಕಂಪವಲ್ಲ. ಅಥವಾ ಸಿರಿವಂತನೋರ್ವ ಬಡವನ ಬಗ್ಗೆ ವ್ಯಕ್ತಿಗತವಾಗಿ ತೋರುವ ಔದಾರ್ಯವಲ್ಲ, ಅಸ್ಪೃಶ್ಯತೆ, ಬಡತನ, ವೇಶ್ಯಾವೃತ್ತಿ ಇತ್ಯಾದಿ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟಕ್ಕೆ ನಿಂತ ತತ್ವನಿಷ್ಠ ಸಾಮೂಹಿಕ ಚಳುವಳಿ.

ಇಂಥ ಒಂದು ಕ್ರಾಂತಿಯು ಜನಜೀವನದ ಮೇಲೆ ಅತುಳ ಪರಿಣಾಮ ಬೀರಿತು. ಅಪಾರ ಪರಿವರ್ತನೆ ತಂದಿತು ; ಮಾತ್ರವಲ್ಲ, ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯವೆಂಬೊಂದು ವೈಚಾರಿಕ ಸಾಹಿತ್ಯವಾಹಿನಿಗೆ ಜನ್ಮನೀಡಿತು. ಮುಂಬರುವ ಪೀಳಿಗೆಯ ಮೇಲೆ ಅಚ್ಚಳಿಯದ ಪ್ರಭಾವವನ್ನು ಕವುಚಿತಲ್ಲದೆ, ಕವಿಗಳಿಗೆ ಸ್ಫೂರ್ತಿದಾಯಕ ಸಂಜೀವಿನಿಯಾಯಿತು. ವಚನ ಸಾಹಿತ್ಯ ಮತ್ತು ಅದರ ನಿರ್ಮಾಪಕರಾದ ಬಸವಣ್ಣನವರು, ವಚನ ಕರ್ತೃಗಳಾದ ಅಸಂಖ್ಯಾತ ಶರಣರು ಇವುಗಳನ್ನು ಕೇಂದ್ರ ಬಿಂದುವಾಗಿಸಿಕೊಂಡು ಮೈದಾಳಿದ ಸಾಹಿತ್ಯವು ಸೂತ್ರ-ಗಾತ್ರ, ಸತ್ವ ಮೊತ್ತಗಳೆರಡರಲ್ಲಿಯೂ ಎದ್ದು ಕಾಣುವಂತಿದೆ. ಜಗತ್ತಿನ ಎಲ್ಲ ದೇಶಗಳು ಅಂತರ ರಾಷ್ಟ್ರೀಯ ಸಾಹಿತ್ಯ ಪ್ರದರ್ಶನವನ್ನೇನಾದರೂ ಏರ್ಪಡಿಸಿದರೆ, ಭಾರತದ ಮಳಿಗೆಯು ಜನರ ಮನಸೆಳೆಯುವ,

ಅವರನ್ನು ವಿಚಾರ ಮಾಡ ಹಚ್ಚುವಂಥ ವೈಶಿಷ್ಟ್ಯಪೂರ್ಣವಾದ ಸಾಹಿತ್ಯವನ್ನು ಕೊಡಬೇಕೆಂದು ಸಂಕಲ್ಪಿಸಿದರೆ, ಆಗ ಅದಕ್ಕೆ ಉಳಿಯುವ ಒಂದೇ ಒಂದು ಸಾಹಿತ್ಯವೆಂದರೆ ಕನ್ನಡದಲ್ಲಿನ ವಚನಸಾಹಿತ್ಯ.

ಆದರೇನು, ವಚನ ಸಾಹಿತ್ಯದ ಆಳಗಲವನ್ನು, ಅದರ ಉಗಮದ ಮೂಲ ಉದ್ದೇಶವನ್ನು, ಹುಟ್ಟಿ ಅದು ಸಾಧಿಸಿದ ಕ್ರಾಂತಿಕಾರಕ ಪರಿಣಾಮವನ್ನು, ಅರಿತುಕೊಂಡವರ ಸಂಖ್ಯೆ ಅತ್ಯಲ್ಪವೆಂದರೆ ಅದು ಕನ್ನಡಿಗರ ಮತ್ತು ಭಾರತೀಯರ ದುರ್ದೈವವೆಂಬುದೊಂದೇ ನಾವು ತೆಗೆಯಲು ಉಳಿದಿರುವ ಉದ್ಗಾರ. ವಚನ ಸಾಹಿತ್ಯ ವಾಹಿನಿಯು ಉಗಮಗೊಂಡ ನಂತರದ ಎಂಟು ಶತಮಾನಗಳಲ್ಲಿ ಅದನ್ನು ಅರಿತುಕೊಳ್ಳುವ ಪ್ರಯತ್ನವನ್ನು ಹಲವರು ಅಲ್ಲಲ್ಲೇ ಮಾಡಿಲ್ಲದಿಲ್ಲ. ಅನೇಕ ಧರ್ಮಾನುಯಾಯಿಗಳು, ತತ್ವಾನುಯಾಯಿಗಳು, ಕವಿಪುಂಗವರು, ಪುರಾಣಕಾರರು ಮುಂತಾದವರು ಬಸವಣ್ಣನ ತತ್ವವನ್ನು ಅವನ ಕ್ರಾಂತಿಕಾರಕ ಜೀವನವನ್ನು ಅರಿಯಲು, ಚಿತ್ರಿಸಲು ಯತ್ನಿಸಿದ್ದಾರೆ. ಕೆಲವು ಕಡೆ ಯಶಸ್ವಿಯಾಗಿದ್ದರೂ ಅನೇಕ ಕಡೆ ಸೋತಿದ್ದಾರೆ. ಇಂತಹವರಲ್ಲಿ ಹರಿಹರ ಮಹಾಕವಿಯೂ ಒಬ್ಬನು.

ಬಸವಣ್ಣನ ಬಹುಮುಖ ವ್ಯಕ್ತಿತ್ವ

ಕನ್ನಡ ಸಾಹಿತ್ಯ ಸರಸ್ವತಿಯ ಚೆಲುವನ್ನು ಹೆಚ್ಚಿಸಿದವರಲ್ಲಿ ಕವಿ ಹರಿಹರನ ಪಾತ್ರವು ನಿಸ್ಸಂಶಯ ಪೂರ್ವಕವಾಗಿ ಹಿರಿದಾದುದು. ಓತಪ್ರೋತವಾಗಿ ಹರಿವ ಭಾವನೆಗಳನ್ನು ಅಷ್ಟೇ ಅಡೆತಡೆಯಿಲ್ಲದೆ ನಿರರ್ಗಳವಾಗಿ ಜನರಿಗೆ ಮುಟ್ಟಿಸುವ ಸರಳ ರಗಳೆಯ ಜನಕನಾದ ಹರಿಹರನು ಕನ್ನಡ ನುಡಿಯ ಆಗಸದಲ್ಲಿ ಕಾಣಿಸಿಕೊಳ್ಳದಿದ್ದರೆ ಕನ್ನಡ ನುಡಿಯಲ್ಲಿ ಒಂದುಬಗೆಯ ಕೊರತೆ ಉಳಿಯದೆ ಇರುತ್ತಿರಲಿಲ್ಲ. ಅಷ್ಟೇ ಅಲ್ಲ, ಶರಣರ ಬದುಕುಗಳ ಚಿತ್ರಣ ಜನಮನದ ಹೃದಯ ಭಿತ್ತಿಯ ಮೇಲೆ ಅಷ್ಟಾಗಿ ಆಗುತ್ತಲಿರಲಿಲ್ಲ. ಈ ದೃಷ್ಟಿಯಿಂದ ಮಹಾಕವಿ ಹರೀಶ್ವರನ ಕಾಣಿಕೆ ಪ್ರಶಂಸನೀಯವಾದುದು. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದಾಗ ಅವನು ಬಸವಾದಿ ಶರಣರ ಕ್ರಾಂತಿಯ ಪ್ರಖರತೆಯನ್ನು, ಅದು ಉದ್ದೇಶಿಸಿದ್ದ ಗುರಿಯ ಮರ್ಮವನ್ನು ಅರಿತುಕೊಂಡೇ ಇಲ್ಲ ಎನ್ನಿಸದೆ ಇರದು. ಆದ್ದರಿಂದ ಹರಿಹರನು ಅರ್ಥ ಮಾಡಿಕೊಳ್ಳಲಾರದೆ, ಚಿತ್ರಿಸದೆ 'ಸೋತು ಹೋದ' ಕೆಲವು ಅಂಶಗಳನ್ನು ಎತ್ತಿ ತೋರಿಸುವುದಷ್ಟೇ ಪ್ರಸುತ್ತ ಲೇಖನದ ಉದ್ದೇಶವಾಗಿದೆ.

ಹರಿಹರ ಕವಿಯು ಶ್ರೇಷ್ಠಕವಿ ಎಂಬುದೊಂದು ಸತ್ಯಸಂಗತಿಯಾದರೂ ಅವನು ಕೆಲವು ವಿಷಯಗಳಲ್ಲಿ ಅಧಿಕೃತ ಕವಿಯಲ್ಲ. ಹೀಗೆ ಅಂದಾಗ ಅವನ ಅನೇಕ ಭಕ್ತರಿಗೆ ಎದೆಯಲ್ಲಿ ಅಲಗು ಹೊರಳಿದಂತೆ ಆಗದಿರದು. ಮಾನವನಲ್ಲಿ ಇರುವ ಮುಖ್ಯ ಮೂರು ಶಕ್ತಿಗಳೆಂದರೆ 1. ಕ್ರಿಯಾತ್ಮಕ, 2. ಭಾವಾತ್ಮಕ, 3. ಬೌದ್ಧಾತ್ಮಕ ಶಕ್ತಿಗಳು.

ಕೇವಲ ಕೆಲವರಲ್ಲಿ ಮಾತ್ರ ಮೂರೂ ಶಕ್ತಿಗಳ ವಿಕಾಸವಾಗಿ, ಅವರ ಜೀವನ-ಸಾಹಿತ್ಯಗಳಲ್ಲಿ ಕ್ರಿಯೆ-ಭಾವನೆ-ಬುದ್ಧಿ ಇವುಗಳೆಲ್ಲವೂ ಕೆಲಸ ಮಾಡುವುದನ್ನು ಕಾಣುತ್ತೇವೆ. ಆದರೆ ಕೆಲವರಲ್ಲಿ ಕೇವಲ ಕ್ರಿಯೆಯೋ, ಕೇವಲ ಭಾವನೆಯೋ, ಮತ್ತೆ ಕೆಲವರಲ್ಲಿ ಕೇವಲ ಬುದ್ಧಿಯೋ ಕಾರ್ಯ ಪ್ರವೃತ್ತವಾಗುವುದನ್ನು ನೋಡಬಹುದು. ಯಾವ ವ್ಯಕ್ತಿಯು ಭಾವನಾಪರವಾದಷ್ಟೇ ಸಹಜವಾಗಿ ವಿಚಾರವಂತಿಕೆಗೂ ಇಂಬುಗೊಡುತ್ತಾನೋ, ವಿಚಾರವಂತನಾದಷ್ಟೇ ಕ್ರಿಯೋನ್ಮುಖನೂ ಆಗುತ್ತಾನೋ ಅವನದು ಸರ್ವಾಂಗ ಪರಿಪೂರ್ಣ-(All round personality) ವ್ಯಕ್ತಿತ್ವವಾಗುತ್ತದೆ. ಉದಾಹರಣೆಗೆ: "ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಕೂಡಲಸಂಗಮದೇವಾ ನಿಮ್ಮ ಚರಣ ಕಮಲದೊಳಗಾನು ತುಂಬಿ" ಮೈಮರೆಯುವಾಗ (ಬ. ಷ. ವ. ೪೯೧), ಬಿರಿಮುಗ ಳಂದದಿ ಹೃದಯವು ದೇವನ ಶ್ರೀ ಚರಣದ ಮೇಲೆ ಬಿದ್ದು ಅರಳುವಾಗ (ಬ. ಷ. ವ. ೪೮೩), ಕೂಡಲಸಂಗಮದೇವನ ಉದರವ ಬಗಿದು ಹೋಗುವ ಭರವೆನಗೆ (ಬ. ಷ. ವ. ೪೮೬) ಎಂದು ಹಾಡುವಾಗ ಬಸವಣ್ಣನಲ್ಲಿ ನಮ್ಮ ಕಲ್ಪನೆಗೆ ಅತೀತವಾದ ಭಾವುಕತೆಯನ್ನು, ಆನಂದ-ಆವೇಶಗಳನ್ನು ಕಾಣುತ್ತೇವೆ. ಮಾನವನ ಭಾವನಾತ್ಮಕ ಶಕ್ತಿ (Power of feeling) ಇಷ್ಟೊಂದು ಮೈದೆರೆದು ಇನ್ನೆಲ್ಲೂ ಅರಳಲಾರದು ಎನ್ನಿಸುವುದಷ್ಟೇ.

ಅಷ್ಟೇ ಆಳದ ವಿಚಾರಶೀಲತೆಯನ್ನು 'ವೇದಕ್ಕೆ ಒರೆಯ ಕಟ್ಟಿ, ಶಾಸ್ತ್ರಕ್ಕೆ ನಿಗಳವನಿಕ್ಕಿ ಆಗಮದ ಮೂಗ ಕೊಯ್ಯುವಾಗ' (ಬ. ಷ. ವ. ೭೧೬), 'ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟುವ ದೈವಗಳನ್ನು ಅಲ್ಲಗಳೆದು ಸಹಜಭಾವ, ನಿಜೈಕ್ಯ ಕೂಡಲಸಂಗಮದೇವನೊಬ್ಬನೇ ದೇವ' (ಬ. ಷ. ವ. ೩೫೬), ಎಂದು ನುಡಿದು, 'ದೇವನಿಗೆ ಮಾತಾಪಿತರುಳ್ಳಡೆ ಹೇಳಿರೋ' (ಬ. ಷ. ವ. ೩೪೪) ಎಂದು ದೇವನ ಸ್ವರೂಪವನ್ನು ತಾರ್ಕಿಕವಾಗಿ, ತಾತ್ತ್ವಿಕವಾಗಿ ವಿವರಿಸುವಾಗ ಅತ್ಯಂತ ಪ್ರಖರ ವಿಚಾರಶೀಲತೆಯನ್ನು, ಮತ್ತು ಇಲ್ಲಿ ಮಾನವನ ಬೌದ್ಧಾತ್ಮಕ ಶಕ್ತಿ (Power of Thinking) ಸರ್ವತೋಮುಖವಾಗಿ ವಿಕಾಸಗೊಂಡಿರುವುದನ್ನು ಕಾಣುತ್ತೇವೆ.

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನು, ಮರಣವೇ ಮಹಾನವಮಿ, (ಬ. ಷ. ವ. ೯೯೮) ಎಲುದೋರಿದಡೆ, ನರಹರಿದಡೆ, ಕರುಳು ಕುಪ್ಪಳಿಸಿದೆಡೆಯೂ ಧೃತಿಗೆಡದೆ ಸಂಗಮನಿಗೆ ಶರಣೆನ್ನುವೆ' (ಬ. ಷ. ವ. ೯೯೧). ಗುರುಪೂಜೆಗೆಂದು ಆರಂಭವ, ಲಿಂಗಾರ್ಚನೆಗೆಂದು ಬೆವಹಾರವ, ಜಂಗಮದಾಸೋಹಕ್ಕೆಂದು ಪರಸೇವೆಯ ಕೈಗೊಳ್ಳುವಾಗ, (ಬ. ಷ. ವ. ೨೦೮) 'ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ. ಲೋಕವಿರೋಧಿ ಶರಣ ಆರಿಗಂಜುವನಲ್ಲ.' (ಬ. ಷ, ವ. ೭೩೪) 'ಆನೆಯ ಮೇಲೆ

ಹೋಹನ ಶ್ವಾನ ಕಚ್ಚಬಲ್ಲುದೆ? (ಬ. ಷ. ವ. ೭೫೨) ಎನ್ನುವಾಗ, ಬಸವಣ್ಣನ ಕ್ರಿಯಾಪ್ರಧಾನ ವ್ಯಕ್ತಿತ್ವವು ಸ್ಫುಟವಾಗಿ ಕಾಣುವುದು. ಇಲ್ಲಿ ಮಾನವನ ಕ್ರಿಯಾತ್ಮಕ ಶಕ್ತಿ (Power of Action) ಯು ಪರಮಾವಧಿಯ ಮಟ್ಟಕ್ಕೆ ವಿಕಾಸಗೊಂಡಿರುವುದನ್ನು ಕಾಣುತ್ತೇವೆ.

ಇಂತಹ ಬಹುಮುಖ ವ್ಯಕ್ತಿತ್ವವನ್ನು ಅಳವಡಿಸಿಕೊಂಡ ವ್ಯಕ್ತಿಗಳನ್ನು ಅರಿಯುವುದು ಬಹಳ ಕಷ್ಟಕರ. ಹೀಗಿರುವಾಗ, ಹರಿಹರ ಮಹಾಕವಿಯು ಕೇವಲ ಭಾವನಾ ಪ್ರಧಾನವಾದ ಭಕ್ತಿಕವಿ. ಅವನನ್ನು ನಾವು ಸಾಹಿತ್ಯದ ದೃಷ್ಟಿಯಿಂದ, ನಿರರ್ಗಳ ಶಬ್ದವಾಹಿನಿಯ ಶಬ್ದಸಾಮರ್ಥ್ಯ ದೃಷ್ಟಿಯಿಂದ ಶ್ರೇಷ್ಠನೆನ್ನಬಹುದೇ ವಿನಾ ವೈಚಾರಿಕ ಮಟ್ಟದಲ್ಲಿಯಾಗಲೀ, ಅಥವಾ ಐತಿಹಾಸಿಕ ಸಂಗತಿಗಳನ್ನು ಖಚಿತಪಡಿಸಿಕೊಂಡು ಬರೆಯುವ ನಿಷ್ಠೆಯ ದೃಷ್ಟಿಯಿಂದಲ್ಲ. ಭಕ್ತಿಪರವಶನಾದ ಅವನು ತನ್ನ ಕಲ್ಪನೆಗೆ, ಅಷ್ಟೇ ಸಲಿಲವಾಗಿ ಓಡುವ ಲೇಖನಿಗೆ ಆಹಾರವಾಗಿ ಓರ್ವ ವ್ಯಕ್ತಿಯೊದಗಿದರೆ ಸಾಕು, ಆ ಕೃತಿನಾಯಕನ ಬಗ್ಗೆ ಐತಿಹಾಸಿಕ ವಿಷಯಗಳನ್ನು ತಿಳಿದುಕೊಳ್ಳುವ ಗೋಜಿಗೆ ಅಷ್ಟಾಗಿ ಹೋಗದೆ, ಅವನ ಸಾಹಿತ್ಯದ ಆಳದ ಬಗ್ಗೆಯೂ ಚಿಂತಿಸಹೋಗದೆ ಆ ವ್ಯಕ್ತಿಯನ್ನು ಭಾವನಾಪರವಶನಾಗಿ ಚಿತ್ರಿಸಲು ಹೊರಡುವನು. ಈ ಆವೇಶ (ಅಥವಾ ಪರವಶತೆ) ಶರಣರ ಬದುಕನ್ನು ಒಮ್ಮೊಮ್ಮೆ ಮುಗಿಲ ಮಟ್ಟಕ್ಕೆ ಏರಿಸಿದರೂ ಇನ್ನೊಮ್ಮೆ ಪಾತಾಳಕ್ಕಿಳಿಸದಿರದು. ಒಂದು ಸಂದರ್ಭದಲ್ಲಿ ಕಥಾನಾಯಕನನ್ನು ವರ್ಣಮಯವಾಗಿ ಚಿತ್ರಿಸಿ ಜೀವಂತಿಕೆ ತುಂಬಿದರೂ, ಇನ್ನೊಮ್ಮೆ ಆ ವ್ಯಕ್ತಿಗಳ ಮೇಲೆ ಕಪ್ಪು ತೆರೆಯೊಂದನ್ನು ಹೊದ್ದಿಸಿ ಕರಾಳವಾಗಿ ಮಾಡುವುದು. ಇದಕ್ಕೆ ಅವಶ್ಯವಾದ ಉದಾಹರಣೆಗಳನ್ನು ಮುಂದೆ ಸಾಂದರ್ಭಿಕವಾಗಿ ಕೊಡುವೆನು.

ಹರಿಹರ– ಶಾಪದ ಕಲ್ಪನೆ

"ಹರಿಹರನು ಶಾಪದ ಕವಿ!" ಇದನ್ನು ಕೇಳಿದೊಡನೆಯೇ ಅಚ್ಚರಿ ನಿಮಗೆ. 'ಅಂತಹ ಮಹಾಕವಿಯನ್ನು ಕರೆಯುವ ರೀತಿಯೇ ಇದು? ತೋರುವ ಸೌಜನ್ಯವೇ ಇದು?' ಎಂದು ನನ್ನ ಬಗ್ಗೆ ಆಕ್ಷೇಪವೆ? ಇರಲಿ. ಕೈಲಾಸದ ವರ್ಣನೆ ಮತ್ತು ಶಿವನಿಂದ (ಅಥವಾ ಶಿವಗಣಂಗಳಿಂದಲೋ) ಶಾಪ ಬರದೆ ಹರಿಹರನ ಲೇಖನಿಯ ಗಾಡಿ ಮುಂದೆ ಓಡದು. ಯಾವ ಶರಣರು ತ್ರಿಮೂರ್ತಿಗಳನ್ನು ಅಲ್ಲಗಳೆದು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ದೇವರೆನ್ನದೆ, ನಿರಾಕಾರ ನಿರ್ಗುಣನಾದ ಪರಾತ್ಪರ ವಸ್ತುವಿಗೆ ಪರಶಿವ (Absolute Reality) ನೆಂದು ಕರೆದರೋ ಅಂತಹ ಶರಣರ ಬದುಕನ್ನು ಮರಳಿ ಕೈಲಾಸದ ಶಿವನಿಗೆ ಅಂಟಿಸಿ, ಅವನಿಂದ ಶಾಪ ಕೊಡಿಸಿ ಭುವಿಗಿಳಿಸುವುದು ದಶಾವತಾರದಲ್ಲಿ ಬೌದ್ಧಾವತಾರವನ್ನು (ಬೌದ್ಧಧರ್ಮದ ಆದಿಗುರು ಬುದ್ಧನನ್ನು)

ಸೇರಿಸುವ ಕೆಲವು ವಿದ್ವಾಂಸರ ಕೃತಿಯಂತೆ ವಿರೋಧಾಭಾಸ. (ಬುದ್ಧನು ಪ್ರಮುಖ ಹೋರಾಟ ಮಾಡಿದ್ದು ವರ್ಣಾಶ್ರಮ ವ್ಯವಸ್ಥೆಯ ವಿಷಮ ವಿಭಜನೆಯ ವಿರುದ್ಧ. ಅವನು ಕರ್ತನಾದ ಪರಮಾತ್ಮನ ಅಸ್ತಿತ್ವವನ್ನು ಮನ್ನಿಸದವನು; ಇಂಥವನನ್ನು ವರ್ಣಾಶ್ರಮ ವ್ಯವಸ್ಥೆಯ ರಕ್ಷಣೆಗೆ ಪ್ರಯತ್ನಿಸಿದ ಇತರ ಅವತಾರಗಳಲ್ಲಿ ಒಂದಾಗಿಸುವುದು ತುಂಬಾ ವಿರೋಧಾಭಾಸವಷ್ಟೇ ಅಲ್ಲ, ಅವನ ಕ್ರಾಂತಿಯ ತೀಕ್ಷ್ಣತೆಯನ್ನೇ ಸಪ್ಪೆಗೊಳಿಸಿದಂತಾಗುವುದು.)

ಒಬ್ಬ ದೈವೀ ಪುರುಷನ ಅಂದರೆ ಅಸಮಾನ್ಯ ಸಂದೇಶವನ್ನು ಸಾರಿದ ವ್ಯಕ್ತಿಯ ಹುಟ್ಟಿಗೆ ಕೈಲಾಸದ ಸೋಂಕು ಬಡಿಸಿದರೇ ತೃಪ್ತಿಯೇನೋ ಕೆಲವು ಕವಿಗಳಿಗೆ. ಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ ಇವರೆಲ್ಲರಿಗೂ ಶಾಪವನ್ನು ಕೊಡಿಸಿ ಧರೆಗಿಳಿಸುವ ಹರಿಹರನ ಕೃತಿಗೆ ಬಹುಶಃ ದಶಾವತಾರವೆತ್ತಿದ ವಿಷ್ಣುವಿಗೆ ಹಾಗೆ ಆಗಲು ಶಾಪವಿತ್ತ ಭೃಗುಋಷಿಯ ಘಟನೆ ಸ್ಫೂರ್ತಿ ನೀಡಿರಬೇಕು. ಆದರೆ ಈ ಕಲ್ಪನೆಯು ಶರಣರ ತತ್ತ್ವಕ್ಕೆ ವಿರೋಧವಾಗಿ ನಿಲ್ಲುವುದು. ಅವರು ಕೈಲಾಸವೆಂಬ ವಿಶಿಷ್ಟಲೋಕವನ್ನಾಗಲೀ ಅದನ್ನಾಳುವ ಶಿವನನ್ನು ದೇವನೆಂದಾಗಲಿ ಒಪ್ಪರು. ಶರಣರು ಶೈವ ಪರಂಪರೆಯ ಸಂಬಂಧವನ್ನು ಕತ್ತರಿಸಿ ನಿಂತು, ಶೈವ ಮತ್ತು ವೈದಿಕ ಎರಡರಿಂದಲೂ ಭಿನ್ನವಾದ ವಿಚಾರಧಾರೆಯೊಂದನ್ನು ನೀಡಬಯಸಿದ್ದರು. ಆದರೆ ಅವರ ಅಭಿಮಾನಿಗಳೂ, ಅನುಯಾಯಿಗಳೂ ಆದ ಅನೇಕರು ಇದನ್ನರಿಯಂದೆ ಮತ್ತೆಯೂ ಶೈವ ಮಾರ್ಗದ ಕಲ್ಪನೆಗಳಿಗೆ ಶರಣರ ಬದುಕನ್ನು ಎಳೆದೊಯ್ದಿರುವುದನ್ನು ಕಾಣುತ್ತೇವೆ.

(ಸಶೇಷ)

ಮಾತಿನ ಮಿಂಚು

ಜೀವನವು ಏನೆನು?
ಜೀವನವೊಂದು ಸವಾಲು (challange), ಸ್ವೀಕರಿಸುವವನಿಗೆ
ಇದೊಂದು ಆಟ, ಆಶಾವಾದಿಗೆ
ಜೀವನವೊಂದು ಶಿವ ಲೀಲೆ, ದೇವನಡಿಗೆ ಶರಣಾಗತನಾದವಂಗೆ
ಇದೊಂದು ಸಮರಾಂಗಣ, ಧೀರ ಸಾಧಕನಿಗೆ,
ಜೀವನವೊಂದು ನಂದನವನ, ಭಾವಕ ಜೀವಿಗೆ
ಅದೊಂದು ಮರುಭೂಮಿ, ಶುಷ್ಕ ಹೃದಯಿಗೆ
ಜೀವನವೊಂದು ಯೋಗ ಆದರ್ಶ ಜೀವಿಗೆ.

—ಮಾತೆ ಮಹಾದೇವಿ

ಕಾರ್ಯಕ್ರಮಗಳ ವಿವರ

೧. ಕೋಡೀಹಳ್ಳಿ

ದಿ. ೬-೩-೧೯೭೮ ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಕನಕಪುರ ತಾಲ್ಲೋಕು ಕೊಡೀಹಳ್ಳಿ ಗ್ರಾಮದ ಶ್ರೀ ಶಾರದಾ ಪ್ರೌಢಶಾಲೆಗೆ ಮುಖ್ಯ ಅತಿಥಿಗಳಾಗಿ ದಯಮಾಡಿಸಿ, ಸಮಗ್ರ ಶಿಕ್ಷಣದ ಬಗ್ಗೆ ಭಾಷಣ ಮಾಡಿ, ಶಾಲೆಯ ವಾರ್ಷಿಕ ಸಂಚಿಕೆ 'ಸನಂದ' ಬಿಡುಗಡೆ ಮಾಡಿದರು ಪೂಜ್ಯರನ್ನು ವೈಭವಯುತವಾದ ವೇದಿಕೆಗೆ ಕರೆತರಲಾಯಿತು.

೨. ಶಿವರಾತ್ರಿ ಕಾರ್ಯಕ್ರಮ :

ರಾಜಾಜಿನಗರ ಕಾರ್ಡ್‌ರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಶಿವರಾತ್ರಿಯ ವಿಶೇಷ ಕಾರ್ಯಕ್ರಮಗಳು ಜರುಗಿದವು. ಪೂಜ್ಯರಾದ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳ ಅಧ್ಯಕ್ಷತೆಯಲ್ಲಿ, ಪೂಜ್ಯರಾದ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯಸನ್ನಿಧಿಯಲ್ಲಿ ನಡೆದ ಜಾಗರಣೆಯಲ್ಲಿ. ಶರಣರಾದ ಗೊ. ರು. ಚನ್ನಬಸಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿ "ಶಿವರಾತ್ರಿಯ ಮಹತ್ವ ಮತ್ತು ಜಾಗರಣೆಯ ನಿಜಾರ್ಥದ ಬಗ್ಗೆ ಮಾತನಾಡಿದರು. ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯದ ವಿದ್ಯಾರ್ಥಿಗಳು "ಹುತಾತ್ಮ ಹರಳಯ್ಯ" ಎಂಬ ನಾಟಕವನ್ನು ಹೃದಯಂಗಮವಾಗಿ ಪ್ರದರ್ಶಿಸಿದರು. ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿ. ಸಾರೋ ಕಾಯಕ, ಕಾಲಜ್ಞಾನ ಕಾಯಕದ ಏಕಪಾತ್ರಾಭಿನಯ ಪ್ರದರ್ಶಿಸಲ್ಪಟ್ಟವು. ಅದೇ ವಿದ್ಯಾರ್ಥಿಗಳಿಂದ ಭಾಷಣಗಳು-ಪ್ರವಚನಗಳು ನಡೆದುವಲ್ಲದೆ, ರಾತ್ರಿ ಇಡೀ ಸಾಮೂಹಿಕ ಜಪ, ಮಂತ್ರಧ್ಯಾನ, ಭಜನೆಗಳು ನಡೆದವು. ಕರ್ನಾಟಕದ ಬೇರೆಬೇರೆ ಭಾಗಗಳಿಂದ ಸದ್ಭಕ್ತರು ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬೆಳಿಗ್ಗೆ 9 ರಿಂದ 11-00ರ ವರೆಗೆ ಸಾಮೂಹಿಕ ಲಿಂಗಪೂಜೆ, ಮಹಾಮಂಗಳಾರತಿ ನಡೆದುವು.

೩. ಶ್ರೀ ನಿರ್ವಾಣ ಭಗವತಿ ಸಪ್ತಾಹದಲ್ಲಿ

ಬೆಂಗಳೂರು ನಗರದ ಮನವರ್ತರ ಪೇಟೆಯಲ್ಲಿರುವ ನಿರ್ವಾಣ ಭಗವತಿ ಸಪ್ತಾಹದ ಎರಡನೆಯ ದಿನದಂದು ಪೂಜ್ಯ ಮಾತಾಜಿಯವರು ಅತಿಥಿಗಳಾಗಿ ದಯ ಮಾಡಿಸಿ, ದೇವರು-ಧರ್ಮಗಳ ಅವಶ್ಯಕತೆ ಬಗ್ಗೆ ಮನನೀಯವಾಗಿ ಮಾತನಾಡಿದರು.

೪. ಜಯನಗರದಲ್ಲಿ ಪ್ರವಚನ

ಗುರುವಾರ ದಿ. ೯-೩-೧೯೭೮ ರಿಂದ ಜಯನಗರ ಬಡಾವಣೆಯ ನಾಲ್ಕನೆಯ

ಬ್ಲಾಕು ಬಸ್‌ಸ್ಟಾಂಡಿನ ಬಳಿ ಇರುವ ಜಯನಗರ ಸಾಂಸ್ಕೃತಿಕ ಮತ್ತು ಪೌರ ಸಂಘದ ವಿಶಾಲ ಮೈದಾನದಲ್ಲಿ (ಬಿ. ಆರ್. ವಿ. ಇಂಜನಿಯರಿಂಗ್ ಕಾಲೇಜ್ ಹಾಸ್ಟೆಲ್ ಪಕ್ಕ) ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ವಿಶ್ವಧರ್ಮ ಪ್ರವಚನವು ಆರಂಭವಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಮೊದಲನೆಯ ದಿನ ಶರಣ ಗೊ.ರು. ಚನ್ನಬಸಪ್ಪನವರು ಮತ್ತು ಎರಡನೆಯ ದಿನ ಕೆ. ಆರ್. ಲಿಂಗಪ್ಪನವರು ಭಾಷಣ ಮಾಡಿದರು. ಪ್ರವಚನ ಕಾರ್ಯಕ್ರಮ 6-4-78ರಂದು ಮಂಗಲವಾಗಲಿದೆ.

೫. ಮಾತಾಜಿಯವರ ಜನ್ಮದಿನೋತ್ಸವ

ಪೂಜ್ಯ ಮಾತಾಜಿಯವರ ೩೩ನೆಯ ಜನ್ಮ ದಿನೋತ್ಸವವನ್ನು ೧೩-೩-೭೮ ರಂದು ಆಚರಿಸಲಾಯಿತು. ಬೆಳಿಗ್ಗೆ 9 ಗಂಟೆಗೆ ಗುರುಪಾದಪೂಜಾ ಕಾರ್ಯಕ್ರಮವನ್ನು ನೆರವೇರಿಸಿದ ಬಳಿಕ ಸಾಮೂಹಿಕ ಪ್ರಾರ್ಥನೆ ಜರುಗಿತು. ಸದ್ಭಕ್ತರು ಹುಟ್ಟುಹಬ್ಬದ ಕಾಣಿಕೆಯನ್ನು ಸಮರ್ಪಿಸಿದ ನಂತರ ಪೂಜ್ಯ ಮಾತೆಯವರ ಬಗ್ಗೆ ಭಾಷಣಗಳಾದುವು. ಅಕ್ಕಮಹಾದೇವಿ ಶಿಶುವಿಹಾರದ ಉದ್ಘಾಟನೆಯೂ ಜರುಗಿತು. ಪೂಜ್ಯರಾದ ಸದ್ಗುರು ಲಿಂಗಾನಂದ ಸ್ವಾಮಿಗಳು ಶಿಶುವಿಹಾರದ ಬೋರ್ಡನ್ನು ಅನಾವರಣ ಮಾಡಿದರು. ಆಂಗ್ಲ ಮತ್ತು ಕನ್ನಡ ಮಾಧ್ಯಮಗಳೆರಡರಲ್ಲೂ ತರಗತಿಗಳು ಆರಂಭವಾದವು. ಸಮಾವೇಶವಾಗಿದ್ದ ಮಕ್ಕಳು, ತಾಯಿ-ತಂದೆಯರು, ಪಾಲಕರು ಎಲ್ಲರಿಗೆ ಜನ್ಮದಿನೋತ್ಸವದ ಸಿಹಿಯಾಗಿ ಲಾಡು ಹಂಚಲಾಯಿತು. ಶ್ರೀ ಬಸವೇಶ್ವರರ ಮಹಾ ಮಂಗಲಾರತಿಯೊಡನೆ ಕಾರ್ಯಕ್ರಮ ಪೂರ್ಣಗೊಂಡಿತು. ಸಂಜೆ ಜಯನಗರದಲ್ಲಿ ನಡೆಯುತ್ತಿರುವ ಸಾರ್ವಜನಿಕ ಸಮಾರಂಭದಲ್ಲಿಯೂ ಜನ್ಮದಿನೋತ್ಸವ ಆಚರಿಸಲಾಯಿತು.

ವರದಿ: **ಶಿವರಾಯ ಚಂದ್ರಕಂಠಿ.**

ಬಸವ ಗಂಗೋತ್ರಿ

ಅತ್ಯಂತ ಸುಂದರವಾದ, ಪ್ರಶಾಂತ ಜಾಗದಲ್ಲಿ ವಿಶ್ವಕಲ್ಯಾಣ ಮಿಷನ್ ನಿರ್ಮಿಸಲಿರುವ "ಬಸವ ಗಂಗೋತ್ರಿ" ನಿವೇಶನದಲ್ಲಿ ರೂಪುಗೊಳ್ಳುವ ವಸತಿ ಸಹಿತ ಪ್ರೌಢಶಾಲೆ ಅಭಿವೃದ್ಧಿಗೆ ಧನಸಹಾಯ ಸಲ್ಲಿಸಿದವರು :

1.	ಡಾ॥ ಲಲಿತಾ ಗುರುಬಸವಯ್ಯ	5001	00
2.	ಶ್ರೀ ಸರ್ಪಭೂಷಣ, ಚನ್ನಪಟ್ಟಣ	2001	00
3.	ಶ್ರೀಮತಿ ತಾಯಮ್ಮ ರುದ್ರಪ್ಪ	2001	00
4.	ಶ್ರೀಮತಿ ಲಲಿತಾ ಮೋಹನ, ಬೆಂಗಳೂರು	1001	00
5.	ಶ್ರೀಮತಿ ಮಲ್ಲಮ್ಮ ಗೊ.ರು. ಚನ್ನಬಸಪ್ಪ	1001	00

ಕಲ್ಯಾಣ ಕಿರಣ

ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ

ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು:

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ

ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ.

ಬೆಂಗಳೂರು–೫೬೦೦೧೦

ಕಲೆ :

ಬಿ. ಪಿ. ಕೃಷ್ಣಯ್ಯ

ಮುದ್ರಣ : ಸೂಪರ್ ಪ್ರಿಂಟರ್ಸ್,

ಬೆಂಗಳೂರು–೫೬೦೦೫೩.

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು:

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತಬದ[illegible]ವಣೆ ಮಾಡಿಕೊಳ್ಳುವ ಅಧಿಕಾ[illegible] ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ವಿಶ್ವ ಕಲ್ಯಾಣ ಮಿಷನ್ನಿನ

ಸುವಿಧಾನ ಸುಗ್ರಂಥ ಮಾಲೆಯ ಲಭ್ಯವಿರುವ ಗ್ರಂಥಗಳು

		ರೂ. ಪೈ.
ದೇವಪೂಜಾ ವಿಧಾನ	ಸ್ವಾಮಿ ಲಿಂಗಾನಂದ	೨-೫೦
ವಿರಹ ತರಂಗ	ಮಾತೆ ಮಹಾದೇವಿ	೩-೦೦
ಬಸವ ತತ್ತ್ವ ದರ್ಶನ	,,	೧೮-೦೦
ಚಿನ್ಮೂಲಾದ್ರಿಯ ಚಿತ್ಕಳೆ	ಸ್ವಾಮಿ ಲಿಂಗಾನಂದ	೬-೦೦
ಸಾಮೂಹಿಕ ಪ್ರಾರ್ಥನೆ	ಸಂ : ಮಾತೆ ಮಹಾದೇವಿ	೦-೫೦
ಹಿಂದು ಯಾರು ?	,,	೦-೫೦
ಬಸವ ವಚನ ಸುಧಾ	ಸಂ : ಮಾತೆ ಮಹಾದೇವಿ	೨-೦೦
ವಚನಾಮೃತ	ಸ್ವಾಮಿ ಲಿಂಗನಂದ	೨-೦೦
ಕಲ್ಯಾಣ ಕ್ರಾಂತಿ	ಮಾತೆ ಮಹಾದೇವಿ	೩-೫೦
ದೇವರ ಮಕ್ಕಳು	,,	೨-೫೦
ಪತಿತೋದ್ಧಾರಕ	,,	೧-೫೦
ಲಿಂಗಾಯತ ಧರ್ಮ ಕೈಪಿಡಿ	,,	೨-೫೦
[illegible]ಗಾಯತ ಧರ್ಮ ಸಂಸ್ಥಾಪಕರಾರು ?	ಬಿ. ಸಿ. ಜವಳಿ	೪-೦೦
[illegible]ವಣ್ಣನವರ ವಚನ ಪದ ಪ್ರಯೋಗ ಕೋಶ	ಎಸ್. ಆರ್. ಗುಂಜಾಳ	೫೦-೦೦
ದೇವನಡೆಗೆ	ಮಾತೆ ಮಹಾದೇವಿ	೧-೦೦
ಹೆಪ್ಪಿಟ್ಟ ಹಾಲು (ಸಾ. ಕಾದಂಬರಿ)	,,	೧೬-೦೦
ಅನುಭವ ಮಂಟಪ	,,	೧-೦೦
Revolution in Kalyana	Mate Mahadevi	೫-೦೦
A Guide to Lingayatism	,,	೬-೦೦
Emblem of God	Swami Linganananda	೬-೦೦
ಅಧ್ಯಾತ್ಮ ಮತ್ತು ಮಹಿಳೆ	ಮಾತೆ ಮಹಾದೇವಿ	೧-೦೦
ತರಂಗಿಣಿ (ಅಕ್ಕಮಹಾದೇವಿಯ ಕಾದಂಬರಿ)	,,	೩೩-೦೦
ವಿಶ್ವ ವಿಭೂತಿ ಬಸವಣ್ಣ	,,	೪-೦೦
Lingayatism	,,	೩-೦೦
ವಿಶ್ವಕಲ್ಯಾಣ ಗೀತೆ	ಸಂ : ,,	೩-೦೦
ಮಾತೃ ಹರಕೆ	,,	೩-೦೦
Mataji A Profile	ಶಿವರಾಯ ಚಂದ್ರಕಂಠಿ	೦-೫೦
ವಿಶ್ವಕಲ್ಯಾಣ ಮಿಷನ್ ಪರಿಚಯ	ಗೊ. ರು. ಚ.	೦-೫೦
ಧರ್ಮಕ್ರಾಂತಿಯ ದಿವ್ಯ ಜ್ಯೋತಿ		೦-೫೦
[illegible]ಣ್ಣ, ಅಕ್ಕಮಹಾದೇವಿ, ಗುರೂಜಿ, ಮಾತಾಜಿಯವರ ಭಾವಚಿತ್ರಗಳು ಪ್ರತಿಯೊಂದಕ್ಕೆ		೧-೫೦
[illegible]ಯತ ಯಾರು ? (೦-೨೫) ವಿಶ್ವ ವಿಭೂತಿ ಬಸವಣ್ಣ (ಚಾರ್ಟ್)		೦-೫೦

" ಹುತಾತ್ಮ ಹರಳಯ್ಯ " ನಾಟಕದ ಒಂದು ದೃಶ್ಯ
ಪ್ರದರ್ಶಕರು [illegible] ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯದ ವಿದ್ಯಾರ್ಥಿಗಳು

Phone : 82335

Correspond to :

BASAVA MANTAPA
No. 24. Chord Road, II Block, Rajajinagar
Bangalore-560010